ಬೆಲೆ : 4 ರೂ.

ಕಲ್ಯಾಣ ಕಿರಣ

ಡಿಸೆಂಬರ್
1995



ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು
ಲಿಂಗಾನಂದ ಮಹಾಸ್ವಾಮಿಗಳು

ಕಲ್ಯಾಣ ಕಿರಣ

ಮಾಸಪತ್ರಿಕೆ, Dec–95, Jan–96 ಬಿಡಿ ಸಂಚಿಕೆ 4.00 ರೂ.

ಸಂಪುಟ : 25 ಸಂಚಿಕೆ : 5 ಬಸವ ಶಕೆ : 862.

ವಾರ್ಷಿಕ ಚಂದಾ : 40 ರೂ. ಆಜೀವ ಸದಸ್ಯತ್ವ : 400 ರೂ.

ಕಿರಣಗನ್ನಡಿ

KALYANA KIRANA–Monthly Magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560074. Ph : 8437234

ಲಿಂ|| ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳಿಗೆ ನಮನ

ಜೈ ಗುರುವೆ ಜೈ ಗುರುವೆ
ಲಿಂಗಾನಂದ ಗುರು ಜೈ ಜೈ ||ಪಲ್ಲವಿ||

ಹಾಡಿದೆವು ಅಂದು ಸಂತೋಷದಿಂದ
ಶರಣರ ಬಳಗಕ್ಕೆ -ಪರಮಾನಂದ
ಬಸವ ಧರ್ಮದ ಪೀಠ ಏರುತ್ತಲಂದು
ತಂದಿರೆಲ್ಲರಿಗೂ ಚಂದದಾನಂದ || ಜೈ ಗುರುವೆ||

ಶರಣೆ ಕಲ್ಲಮ್ಮ ಮಲ್ಲಪ್ಪರ ಒಡಲಲ್ಲಿ
ಜನಿಸಿದಿರಿ ನೀವು ಮಣಿಗವಳ್ಳಿಯಲಿ
ಸಂಗಮೇಶನೆಂಬ ನಾಮವ ತಳೆದು
ಬೆಳೆದಿರಿ ಬಸವನ ಚಿತ್ಕಿರಣವಾಗಿ ||೧||

ಬಲ್ಲಿದ ಬಸವನ ಹೆಸರನು ಉಳಿಸಲು
ವಚನ ವಾಙ್ಮಯದ ಸೌರಭವ ಹರಡಲು
ಸಂಚರಿಸಿ ನೀವು ದಿವ್ಯ ಜಂಗಮವಾಗಿ
ಶರಣರ ಧರ್ಮದ ಮಹಿಮೆ ಬೀರಿದ ಯೋಗಿ ||೨||

ಅನುಭವ ಮಂಟಪಕೆ ಅಕ್ಕ ಮಹಾದೇವಿ
ಬಸವ ಮಂಟಪಕಿಂದು ಮಾತೆ ಮಹಾದೇವಿ
ಮೂಡಿ ನಿಂತಿತ್ತು ಆ ಬಸವ ಕಲ್ಯಾಣ
ಕೂಡಲ ಸಂಗಮವಾಯ್ತು ನವ ಕಲ್ಯಾಣ ||೩||

ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ಠಾವು
ನಾವೆಲ್ಲ ಕೂಡಿ ಜಯಘೋಷ ಮಾಡಿ
ನಲಿದೆವು ತಮ್ಮನ್ನು ಹಾಡಿ ಕೊಂಡಾಡಿ ||೪||

- ಅನ್ನಪೂರ್ಣ ಮನ್ನಾಪುರ
ಧಾರವಾಡ

||ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಒಂಭತ್ತನೆಯ

ಶರಣ ಮೇಳ

1996ನೆಯ ಜನವರಿ 12,13,14 ಮತ್ತು 15 ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ, ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ತ್ವಗಳಲ್ಲಿ, ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲಸಂಗಮದಲ್ಲಿ 1988ನೆಯ ಇಸವಿ ಜನವರಿ 14, 15,16ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಒಂಭತ್ತನೆಯ ಶರಣ ಮೇಳವು 1996ನೇ ಇಸವಿಯ ಜನವರಿ 12, 13, 14 ಮತ್ತು 15ರಂದು ಏರ್ಪಾಟಾಗಲಿದೆ. ಹಲವಾರು ಪ್ರಮುಖ ಮಠಾಧೀಶರು, ಪ್ರವಚನಕಾರರು, ಗಣ್ಯರು, ಸಾಹಿತಿಗಳು ಭಾಗವಹಿಸಿ ಉಪನ್ಯಾಸ ಮಾಡುವರು. ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ ಧರ್ಮಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣಜೀವಾಳ

ಬೆಂಗಳೂರು ವಿಳಾಸ:
ಬಸವ ಮಂಟಪ, 2035,
2ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-560 010
ದೂರವಾಣಿ : 3325335

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587 115.
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ: STD 08351-74-838

ಶರಣ ಮೇಳ

ಯಾರಿಂದ, ಯಾರಿಗಾಗಿ, ಯಾರದ್ದು?

೧. ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ, ಕೂಡಲ ಸಂಗಮದೇವಾ!

೨. ಕರ್ಮವೆಂಬ ಅಂಕದೊಡನೆ ತೊಡರಿದೆ;
ಬಿನ್ನಪವ ಅವಧಾರು! ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ, ಕೆಡಹುವೆನಂಕವ
ನಡುವೆ ಓಸರಿಸಿದೊಡೆ ನಿಮ್ಮಾಳಲ್ಲ!
ಶಿವ ಶರಣೆಂಬ ದಂಡೆಯ ಹೂಡಿ
ಗಣ ಮೇಳಾಪವೆಂಬ ಅಲಗಿನಿಂದಿರಿವೆ, ಕೂಡಲ ಸಂಗಮದೇವಾ!

೩. ಶ್ರೀ ವಿಭೂತಿಯ ಪೂಸದವರ
ಶ್ರೀ ರುದ್ರಾಕ್ಷಿಯ ಧರಿಸದವರ
ನಿತ್ಯ ಲಿಂಗಾರ್ಚನೆಯ ಮಾಡದವರ
ಜಂಗಮವೇ ಲಿಂಗವೆಂದರಿಯದವರ
ಸದ್ಭಕ್ತರ ಸಂಗದಲ್ಲಿ ಇರದವರ
ಎನಗೊಮ್ಮೆ ತೋರದಿರಯ್ಯಾ ಕೂಡಲ ಸಂಗಮದೇವಾ,
ಸೆರೆಗೊಡ್ಡಿ ಬೇಡುವೆ!

ಶರಣ ಬಂಧುಗಳೇ,

ಗಣ ಧರ್ಮವನ್ನು ಬೋಧೆ ಮಾಡಿದ ಧರ್ಮಪಿತ ಬಸವಣ್ಣನವರು ಧರ್ಮದ ಗುರಿ ಕೇವಲ ಸಂಸ್ಕಾರವೊಂದೇ ಅಲ್ಲ ಸಮಾಜ ನಿರ್ಮಾಣ, ಸಮಾಜ ಸಂಘಟನೆ ಕೂಡ ಎಂದು ಮನಗಂಡು ಭಕ್ತಿ ಪಕ್ಷ, ಅದರಲ್ಲಿ ನಡೆಯುವ ಗಣಮೇಳಾಪಕ್ಕೆ ಬಹುಮುಖ್ಯ ಸ್ಥಾನಕೊಟ್ಟರು. ಅಷ್ಟಾವರಣ ಧಾರಣೆಯಷ್ಟೇ ಶರಣರ ಸಂಗದಲ್ಲಿ ಒಡನಾಡುವುದು ಅತ್ಯಂತ ಮುಖ್ಯ ಎಂದು ಘೋಷಿಸಿದರು.

ಧರ್ಮಕರ್ತ ಬಸವ ತಂದೆಯವರ ಅಂತರಂಗದ ಆಶಯ ಅವರ ಆತ್ಮಕಥೆ, ದಿನಚರಿಯಂತೆ ಬರೆಯಲ್ಪಟ್ಟ ವಚನಗಳ ಮೂಲಕ ಅಭಿವ್ಯಕ್ತವಾಗಿರುವ ಆದೇಶವನ್ನು ಗ್ರಹಿಸಿಕೊಳ್ಳಲು ಆಗದೆ 800 ವರ್ಷ ಅಂಧಕಾರದಲ್ಲಿ ಇದ್ದುದಾಗಿದೆ. ಆ ಕತ್ತಲೆಯ ಕೂಪದಿಂದ ಹೊರಬಂದು ಈಗ ತಾನೆ ಕಣ್ಣು ತೆರೆಯುತ್ತಿದ್ದೇವೆ. ಆದ್ದರಿಂದ ದೇವನಿಗೆ ಶರಣಾಗಿ ಬಸವ ಗುರುವಿನ ಕಾರಣಿಕತ್ವದಲ್ಲಿ ನಂಬಿಕೆ ಇಟ್ಟ ಎಲ್ಲರೂ ಇದೀಗ ಭಕ್ತಿಪಕ್ಷವಾಗಿ ಒಟ್ಟಾಗಬೇಕಾಗಿದೆ, ಗಣ ಮೇಳಾಪವನ್ನು ನಡೆಸಬೇಕಾಗಿದೆ. ಇದೇ ಉದ್ದೇಶದಿಂದ ಹುಟ್ಟಿದ್ದು ಶರಣ ಮೇಳ.

ಶರಣ ಮೇಳ - ನಿಮ್ಮ ಮೇಳ

ಇದು ಶರಣರ ಮೇಳ, ಶರಣರಿಂದ ಶರಣರಿಗಾಗಿ ಶರಣರೇ ನಡೆಸುವ ಧಾರ್ಮಿಕ ಸಮಾವೇಶ. ಆದ್ದರಿಂದ ಇದರಲ್ಲಿ ನಿಮ್ಮೆಲ್ಲರ ಪಾಲುದಾರಿಕೆ, ಭಾಗೀದಾರತ್ವವಿದೆ. ಶರಣ ಮೇಳ ಜಾತ್ರೆಯಲ್ಲ, ಸಂತೆಯಲ್ಲ, ಜನರು ದುಡು ದುಡು ಬಂದು ದಡದಡ ಓಡುವ ಜಾತ್ರೆಯಲ್ಲ, ಬಸವ ಮಾರ್ಗಕ್ಕೆ ವ್ಯಕ್ತಿಯನ್ನು ಅಣಿಗೊಳಿಸುವ ಕಾರ್ಯಾಗಾರ. ಭಾರತೀಯರು, ಮುಖ್ಯವಾಗಿ ಹಿಂದುಗಳು ಉತ್ಸವ ಪ್ರಿಯರು, ತತ್ತ್ವ ಪ್ರಿಯರಲ್ಲ. ಗುಡಿ -ಗುಂಡಾರ, ತೀರ್ಥ-ಯಾತ್ರೆ, ಪ್ರವಾಸ ಕೈಗೊಳ್ಳುವರಾದರೂ ಹೋದಾಗ ಹೇಗಿರುವರೋ ಬರುವಾಗಲೂ ಹಾಗೆಯೇ ಇರುವರು. ಶರಣಮೇಳ' ಅಂಥ ಒಂದು ಯಾಂತ್ರಿಕ ಸಮಾವೇಶವಾಗಬಾರದು. ಬೆಳೆಯುವ ಭೂಮಿಯಲ್ಲಿರುವ ಪ್ರಳಯಾಂತಕ ಕಸವನ್ನು ತೆಗೆದು ಸಸಿಯು ಸುಳಿದೆಗೆದು ಬೆಳೆವಂತೆ ಮಾಡು' ಎಂದು ಧರ್ಮಕರ್ತರು ದೇವರಲ್ಲಿ ಬೇಡುವಂತೆ, ಶರಣ ಮೇಳದ ನಾಲ್ಕು ದಿನದ ಕಮ್ಮಟದಲ್ಲಿ ಭಾಗಿಗಳಾದವರು ಹೊಸ ಚೈತನ್ಯ, ಹೊಸ ವ್ಯಕ್ತಿತ್ವ ಪಡೆದು ಹೋಗುವಂತಾಗ ಬೇಕು.

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು

ಬಸವ ಧರ್ಮದ ಕಿರಣಗಳಾಗಿ ಎಲ್ಲರೂ ಸಾಗಬೇಕು, ಪುನಃ ಆ ಬೆಳಕನ್ನು ಹಬ್ಬಿಸುತ್ತಾ ಹೋಗಬೇಕು.

ಶರಣ ಮೇಳವು ಒಂದು ತತ್ತ್ವದ ಸೂತ್ರ ಹಿಡಿದು, ಎಲ್ಲರನ್ನೂ ಬಂಧಿಸುವ, ಬೆಸೆಯುವ ಸಾಧನವಾಗಬೇಕು. ಜಾತ್ರೆಯಲ್ಲಿ ಸೇರುವಂತೆ ಭಿನ್ನಭಿನ್ನ ವಿಚಾರದವರು ಒಂದು ಕಡೆ ಸೇರಿ, ಮತ್ತೆ ಚದುರಿದರೆ ಸಾಲದು. ನ್ಯೂಕ್ಲಿಯಸ್ಸಾಗಿ ಬಸವ ಗುರುವನ್ನು ಇರಿಸಿಕೊಂಡು, ಅದರ ಸುತ್ತಲೂ ಬೆಳೆಯುತ್ತಾ ಬಲಗೊಳ್ಳುತ್ತಾ ಹೋಗಬೇಕು. ಅದು ನಿಜವಾದ ಬೆಳವಣಿಗೆ. ಅದರಲ್ಲಿ ಸಂಘಟನೆ ಮತ್ತು ಸಂಘಟನೆಯ ಪ್ರತಿಫಲವಾಗಿ ಅದಮ್ಯ ಶಕ್ತಿ ಸಂಚಯವಾಗುತ್ತದೆ.

ಯಾರಿಗಾಗಿ ಬರಬೇಕು?

ಯಾವ ವ್ಯಕ್ತಿಗಾಗಿಯೂ ಅಲ್ಲ, ಒಂದು ತತ್ತ್ವಕ್ಕಾಗಿ ನೀವೆಲ್ಲರೂ ಬರಬೇಕು. ಅಪ್ಪ ಬಸವಣ್ಣನ ಕರುಳ ಕರೆಗೆ ಓಗೊಟ್ಟು ಬರಬೇಕು. ಶರಣರ ತ್ಯಾಗವನ್ನು ಸ್ಮರಿಸಿಕೊಂಡು ನಿಮ್ಮ ಹೃದಯ ಮಿಡಿದು ಬರಬೇಕು. ಇದು ಎಂದೋ ಆಗಬೇಕಿತ್ತು. ಈಗ ಆಗಿದೆ, ಆಗುತ್ತಿದೆ. ಆದಿ ಶರಣರು ಧರ್ಮಕರ್ತರು ಕಲ್ಯಾಣದಿಂದ ನಿರ್ಗಮಿಸಿದ 770 ವರ್ಷಗಳ ನಂತರ, 13 ಬಾರಿಗೆ ಆನಂದ ನಾಮ ಸಂವತ್ಸರ ಸರಿದು ಹೋದ ಮೇಲೆ ಬರುವುದಾಗಿ ಏಕೆ ಸಂಕಲ್ಪಿಸಿದರೋ ಗೊತ್ತಿಲ್ಲ. ಆ ಕಾಲವೀಗ ಕೂಡಿ ಬಂದಿದೆ. ಆದ್ದರಿಂದ ಬಸವಾದಿ ಪ್ರಮಥರ ಕರುಳಿನ ಕರೆ ನಿಮ್ಮನ್ನೀಗ ತಟ್ಟಿ, ಎಬ್ಬಿಸಿ, ಕರೆತರಬೇಕಾಗಿದೆ. ಒಂದು ಆನೆ ಬಿದ್ದರೆ ಅದನ್ನು ಎತ್ತಲು ಎಂಥ ದೊಡ್ಡ ಕ್ರೇನ್ ಬೇಕು; ಅದೇ ಆನೆಯಲ್ಲಿ ಚೈತನ್ಯಶಕ್ತಿ ಇದ್ದರೆ ಎಷ್ಟು ಸುಲಭವಾಗಿ ಎದ್ದು ನಿಲ್ಲಬಲ್ಲದು, ಓಡಬಲ್ಲದು ಹಾಗೆಯೇ ಬಸವ ತತ್ತ್ವಾನುಯಾಯಿಗಳ ಲಿಂಗಾಯಿತ ಸಮಾಜವು ಈಗ ರೋಗಗ್ರಸ್ತವಾಗಿ ಬಿದ್ದಿರುವ ಆನೆಯ ದೇಹದಂತಿದೆ. ಅದರೊಳಗೆ ಧಾರ್ಮಿಕ ಸತ್ವ, ತತ್ತ್ವ ನಿಷ್ಠೆ, ಧರ್ಮಗುರು ಶ್ರದ್ಧೆ ಮುಂತಾದವು ಮೈಗೂಡಿದರೆ ಅದು ಅಸೀಮ ಬಲದಿಂದ ಎದ್ದು ನಿಲ್ಲುವುದು. ಆದ್ದರಿಂದ ಧಾರ್ಮಿಕ ಶ್ರದ್ಧೆ - ತತ್ತ್ವ ನಿಷ್ಠೆ ನಿಮ್ಮಲ್ಲಿ ಪುಟಿದೇಳಬೇಕು.

ಮಲಮಕ್ಕಳು

ಇಂದು ಈ ದೇಶ ಬ್ರಹ್ಮದೇಶ; ಮೂಲತಃ ಪಶುಪತಿ ನಾಥ, ಶಿವನ ಸಂತತಿಯಾಗಿ ಈ ನೆಲದ ಮಕ್ಕಳು ಜನಿಸಿದರೂ ಕಾಲಾನಂತರ ಪರಕೀಯ ಸಂಸ್ಕೃತಿಯ ದಬ್ಬಾಳಿಕೆಗೆ ಒಳಗಾಗಿ ಅವರು ದುರ್ಬಲರಾದರು. ವೈದಿಕ ಧರ್ಮ ಇನ್ನಿತರ ಎಲ್ಲ ಧರ್ಮ -ಸಂಸ್ಕೃತಿಗಳನ್ನು ತುಳಿದು ಆಳುತ್ತಿದೆ. ಪ್ರಸಾರ ಮಾಧ್ಯಮಗಳೆಲ್ಲ ಕೆಲವೇ ಕೆಲವರ ಹಿಡಿತದಲ್ಲಿವೆ. ಧ್ರುವ ಹಿರಿಯ ಹೆಂಡತಿಯ ಮಗ; ಅಪ್ಪನು ಕಿರಿಯ ಹೆಂಡತಿಯ ಕೈಗೊಂಬೆ. ಆಗ ಪ್ರೀತಿಯಿಂದ ಬಂದು ಅಪ್ಪನ ತೊಡೆಯ ಮೇಲೆ ಕುಳಿತ ಮಗನನ್ನು, ಮಲತಾಯಿ ಬಂದು ಕೆಳಗಿಳಿಸಿದಳು. ಅದೇ ರೀತಿ ಇಂದು ವೈದಿಕ ಸಂಸ್ಕೃತಿ ಎಂಬ ಮಲತಾಯಿ ವೈದಿಕೇತರ ಎಲ್ಲ ಸಂಸ್ಕೃತಿಗಳನ್ನು ಬದಿಗೆ ಒತ್ತುತ್ತಿದೆ. ಇದನ್ನರಿಯುವ ಬುದ್ಧಿಯಾಗಲೀ, ಪ್ರತಿಭಟಿಸುವ ತಾಕತ್ತಾಗಲಿ ಅಸಂಘಟಿತ ಸಮಾಜಗಳಿಗಿಲ್ಲ. ಭಾರತ ದೇಶವು ತನ್ನ ದೋಷವನ್ನು ಕಳೆದುಕೊಂಡು ಸರ್ವಾಂಗೀಣವಾಗಿ ಬೆಳೆಯಬೇಕೆಂದು ಶ್ರಮಿಸಿದ ಪ್ರಗತಿಪರ ಚಿಂತಕ, ಸಮಾಜ ಸುಧಾರಕ ಬಸವಣ್ಣನಂತಹವರ ಪ್ರಗತಿಪರ, ಪ್ರಖರ ವಿಚಾರಗಳು ಬೆಳಕಿಗೆ ಬರಬಾರದು, ಪ್ರಚಾರಗೊಳ್ಳಬಾರದು ಎಂದು ಬಯಸುವ ಪುರೋಹಿತಶಾಹಿ ಬಹು ಶಕ್ತಿಶಾಲಿಯಾಗಿದೆ. ಶ್ರೀ ಸಾಮಾನ್ಯನ ಹಿತ ಸಂರಕ್ಷಿಸುವ, ಅವನ ಹಕ್ಕುಗಳಿಗಾಗಿ ಹೋರಾಡುವ ಬಸವ ಧರ್ಮಕ್ಕೆ ತನ್ನ ಹುಟ್ಟಿನಿಂದ ಈವರೆಗೂ ರಾಜಾಶ್ರಯ ಸಿಗಲಿಲ್ಲ. ಮಾಡಬಾರದ ಕುಕರ್ಮಗಳನ್ನು ಮಾಡಿದರೂ ರಾಜನನ್ನು ಭೂ

ಲೋಕದ ದೇವತೆ ಎಂದು ಹೊಗಳುವ ಜನರಿಗೆ, ಅಂಥ ವಾದಸರಣಿಗೆ ಸಿಕ್ಕ ಪ್ರೋತ್ಸಾಹ "ಜಂಗಮವೇ ಲಿಂಗ, ಅಂದರೆ ಮಾನವನ ಆತ್ಮವೇ ಮಹಾದೇವನ ಚೈತನ್ಯ" ಎಂದು ಶ್ರೀಸಾಮಾನ್ಯನ ಉದ್ಧಾರಕ್ಕೆ ಟೊಂಕಕಟ್ಟಿ ನಿಂತ ಬಸವಣ್ಣನ ಧರ್ಮಕ್ಕೆ ಸಿಗಲಿಲ್ಲ. ಆದರೆ ಎಂತೆಂತಹ ಸಂಕಷ್ಟಗಳ ಮಧ್ಯದಲ್ಲಿಯೂ ಬಸವ-ಶಿಶುವಾದ ಲಿಂಗಾಯತ ಧರ್ಮವು ಬದುಕಿ ಬಂದಿದೆ; ಈಗ ದಷ್ಟಪುಷ್ಟವಾಗಿ ಬೆಳೆಯಬೇಕಾಗಿದೆ. ಅದು ಹುಟ್ಟಿದಾಗಿನಿಂದಲೂ ಪೋಷಿಸಿ, ಅದರ ಧಾರ್ಮಿಕ ಸಂವಿಧಾನಕ್ಕೆ ಸಂಕಷ್ಟ ಬಂದಾಗ ರಕ್ಷಿಸಿದವನು ಶ್ರೀ ಸಾಮಾನ್ಯನೇ. ಆದ್ದರಿಂದ ಇಂದು, ಮುಂದು, ಎಂದೆಂದೂ ಇದರ ಪೋಷಣೆ, ರಕ್ಷಣೆ ನಿಮ್ಮ ಮೇಲಿದೆ. ಜನ ಬದುಕಲೆಂದು ಜಗ ಬದುಕಲೆಂದು ಕೊಡಲ್ಪಟ್ಟ ಈ ಧರ್ಮ ಮತ್ತು ಸಾಹಿತ್ಯ ಲೋಕ-ಸಂಜೀವಿನಿಯಾಗಿದೆ. ಆದ್ದರಿಂದ ನೀವು ಶರಣ ಮೇಳದ ಮಹತ್ವ ಕುರಿತು ಪ್ರಚಾರವನ್ನು ನೀವು ನೀವೇ ಮಾಡಬೇಕು. ತನ್ನ ಅಂತಃಶಕ್ತಿಯಿಂದಲೇ ಶರಣ ಮೇಳ ಬಲಗೊಂಡು ಬೆಳೆಯಬೇಕು. ಬಹುಪಾಲು ವಾರ್ತಾ ಪತ್ರಿಕೆಗಳು ಸುಳ್ಳು ಸುದ್ದಿಗಳನ್ನು ಹಬ್ಬಿಸಲು, ವಿವಾದ ಸೃಷ್ಟಿಸಲು, ನಟ-ನಟಿಯರ ಬಗ್ಗೆ ಹರಟೆ ಮಲ್ಲಿಗಳಾಗಿ ಕೆಲಸ ಮಾಡಲು, ರಾಜಕೀಯ ಪಕ್ಷಗಳ ಬಗ್ಗೆ ದ್ವೇಷ ಇಲ್ಲವೇ ಮಮಕಾರಗಳಿಂದ ವರ್ತಿಸಲು ತೋರುವಷ್ಟು ಆಸಕ್ತಿಯನ್ನು ಶರಣ ಮೇಳ ಪ್ರಚಾರದಲ್ಲಿ ತೋರಲಿಕ್ಕಿಲ್ಲ. ಜನರು ಈಗ ಪ್ರಬುದ್ಧರಾಗಿದ್ದಾರೆ, ಅಧ್ಯಾತ್ಮಿಕವಾಗಿ ಹಸಿದಿದ್ದಾರೆ, ಸಂಘಟಿತರಾಗಲು ಆತುರರಾಗಿದ್ದಾರೆ. ಆದ್ದರಿಂದ ಅಂತಹ ಆಸಕ್ತರಿಗೆ ಶರಣ ಮೇಳದ ಮಾಹಿತಿ ಮಾಡುವ ಪವಿತ್ರ ಕರ್ತವ್ಯ ಮಾಡಿರಿ. ನಿಮ್ಮ ತನುಮನಗಳೆರಡನ್ನು ಈ ಪ್ರಚಾರ ಕಾರ್ಯದಲ್ಲಿ ತೊಡಗಿಸಿರಿ.

ಧನ ಸಂಗ್ರಹಣೆ

ಬಸವ ಪ್ರಣೀತ ಲಿಂಗಾಯತ ಧರ್ಮದ ಒಂದು ಪವಿತ್ರ ಕಾರ್ಯ ಅನ್ನ ದಾಸೋಹ. ಜ್ಞಾನ ದಾಸೋಹವು ನಾಲ್ಕು ದಿವಸಗಳ ಕಾಲ ನಿರಂತರವಾಗಿ ಇದ್ದೇ ಇರುತ್ತದೆ. ಇದರ ಜೊತೆಗೆ ಅನ್ನ ದಾಸೋಹವು ನಡೆಯಲೇಬೇಕು. ಧರ್ಮಪಿತರು ಅನ್ನದಾಸೋಹಕ್ಕೆ ಪ್ರಸಿದ್ಧರಾದವರು. ಆದ್ದರಿಂದ ಈ ಪವಿತ್ರ ಕಾರ್ಯ ನಡೆಯಬೇಕಾದರೆ

೧. ನೀವು ಸ್ವತಃ ಧನ, ಧಾನ್ಯ ಕೊಡಬೇಕು.

೨. ನಿಮ್ಮ ಮಿತ್ರರು, ಪರಿಚಿತರು, ಬಂಧು-ಬಳಗದವರಿಂದ ಸಂಗ್ರಹಿಸಿಕೊಡಬೇಕು.

೩. ನೀವು ಸ್ವತಃ ನೀಲಾಂಬಿಕಾ ದಾಸೋಹ ಮಂಟಪದಲ್ಲಿ ನಿಂತು ಬಂದ ಶರಣರಿಗೆ ಪ್ರಸಾದ ಎಡೆಮಾಡಿ ಸಂತೋಷಿಸಬೇಕು. ಈಗ ನಮಗೆ ಧರ್ಮಪಿತ ಬಸವಣ್ಣನವರಿಗೆ ಉಣ್ಣಿಸಬೇಕು, ಉಪಚರಿಸಬೇಕು ಎಂಬ ಆಸೆ ಇರುವುದು ಎಂದುಕೊಳ್ಳೋಣ. ಹೇಗೆ ಮಾಡಲು ಸಾಧ್ಯ? ಬಸವ-ಕಿರಣಗಳಾಗಲು ಇಲ್ಲಿ ಬಂದ ಶರಣರಿಗೆ ಉಣ್ಣಿಸಿ, ಉಪಚರಿಸಿದರೆ

ಆಗ ಅದು ಬಸವಗುರು ಸೇವೆ ಆಗುವುದು. ಅದನ್ನೇ ಧರ್ಮಪಿತರು 'ಲಿಂಗದ ಬಾಯಿ ಜಂಗಮ' ಎಂದರು; ಜಂಗಮ ನೆನೆದರೆ (ತಣಿದರೆ) ಸ್ಥಾವರ ತಣಿಯಿತು ಎಂದು ಹೇಳಿರುವುದು.

ಯಾರೂ ಯಾರಿಂದ ಸೇವೆ ನಿರೀಕ್ಷಿಸದೆ ಎಲ್ಲರೂ ಸೇವೆ ಮಾಡಲು ಸನ್ನದ್ಧರಾಗಿರಬೇಕು. ಸ್ವಾಗತ ಕೋಣೆಯಲ್ಲಿ ಕುಳಿತ ಕೆಲವು ಶರಣ ಕಾರ್ಯಕರ್ತರಿಗೆ ಎಂಥ ಒತ್ತಡ ಇರುತ್ತದೆ ಎಂಬುದು ಊಹಿಸಲು ಅಸದಳ. ಆಗ ಕೆಲವರು ಬಂದು ಅವರ ಮೇಲೆ ಜೋರು ಮಾಡುತ್ತಾರೆ. ಜನರನ್ನೂ ಕರೆತಂದು ನಮಗೆ ಅದಿಲ್ಲ ಇದಿಲ್ಲ ಎಂದು ಗಲಾಟೆ ಮಾಡುತ್ತಾರೆ. ಇದು ಶರಣ ಸಂಸ್ಕೃತಿಗೆ ಸೂಕ್ತವಲ್ಲ. ಏಕೆಂದರೆ ಅದು ಇವರೂ ಮಾಡಬೇಕಾದ ಕರ್ತವ್ಯವಲ್ಲವೆ ? ಊಟ ನಿದ್ರೆಯಿಲ್ಲದೆ ಕೆಲವರು 24 ಗಂಟೆ ಕೌಂಟರಿನಲ್ಲಿ ಕೂತಿರುತ್ತಾರೆ. ಮಾನಸಿಕ-ಬೌದ್ಧಿಕ ತರಬೇತಿ ಇಲ್ಲದ ಆಗುಂತಕರು ಗಲಾಟೆ ಮಾಡುತ್ತಿದ್ದರೂ, ರಾ.ಬ. ದಳದ ಕಾರ್ಯಕರ್ತರು ಆಗುಂತಕರಿಗೆ ಸಮಾಧಾನ ಹೇಳಿ ಇದು ಪರಿಶ್ರಮದ ಕೆಲಸ, ಸ್ವಲ್ಪ ಸಮಾಧಾನವಿರಲಿ ಎಂದು ಹೇಳಬೇಕು. ಒಂದು ವೇಳೆ ಕಾರ್ಯಕರ್ತರು, "ಇದು ನನ್ನದಷ್ಟೇ ಅಲ್ಲ; ನಿನ್ನದೂ ಕೆಲಸ, ನೀನೂ ಬಂದು ಇಲ್ಲಿ ಕುಳಿತುಕೋ ಅಯ್ಯಾ" ಎಂದೆನ್ನುವುದರಲ್ಲಿ ತಪ್ಪಿಲ್ಲವಲ್ಲವೆ? ಅದಕ್ಕೆ ಧರ್ಮಗುರುವು ಹೀಗೆ ಆದೇಶಿಸಿದ್ದಾರೆ.

ಭಕ್ತ ಭಕ್ತನ ಮನೆಗೆ ಬಂದಡೆ
ಭೃತ್ಯಾಚಾರವ ಮಾಡಬೇಕು
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ
ಹಿಂದೆ ಮಾಡಿದ ಭಕ್ತಿಗೆ ಹಾನಿ
ಲಕ್ಷ್ಯಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಕೂಡಲ ಸಂಗಮದೇವನು. (೨೪೬)

ಲಕ್ಷ ಗಾವುದ ದೂರವಾದರೂ ಸರಿಯೆ ಶರಣ ಬಂಧುಗಳು ಹೋಗಿ ಪರಸ್ಪರ ಭೇಟಿಯಾಗಬೇಕು ಕುಶಲವನ್ನು ವಿಚಾರಿಸಬೇಕು. ಪರಸ್ಪರ ಸೇವೆಯನ್ನು ಮಾಡಬೇಕು. ಇಂತಹ ಸಹೋದರತ್ವ ಸಾಧನೆ ಬಹಳ ಮುಖ್ಯ. ಅದೀಗ ಶರಣ ಮೇಳದ ಮೂಲಕ ಸುಲಭ ಸಾಧ್ಯವಾಗಿದೆ. ಶರಣ ಮೇಳದ ಕಲ್ಪನೆ ಧರ್ಮಪಿತರ ವಚನದಲ್ಲಿ ಹೀಗೆ ಮೂಡಿ ನಿಂತಿದೆ.

ಅಯ್ಯಾ, ನಿಮ್ಮ ಶರಣ ದಾಸೋಹಕ್ಕೆ
ತನು ಮನ ಧನವಲಸದಂತೆ ಮಾಡಯ್ಯಾ
ತನು ದಾಸೋಹಕ್ಕೆ ಉಬ್ಬುವಂತೆ ಮಾಡಯ್ಯಾ
ಮನ ದಾಸೋಹಕ್ಕೆ ಲೀಯುವಹಂತೆ ಮಾಡಯ್ಯಾ
ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ
ಪರಿಣಾಮಿಸುವಂತೆ ಮಾಡು ಕೂಡಲಸಂಗಮದೇವಾ. (459)

ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟಗಳನ್ನು ಏಡೆಮಾಡಲು ಬೇರೆ ಬೇರೆ ರಾಷ್ಟ್ರೀಯ ಬಸವ ದಳಗಳವರು ಬೇರೆ ಬೇರೆ ತಂಡಗಳನ್ನೂ ರಚಿಸಬೇಕು. ಅಂದರೆ ಮಾತ್ರ ಎಲ್ಲ ರಾ.ಬ.ದ. ದವರಿಗೆ ಒಂದು ಹೊತ್ತಿನ ಸೇವೆ, ಉಳಿದಂತೆ ಕಾರ್ಯಕ್ರಮ ಪ್ರಾಪ್ತಿಯಾಗುತ್ತದೆ. ದೇಣಿಗೆ ನೀಡಿಕೆ, ದೇಣಿಗೆ ಸಂಗ್ರಹ ಸ್ವಯಂ ಪ್ರೇರಣೆಯ ಕರ್ತವ್ಯವಾಗಬೇಕು. ದಿ. 14.10.95ರ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಚಿತ್ರದುರ್ಗ ರಾ.ಬ.ದಳದ ಶರಣ. ಲಿಂಗಣ್ಣನವರು, "ಇಂಥ ಊರಿನಿಂದ ಇಷ್ಟು ತರಬೇಕು ಎಂದು ಖರ್ಚಿನ ಅಂದಾಜು ಮಾಡಿ, ನಮಗೆಲ್ಲ ಆದೇಶಿಸಬೇಕು" ಎಂದು ಹೇಳಿದರು. ಆಗ ನಾನು ಹೇಳಿದೆ, ನಾನು ಆ ರೀತಿ ಆದೇಶಿಸುವುದಿಲ್ಲ. ಶರಣ ಮೇಳ ಎಲ್ಲರ ಕಾರ್ಯಕ್ರಮ. ಸ್ವಯಂ ಪ್ರೇರಣೆಯಿಂದ ಯಾರು ಎಷ್ಟು ಬೇಕಾದರೂ ಮಾಡಬಹುದು, ಮಾಡದೆ ಇರಬಹುದು. ಲೆಕ್ಕ ಕೊಡಬೇಕಾದುದು ನನಗಲ್ಲ, ಧರ್ಮಪಿತ ಬಸವಣ್ಣನವರಿಗೆ. ಮನೆಯ ಮಕ್ಕಳಾಗಿ ಎಲ್ಲರೂ ಅವರ ಅಂತಃಸಾಕ್ಷಿಯಾಗಿ ಮಾಡಬೇಕು. ಮಾಡದೆ ಇದ್ದರೆ ಅವರ ಕರ್ತವ್ಯದಲ್ಲಿ ಚ್ಯುತಿಯಾಗುವುದು ಎಂಬ ಪ್ರಜ್ಞೆ ಎಲ್ಲರಲ್ಲಿ ಮೊಳೆಯಬೇಕು. ಕಾರ್ಯ ಮಾಡಿಸಿಕೊಳ್ಳುವವರು ಧರ್ಮಪಿತರೇ, ನಾವು ನಿಮಿತ್ತ ಮಾತ್ರರು; ನೀವೂ ನಿಮಿತ್ತ ಮಾತ್ರರು. ಇಂಥ ಸೌಭಾಗ್ಯ-ಸದವಕಾಶ ಸಿಕ್ಕುದಕ್ಕೆ ನಮಗೆ ಸಂತೋಷವಾಗಬೇಕು" ಎಂದು ಹೇಳಿದೆ.

ವ್ಯಕ್ತಿ ಪ್ರೇಮ ಬೇಡ, ತತ್ತ್ವ ಪ್ರೇಮ ಬೆಳೆಯಲಿ.

ಪೂಜ್ಯ ಅಪ್ಪಾಜಿ ಮತ್ತು ನಾವು ಎಂದಿನಿಂದಲೂ ಹೇಳುತ್ತಿದ್ದೇವೆ. ನಾವು ಕುದುರೆಯಾಗಿ ಬಸವ ಗುರುವನ್ನು ಹೊತ್ತು ಮೆರೆಸಬೇಕೇ ವಿನಾ ಬಸವ ತತ್ತ್ವವನ್ನು ಕುದುರೆ ಮಾಡಿಕೊಂಡು ತಾವು ಹತ್ತಿ ಮೆರೆಯುವವರಾಗಬಾರದು ಎಂದು. ಆರ್.ಸಿ.ಸಿ. ಮೌಲ್ಡ್ ಹಾಕುವಾಗ ಸೆಂಟ್ರಿಂಗ್ ಹಾಕುತ್ತೇವೆ. ನಂತರ ಸೆಂಟ್ರಿಂಗ್ ತೆಗೆದು ಆರ್.ಸಿ.ಸಿ. ಉಳಿಸಿಕೊಳ್ಳುತ್ತೇವೆ. ಕೆಲವು ಆಕೃತಿ ತೆಗೆಯುವಾಗ ಮೌಲ್ಡ್ ಮಾಡಲಾಗುವುದು. ಮೌಲ್ಡ್ ಸಹಾಯ ಸಾಧನ ಮಾತ್ರ. ಹಾಗೆಯೇ ಪೂಜ್ಯ ಅಪ್ಪಾಜಿಯವರ, ನಮ್ಮ, ಪೂಜ್ಯ ಗಂಗಾಮಾತಾಜಿ ಮುಂತಾದವರ ಪ್ರವಚನಗಳು ಸೆಂಟ್ರಿಂಗ್ ತರಹ ಕೆಲಸ ಮಾಡಿ, ಅಲ್ಲಿ ಬಸವ ತತ್ತ್ವದ ಆರ್.ಸಿ.ಸಿ. ಗಟ್ಟಿಗೊಳಿಸುತ್ತವೆ. ಅಲ್ಲಿ ಸೃಷ್ಟಿಕರ್ತ ಲಿಂಗದೇವನನ್ನು, ಗುರು ಬಸವಣ್ಣನವರನ್ನು, ಜಂಗಮ ಜ್ಯೋತಿಗಳಾದ ಶರಣರನ್ನು ಪ್ರತಿಷ್ಠಾಪಿಸುತ್ತವೆ. ಇದೇ ಶರಣ ಮೇಳವು ನಮ್ಮ ಪ್ರಯತ್ನ, ಪರಿಶ್ರಮ ಪ್ರಭಾವದಿಂದ ಆರಂಭವಾಗಿ ನಡೆದರೂ, ಆ ಭಾರವನ್ನು ತಮ್ಮ ಹೆಗಲಿಗೆ ವರ್ಗಾಯಿಸಿಕೊಂಡು ಶರಣ ಬಂಧುಗಳೇ ಶರಣ ಮೇಳವನ್ನು ನಡೆಸಿಕೊಂಡು ಹೋಗುವಂತಾಗಬೇಕು. ಈ ಉದ್ದೇಶದಿಂದಲೇ ಬಸವ ಧರ್ಮಪೀಠ, ಬಸವ ಧರ್ಮ

ಸಂಸತ್, ರಾಷ್ಟ್ರೀಯ ಬಸವದಳ, ಶರಣ ಮೇಳ ಉತ್ಸವ ಸಂಚಾಲಕ ಸಮಿತಿ ಮಾಡಲಾಗಿದೆ.

ಶರಣ ಮೇಳಕ್ಕೆ ಯಾವ ಸ್ವಾಮಿಗಳು, ಯಾವ ಗಣ್ಯರು, ಯಾವ ರಾಜಕೀಯ ಪಟುಗಳು, ಮಂತ್ರಿವರ್ಯರು ಬರುತ್ತಾರೆ ಎಂಬುದು ಮುಖ್ಯವಲ್ಲ. ನೀವು (ಶರಣರು) ಬರುತ್ತೀರೆಂಬುದು ಬಹಳ ಮುಖ್ಯ. ಏಕೆಂದರೆ, ಹಿಂದು ಸಮಾಜದ ಒಂದು ದೌರ್ಬಲ್ಯವೆಂದರೆ, ಒಂದೊಂದು ವ್ಯಕ್ತಿಯ ಕಾಲಕ್ಕೆ ಏನೋ ಅದ್ಭುತವಾದುದು ಆಗಿ, ನಂತರ ಎಲ್ಲ ಬರಡಾಗುವುದು ಇಲ್ಲಿ ಬಲು ಸಹಜ. "ನ ಭೂತೋ ನ ಭವಿಷ್ಯತಿ" ಎಂಬುದು ಇಲ್ಲಿ ಪ್ರಚಲಿತವಾದ ಒಂದು ಮಾತು. ಹಿಂದಾಗಿಲ್ಲ, ಮುಂದಾಗುವುದಿಲ್ಲ ಎಂದು ಇದರ ಅರ್ಥ. ಈ ಉಕ್ತಿ ನನಗೆ ಬಹಳ ಸಿಟ್ಟು ಬರಿಸುತ್ತದೆ. ಯಾವುದಾದರೊಂದು ಕಾರ್ಯಕ್ರಮ ಅಭೂತಪೂರ್ವವಾಗಿ ನಡೆದಾಗ ಇಂಥದು ಹಿಂದೆ ಆಗಿಲ್ಲ ಎಂಬುದು ಸೂಕ್ತ. ಆದರೆ ಮುಂದೆ ಇದಕ್ಕೂ ಮಿಗಿಲಾಗಿ ಆಗಬಾರದೇಕೆ? ಯಾವುದೂ ಸಣ್ಣದ್ದರಿಂದ ದೊಡ್ಡದು ಆಗುತ್ತಾ ಹೋಗಬೇಕು. ಅದು ನಿಸ್ಸೀಮವಾಗಿ ದಶದಿಕ್ಕುಗಳನ್ನೂ ವ್ಯಾಪಿಸುತ್ತಾ ಬೆಳೆಯಬೇಕು.

"ಶರಣ ಮೇಳ" ಒಂದು ರೀತಿಯ ರಾಶಿಯ ಕೆಲಸವಿದ್ದಂತೆ. ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿರುವ ಸಭಾ ಮಂಟಪವೇ ಕಣ. ಧರ್ಮಗುರು ಬಸವಣ್ಣನೇ ಮೇಟಿಗೂಟ, ಇಲ್ಲಿ ಉಪನ್ಯಾಸ-ಪ್ರವಚನ ಮಾಡುವವರೆಲ್ಲ ತುಳಿಸುವ ಎತ್ತುಗಳು ; ವಚನ ಸಾಹಿತ್ಯ ಸಂವಿಧಾನವೇ ಇವರೆಲ್ಲರನ್ನು ಬಿಗಿದ ಕಣ್ಣಿಯ ಹಗ್ಗ; ಜ್ಞಾನದ ಗಾಳಿಯಲ್ಲಿ ತೂರುವುದು, ಕೇರುವುದು ಉಂಟು. ಜೊಳ್ಳೆಲ್ಲ ಹಾರಿ ಹೋಗಿ, ಗಟ್ಟಿಕಾಳು ಉಳಿಯುವುದು. ತಾತ್ತ್ವಿಕವಾಗಿ ಸಂಸ್ಕರಣಗೊಂಡು ಉಳಿಯುವ ಕಾಳು ಇವು ಸಾಮಾನ್ಯವಲ್ಲ ; ಬಿತ್ತುವ ಕಾಳಿನಂತೆ ವಿಶೇಷ. ಈ ಶರಣ-ಬಿತ್ತು ಕಾಳುಗಳು ತಮ್ಮ ತಮ್ಮ ಕ್ಷೇತ್ರಕ್ಕೆ ಹೋಗಿ ಪುನಃ ಬೆಳೆ ತೆಗೆಯುವುವು. ಹೊಸ ಹೊಸ ತಲೆಗಳು ಮತ್ತೆ ಮುಂದಿನ ಶರಣ ಮೇಳದಲ್ಲಿ ಶುದ್ಧೀಕರಣಗೊಳ್ಳುವುವು.

ಮೊದಲ ಶರಣ ಮೇಳಕ್ಕೆ ಒಮ್ಮೆಲೇ ಬೃಹತ್ತಾಗಿ ಜನರು ಬಂದರು. ಅದರಲ್ಲಿ ವೀರಶೈವವಾದಿಗಳು, ಬಿ.ಪಿ. ಕಾಯಿಲೆಯವರು (ಬಸವ ಪೂರ್ವದಲ್ಲಿ ಈ ಧರ್ಮವಿತ್ತು ಎನ್ನುವವರಿಗೆ ಪೂಜ್ಯ ಅಪ್ಪಾಜಿ ಕರೆಯುತ್ತಿದ್ದ ಹೆಸರು) ಎಲ್ಲ ಕೂಡಿದ್ದರು. ಆ ಶರಣ ಮೇಳದಲ್ಲಿ ಷಟ್ ಸೂತ್ರಗಳನ್ನು ನಾವು ಘೋಷಿಸುತ್ತಲೇ ಅಂಥವರು ಮುನಿದು ಬರುವುದು ಬಿಟ್ಟರು. ನಾವೇನೂ ಚಿಂತಿಸಲಿಲ್ಲ. ಅಂಥವರಿಗಾಗಿ ತತ್ತ್ವಗಳಲ್ಲಿ ಯಾವ ರಾಜಿಯನ್ನೂ ಮಾಡಿಕೊಳ್ಳಲಿಲ್ಲ. ಆದರೆ ಕಾಲಕ್ರಮೇಣ ತತ್ತ್ವಗಳಿಗೆ ಬದ್ಧರಾದ ಶರಣರ ಸಂಖ್ಯೆ ಈಗ ವರ್ಧಿಸುತ್ತಾ ಬರುತ್ತಿದೆ.

ಕೆಲವೊಂದು ಅನಿವಾರ್ಯ ಕಷ್ಟಗಳು.

ಶರಣ ಮೇಳಕ್ಕೆ ವರ್ಷದಿಂದ ವರ್ಷಕ್ಕೆ ಜನಸಂಖ್ಯೆ ಹಿರಿದಾಗುತ್ತಿದೆ. ಆಗಬೇಕೆಂಬುದೇ ನಮ್ಮ ಸಂಕಲ್ಪ. ಶರಣ ಕಾರ್ಯಕರ್ತರ ಅವಿಶ್ರಾಂತ ಪರಿಶ್ರಮದಿಂದ ಊಟದ ವ್ಯವಸ್ಥೆಗೆ ತೊಂದರೆಯಾಗದು. ವಸತಿಗೆ ಮಾತ್ರ ತಾತ್ಕಾಲಿಕ ಶಾಮಿಯಾನ, ಟೆಂಟ್, ಪೆಂಡಾಲ್ ಮುಂತಾದುವು ಇರುತ್ತವೆ. ಸ್ವತಂತ್ರ ವಾಹನಗಳ ಅನುಕೂಲವಿರುವವರು ಆಲಮಟ್ಟಿ, ಹುನಗುಂದ, ಇಳಕಲ್, ಬಾಗಲಕೋಟೆಗಳ ಪ್ರವಾಸಿ ಮಂದಿರ, ಲಾಡ್ಜಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ಬೆಳಿಗ್ಗೆ ಸ್ನಾನ ಪೂಜೆ ಮುಗಿಸಿ ಬಂದುಬಿಟ್ಟರೆ ಸಾಕು, ಇಲ್ಲಿ ಉಪಾಹಾರ, ಊಟಗಳ ವ್ಯವಸ್ಥೆ ಇರುತ್ತದೆ. ರಾತ್ರಿ ಕಾರ್ಯಕ್ರಮ ಮುಗಿದ ಬಳಿಕ ರಾತ್ರಿಯ ಊಟ ಮುಗಿಸಿ ತಮ್ಮ ವಾಸ್ತವ್ಯಕ್ಕೆ ತೆರಳಬಹುದು. ಉಳಿದವರಿಗೆ ಶಾಮಿಯಾನಾ ಕೊಠಡಿ ಇರುತ್ತವೆ. ಶರಣರು ಪಂಚತಾರಾ ಹೋಟೆಲ್ಲಿನ ಸೌಕರ್ಯ ಬಯಸಬಾರದು, ಇಂಥ ಕುಗ್ರಾಮದಲ್ಲಿ ಅದನ್ನು ನಿರೀಕ್ಷಿಸಲು ಸಾಧ್ಯವೇ? ಕೇವಲ ಸ್ವಲ್ಪ ಚಳಿ ತಡೆಯಬೇಕು.ಈ ವರ್ಷ ಅದೂ ಸಹ ಇಲ್ಲ. ಹವೆಯು ಬಹಳ ಹಿತಕರವಾಗಿದೆ. ಇಂಥ ಭೌತಿಕ ಅನುಕೂಲತೆ ನಿರೀಕ್ಷಿಸಿ ಶರಣ ಮೇಳಕ್ಕೆ ಬರದೆ ಮನೆಯಲ್ಲಿ ಕುಳಿತುಕೊಳ್ಳುವವರು ಆದಿ ಶರಣರ ಹೋರಾಟದ ಬದುಕನ್ನು ನೆನಪಿಸಿಕೊಳ್ಳಬೇಕು. ಸಹ್ಯಾದ್ರಿಯ ಕಾಡಿನಲ್ಲಿ ಅಲೆದು ವಚನ ಸಾಹಿತ್ಯ ಸಂರಕ್ಷಿಸಿ, ಆ ಮಳೆಗಾಳಿ ಚಳಿಯಲ್ಲಿ ಘಾಸಿಯಾಗಿ, ನೊಂದು ನಲುಗಿ, ಗಿಡಗಳಿಗೆ ತೊಟ್ಟಿಲು ಕಟ್ಟಿಕೊಂಡು ಮಲಗಿ, ಅಂಥ ಸಂಕಷ್ಟಗಳನ್ನೂ ಅನುಭವಿಸಿ ಪ್ರಾಣಬಿಟ್ಟ ಆ ಮಹಾನ್ ತ್ಯಾಗಿಗಳನ್ನು ನೆನಪು ಮಾಡಿಕೊಂಡು ನಮ್ಮ ಕರುಳು ಚುರುಕೆನ್ನಬೇಕು. ಹೃದಯ ಮಮ್ಮಲ ಮರುಗಬೇಕು. ಅವರ ತ್ಯಾಗ, ಪರಿಶ್ರಮದ ಒಂದು ಸಾವಿರದಲ್ಲಿ ಒಂದು ಅಂಶದಷ್ಟಾದರೂ ನಮಗೆ ಶ್ರಮವಿಲ್ಲ. ಅವರ ಋಣದಿಂದ ನಾವು ಮುಕ್ತರಾಗಬೇಕಾದರೆ ಯಾವ ರೀತಿ ದುಡಿದು, ಹಣ್ಣಾದರೂ ಸಾಲದು.

ಕಲ್ಯಾಣ ಕ್ರಾಂತಿ; ಗಡಿಪಾರು ಎಲ್ಲ ಆದ ಮೇಲೆ ಧರ್ಮಪಿತರು ನೋವೇ ಹೆಪ್ಪುಗಟ್ಟಿ ನುಡಿದಿರುವ ಈ ವಚನವನ್ನಿಷ್ಟು ಅರ್ಥ ಮಾಡಿಕೊಳ್ಳಿರಿ.

ಬಿತ್ತಿತ್ತು ಬೆಳೆಯಿತ್ತು ಕೆಯ್ಯ ಕೊಯ್ಯಿತ್ತು ಗೂಡು ಮುರಿದಿತ್ತು
ಕುತ್ತರಿಯೊಟ್ಟಿತ್ತು ಒಕ್ಕಿತ್ತು ತೂರಿತ್ತು ಅಳೆಯಿತ್ತು
ಸಲಗೆ ತುಂಬಿತ್ತು
ಕೂಡಲ ಸಂಗಮದೇವಯ್ಯಾ
ಮೇಟಿ ಕಿತ್ತಿತ್ತು, ಕಣ ಹಾಳಾಯಿತ್ತಯ್ಯಾ (ಬ.ಷ.ದೆ.ವ. ೧೩೯೨)

ಅಂದು ಧರ್ಮಗುರುವು ತತ್ತ್ವದ ಬೀಜಗಳನ್ನು ಅನುಭವ ಮಂಟಪ ಎಂಬ ಕೂರಿಗೆ ಮೂಲಕ ಬಿತ್ತಿದರು; ಶರಣ ಚೇತನಗಳೆಂಬ ಬೆಳೆ ತೆಗೆದರು. ನಂತರ ಮೇಟಿ (ಗುರು

ಬಸವಣ್ಣನವರ ಗಡಿಪಾರು) ಕಿತ್ತಿತು, ಕಣ (ಕಲ್ಯಾಣ ಕಾರ್ಯಕ್ಷೇತ್ರ) ಮಸಣ ಸದೃಶವಾಯಿತು. ಅನಿರೀಕ್ಷಿತ ಅವಗಡ ಎದುರಾಯಿತು. ಆದಿ ಪ್ರಮಥ ಬಸವಣ್ಣನವರು ಆದಿಯಾಗಿ ಅನೇಕ ಶರಣರು ನಮ್ಮ ಮೇಲೆ ಅಂದರೆ ನಂತರ ಬರುವ ಪೀಳಿಗೆಯ ಮೇಲೆ ಭರವಸೆ ಇಟ್ಟುಕೊಂಡು ಸಮಾಧಾನಪಟ್ಟುಕೊಂಡು ಹೋಗಿದ್ದಾರೆ. ಕಾಲಜ್ಞಾನ ವಚನಗಳು ಆದಿ ಶರಣರ ಉಯಿಲು (will), ಇಚ್ಛಾ ಪತ್ರಗಳಂತಿವೆ. ಅವರು ನಮ್ಮನ್ನು ಬರಿದಾಗಿ ಬಿಟ್ಟು ಹೋಗಿಲ್ಲ. ವಚನ ವಾಙ್ಮಯ ಸಂಪತ್ತಿಗೆ ವಾರಸುದಾರರನ್ನಾಗಿ ಮಾಡಿಹೋಗಿದ್ದಾರೆ. ಈ ಸಂಪತ್ತನ್ನೂ ಪಡೆದು ನಾವು ಆದಿ ಶರಣರ ಇಚ್ಛೆಯನ್ನು ಪೂರ್ತಿ ಮಾಡಲು ಸನ್ನದ್ಧರಾಗಬೇಕಾಗಿದೆ.

ಬನ್ನಿ ಶರಣ ಬಂಧುಗಳೇ, ಕಣವನ್ನು ಸರಿಪಡಿಸಲಾಗಿದೆ; ಪುನಃ ಮೇಟಿಯನ್ನು ನೆಡಲಾಗಿದೆ. ಆದಿ ಶರಣರು ರಾಜಶಾಹಿ ಪುರೋಹಿತಶಾಹಿ ಎರಡರ ವಿರುದ್ಧ ಹೋರಾಡಬೇಕಾಗಿತ್ತು. ನಮಗೆ ಇವೆರಡರ ಕಾಟವಿಲ್ಲ [ಸ್ವಲ್ಪ ಕಿರಿಕಿರಿ ಇರಬಹುದು] ನಾವು ಪ್ರಜಾಪ್ರಭುತ್ವದಲ್ಲಿದ್ದೇವೆ. ಬಹುಶಃ ಪ್ರಜಾಪ್ರಭುತ್ವವು ಈ ದೇಶದಲ್ಲಿ ಬರುವುದನ್ನು ಆದಿ ಶರಣರು ತಿಳಿದೇ 770 ವರ್ಷಗಳ ಬಳಿಕ ಬರುವ ಸಂಕಲ್ಪ ಮಾಡಿರಬಹುದು (1947 ಸ್ವಾತಂತ್ರ್ಯ ಬಂದ ವರ್ಷ ಹಿಂದೆ ಹತ್ತು (1+9) ಮುಂದೆ ಹನ್ನೊಂದು (4+7) ಎಂಬುವ ಶರಣರ ಲೆಕ್ಕಾಚಾರವೂ ಇಲ್ಲಿ ತಾಳೆಯಾಗುತ್ತಿದೆ] ನಮ್ಮ ಕೈಗಳು ಕಟ್ಟಲ್ಪಟ್ಟಿಲ್ಲ ಮುಕ್ತವಾಗಿವೆ.

ವಚನ ಸಾಹಿತ್ಯದ ಸಲಗೆ (ಕಣಜ) ಯಲ್ಲಿ ಇರುವ ವಿನೂತನ ಸಂದೇಶಗಳ ಬೀಜಗಳನ್ನು ನಾವು-ನೀವೆಲ್ಲ ಕೂಡಿ ಶರಣ ಮೇಳದ ಮೂಲಕ ಬಿತ್ತೋಣ ಬನ್ನಿ.

ಬಸವ ಗುರುವಿನ ತತ್ತ್ವ ಲೋಕದಿ ಹಬ್ಬಲಿ
ಮನುಜ ಕಲ್ಪಿತ ಜಾತಿ ಹೆರೆ ತೊಲಗಿ ಹೋಗಲಿ
ವಿಶ್ವಮಾನವ ಪ್ರೀತಿ ಹೊನಲಾಗಿ ಹರಿಯಲಿ
ಸೃಷ್ಟಿಕರ್ತನ ಕರುಣೆ ಎಮ್ಮ ಕಾಪಾಡಲಿ ||

ಹೀಗಾಗಿ ಶರಣ ಬಂಧುಗಳೇ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳವು, ನಿಮ್ಮಿಂದ, ನಿಮಗಾಗಿ, ನಿಮ್ಮದೇ !

— ಬಸವಾತ್ಮಜೆ

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ - 587 115

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು - ಮಣ್ಣು - ಇಟ್ಟಿಗೆ - ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ-ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಾಯಿ-ತಂದೆ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ -ಸೋದರತ್ವ -ಸ್ವಾತಂತ್ರ್ಯ ಇವು ನನ್ನ ತತ್ತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆಮಾಡಿಕೊಂಡ, ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ-ತಿರೋದಾನ ಎಂಬ ಸೃಷ್ಟಿಗೆ ಸಂಬಂಧಿಸಿದ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು

ಅವತೀರ್ಣಗೊಳಿಸಿ ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ, ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು; ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸೆಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟುಹಾಕಿದರು. ಅದನ್ನು ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹು ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ಕಡು ನೊಂದ ಕರ್ತನು, ನನ್ನಲ್ಲಿ ತಮ್ಮ ಅನುಗ್ರಹ ಇಳಿಸಿ, ಸಮಾಜದ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡ.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಕೂಡಲ ಸಂಗಮದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು.

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು.

ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗವಂತರಾಗಿರಬಹುದು, ನಿಮ್ಮ ತಾಯಿ ತಂದೆ ಲಿಂಗವಂತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗವಂತರಾಗಬೇಕೇ ವಿನಾ, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗವಂತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವ ಸಂಹಿತೆ ಯಾವುದೇ ಒಂದು ಜಾತಿ-ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ, ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮಾಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕೂಗಿ ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ
ಆ ಕಾಗೆ ಕೋಳಿಯಿಂದ ಕರಕಷ್ಟ, ಕೂಡಲ ಸಂಗಮದೇವಾ

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ, ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ : ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು.

ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು ಸಾಮೂಹಿಕ ಪ್ರಾರ್ಥನೆ ಮಾಡಿರಿ.

ನೆನಹು: ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲೀ, ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿ ಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತುಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೇ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ಮದವೇರಿದ ಸಲಗ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯುಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ

ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ ೧೨ ರಿಂದ ೧೪ರ ವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೆ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ - ಮಡಿವಾಳ ಮಾಚಯ್ಯ - ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ - ಮಧುವಯ್ಯ ಶೀಲವಂತರು ಮಾಡಿದ ಪ್ರಾಣಾರ್ಪಣೆ ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ "ಒಗೆತನವ" ಮಾಡಬೇಕೆಂಬುದನ್ನು ಕಲಿಸಿಕಳಿಸುವರು.

ಷಡಂಗ ದಾಸೋಹ ಮಾಡಿರಿ. ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನು ಮೀಸಲಿರಿಸಿ ನಮ್ಮ ತತ್ತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ-ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ; ನಿಮ್ಮ ಹೃದಯ-ಮನ-ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು, ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ, ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ ಬಸವಣ್ಣ
(ಗ್ರಹಿಸಿದವರು : ಬಸವಾತ್ಮಜೆ ಮಾತಾಜಿ)

ಜಂಗಮ ಪದದ ದುರ್ಬಳಕೆ

ಕಲಬೆರಕೆ, ದುರ್ಬಳಕೆಗೆ ಭಾರತ ದೇಶವು ಸುಪ್ರಸಿದ್ಧವಾದಷ್ಟು ಜಗತ್ತಿನಲ್ಲಿ ಬೇರಾವುದೂ ಸಿಗಲಿಕ್ಕಿಲ್ಲ. ವಿಕೃತಗೊಂಡು ಬಳಕೆಯಾಗುತ್ತಿರುವ ಹಲವಾರು ಪದಗಳಲ್ಲಿ ಜಂಗಮವೂ ಒಂದು. ಡಾ|| ಜ.ಚ.ನಿ. ಯವರು ಒಂದು ಪುಸ್ತಕದಲ್ಲಿ ಶಾಂಭವೀ ಮುದ್ರೆ, ಶಾಂಭವಿ ಯೋಗ - ಇದು ರೇವಣಸಿದ್ಧರ ಹಲವಾರು ಪತ್ನಿಯರಲ್ಲಿ ಒಬ್ಬಳಾದ ಶಾಂಭವಿಯ ಹೆಸರು ಹಿಡಿದು ಬಂದಿದೆ ಎಂದು ಬರೆದಿದ್ದರು. ಆದಿಯೋಗಿ ರಾಜನಾದ ಶಿವನ ಹೆಂಡತಿ ಉಮೆಯ ಹೆಸರು ಶಾಂಭವಿ ಎಂದು ಇದ್ದಿತು. ಇಡೀ ಭಾರತದಲ್ಲಿ ಪ್ರಚಲಿತವಿರುವ ಸಂಗತಿ ಇದು. ಕುಂಡಲಿನಿ ಶಕ್ತಿ ಜಾಗೃತಿಯನ್ನು ಮುಖ್ಯವಾಗಿ ಸಾಧಿಸುವ ಯೋಗಕ್ಕೆ ಶಾಂಭವೀ ಯೋಗವೆಂದೂ ಹೆಸರಿದೆ.

ನಿನ್ನೆ (19.12.95) ಸಂಯುಕ್ತ ಕರ್ನಾಟಕದಲ್ಲಿ ಒಂದು ಪ್ರಕಟಣೆ ನೋಡಿದೆ. ಅದರಲ್ಲಿ, ರಾಜ್ಯಮಟ್ಟದ ಪಂಚಮಸಾಲಿ ಸಮ್ಮೇಳನ ನೂಲ್ವಿ ಎಂಬಲ್ಲಿ ನಡೆಯಲಿದೆ ಎಂದು ಕೊಟ್ಟು ಕಂಸಿನಲ್ಲಿ ಪಂಚಾಚಾರ್ಯ ಎಂದು ಕೊಟ್ಟಿದ್ದರು. ಆ ಗುರುಗಳು (ಪಂಚಾಚಾರ್ಯ) ಮತ್ತು ಶಿಷ್ಯರು (ಪಂಚಮಸಾಲಿ) ಉಭಯತರೂ ಎಷ್ಟು ಬುದ್ಧಿವಂತರು ಎಂಬುದು ಇದರಿಂದ ತಿಳಿಯುತ್ತದೆ. ಪಂಚಾಚಾರ್ಯರ ಸಮ್ಮೇಳನ ಎಂದರೆ ಕಿರೀಟ-ಅಡ್ಡಪಲ್ಲಕ್ಕಿ ಪ್ರಿಯರಾದ ಆ ಐದೂ ಜನ ಸ್ವಾಮಿಗಳು ಒಂದು ಕಡೆ ಸೇರುತ್ತಿದ್ದಾರೆ ಎಂದುಕೊಳ್ಳಬಹುದು ಅವರ ಶಾಖಾ ಮಠಗಳವರೂ ಅದೇ ಗುಂಪಿನಲ್ಲಿ ಸೇರಲೂಬಹುದು. ಇನ್ನು ಪಂಚಮಸಾಲಿ ಸಮ್ಮೇಳನ ಎಂದರೆ ಲಿಂಗಾಯತ ಸಮಾಜದಲ್ಲಿ ಪ್ರಮುಖರಾದ ಮತ್ತು ಬಹು ಸಂಖ್ಯಾತರೂ ಆಗಿರುವ ಪಂಚಮಸಾಲಿ ಸಮ್ಮೇಳನಕ್ಕೆ ಪಂಚಾಚಾರ್ಯರು ಬರುತ್ತಿದ್ದಾರೆ ಎಂದರೆ ಅದನ್ನೂ ಅರ್ಥ ಮಾಡಿಕೊಳ್ಳಬಹುದು. ಪಂಚಮಸಾಲಿ ಜನರ ಸಮಾವೇಶಕ್ಕೆ ಪಂಚಾಚಾರ್ಯ ಮಠಗಳವರು ಬರುತ್ತಾರೆ ಎಂದು ತಿಳಿಯಬಹುದು. ಅದು ಬಿಟ್ಟು ಪಂಚಮ ಸಾಲಿ ಮತ್ತು ಪಂಚಾಚಾರ್ಯ ಇವೆರಡು ಪದಗಳನ್ನು ಸಮಾನಾರ್ಥದಲ್ಲಿ ಬಳಸುವ ಬುದ್ಧಿವಂತರನ್ನು ನೋಡಿದರೆ ಬಹಳ ತಮಾಷೆ ಎನಿಸುವುದು. ಏಕೆಂದರೆ ಪಂಚಮಸಾಲಿ - ಇದು ಸಮಾಜ - ವಾಚಕ, ಸಮುದಾಯ ಸೂಚಕ ಪದ; ಆಚಾರ್ಯ ಪದವು ಗುರುವಾಚಕ ಪದವು.

ಶಿವ ಪುರಾಣಗಳಲ್ಲಿ ಬರುವ ಕೈಲಾಸದ ಶಿವಗಣಂಗಳಲ್ಲಿ ಲಭ್ಯವಾಗುವ ರೇಣುಕ, ದಾರುಕ ಎಂಬ ಕಾಲ್ಪನಿಕ ಹೆಸರುಗಳನ್ನು ಹಿಡಿದುಕೊಂಡು ಒಂದು ಹೊಸ ಕಥೆಯ ಜಾಲವನ್ನೇ ಹೆಣೆದು ಐತಿಹಾಸಿಕ ಹುಟ್ಟು ವ್ಯಕ್ತಿತ್ವ ಇಲ್ಲದ ಆದಿ ಪಂಚಾಚಾರ್ಯರ ಬಗೆ ಹುಚ್ಚುಚ್ಚಾರ ಪ್ರಚಾರ ಮಾಡಿರುವ ಪಂಚಾಚಾರ್ಯ ವರ್ಗದವರು ಈಗ ಪಂಚಮ ಸಾಲಿಯವರ ನಂಟು ಬೆಳೆಸುತ್ತಿರುವುದು ಬಹಳ ವಿಚಿತ್ರ ಸಂಗತಿಯಾಗಿದೆ. ಅವರು ಹಾಕಿರುವ ಪಾಶಕ್ಕೆ ಈ ಸಮಾಜದ ಕೆಲವು ಜನಕ್ಕೆ ಬಿದ್ದಿರುವುದು ಇನ್ನೂ ಚೋದ್ಯದ ಸಂಗತಿಯಾಗಿದೆ. ಈ

ಪಂಚಮಸಾಲಿ ಜನರು ಗಟ್ಟಿಯಾಗಿ ಕುಳ್ಳಿರಿಸಿ ಆ ಗುರುಗಳನ್ನು ಕೇಳಲಿ, "ಏನ್ರಿ ಸ್ವಾಮಿ, ನಾವು ನಿಮ್ಮ ಪರಮಭಕ್ತರು, ಭಕ್ತವರ್ಗವರು. ನಮ್ಮ ಮಗನನ್ನು ಕೊಡುತ್ತೇವೆ ನಿಮ್ಮ ಮಠಕ್ಕೆ ಅಧಿಕಾರಿ ಮಾಡುತ್ತೀರಾ?" ಹಾವು ತುಳಿದಂತೆ ಬೆಚ್ಚಿಬಿದ್ದು ಆ ಸ್ವಾಮಿಗಳು ಗಾಬರಿಯಾಗುವರೋ ಇಲ್ಲವೋ ಗಮನಿಸಿರಿ. ಅಂದಾಗ ಪಂಚಮಸಾಲಿ ಸಮ್ಮೇಳನ ಪಂಚಾಚಾರ್ಯ ಸಮ್ಮೇಳನ ಹೇಗಾಗಲು ಸಾಧ್ಯ ? [ಈ ರೀತಿ ಜಾತಿ, ಉಪಜಾತಿ ಹಿಡಿದು ಮಾಡುವ ಸಮ್ಮೇಳನಗಳನ್ನು ನಾವು ಮನ್ನಿಸುವುದಿಲ್ಲ, ಈ ಪ್ರಸಂಗದಲ್ಲಿ ನಾನು ಬರೆಯಲು ಹೊರಟಿರುವುದು ಭಕ್ತರ ದಡ್ಡತನ, ಆ ಗುರುಗಳ ಧೂರ್ತತನ ಮತ್ತು ಪದ ಬಳಕೆಯ ವಿಕೃತಿ ಕುರಿತು ಮಾತ್ರ]

ಪಂಚಾಚಾರ್ಯ ಮಠದವರು ಈಗ ಪಂಚಮಸಾಲಿ ಸಮಾಜ ಕುರಿತು ಅತೀವ ಆಸಕ್ತಿ ವಹಿಸಲು ಕಾರಣವಿಲ್ಲದೆ ಇಲ್ಲ. ಒದು ಕಾಲದಲ್ಲಿ ಅಯ್ಯನವರು-ಬಣಜಿಗರು-ಪಂಚಮಸಾಲಿ (ಹಳೆಯ ಮೈಸೂರಿನ ಪಂಚಾಚಾರದವರು)ಯವರ ತ್ರಿಪುಟಿ ಉಳಿದೆಲ್ಲ ಲಿಂಗಾಯತ ಉಪಜಾತಿಗಳಾದ ನೊಳಂಬ, ಸಾದರು, ಗಾಣಿಗರು, ರೆಡ್ಡಿಯವರು, ಕುರುಹಿನ ಶೆಟ್ಟಿ, ಮಡಿವಾಳ, ಪಟ್ಟಸಾಲಿ, ಚವಳಿ - ಈ ಎಲ್ಲರನ್ನು ಮೂರನೆಯ ದರ್ಜೆ ಲಿಂಗಾಯತರೆಂಬಂತೆ ನಿಕೃಷ್ಟವಾಗಿ ಕಂಡಿತು. ಅವರೆಲ್ಲರು ಜಾಗೃತಗೊಂಡು ತಮ್ಮ ತಮ್ಮ ಜಾತಿಗಳನ್ನು ಸಂಘಟಿಸಿ, ಮಠಗಳನ್ನು ಮಾಡಿಕೊಳ್ಳುತ್ತಲೇ ಈಗ ಕೆಲವು ಕಾಲದಿಂದ ಪೆಚ್ಚಾದರು. ಇನ್ನು ಜಂಗಮ ವರ್ಗಕ್ಕೆ ಉಳಿದವರು ಇಬ್ಬರೇ; ಬಣಜಿಗರು ಮತ್ತು ಪಂಚಮ ಸಾಲಿಯವರು. ವಿರಕ್ತ ಮಠಗಳ ಪ್ರಭಾವದಲ್ಲಿ ಇರುವ ಬಣಜಿಗರು-ಪಂಚಮಸಾಲಿಯವರು ಬಸವ ತತ್ತ್ವದ ಪ್ರಭಾವಕ್ಕೆ ಒಳಗಾದವರು ಉದಾರವಾದಿಗಳು, ಪ್ರಗತಿಪರರೂ ಆಗಿರುವವರು. ಜಾತಿ ಜಂಗಮತ್ವಕ್ಕೆ ಮನ್ನಣೆ ಕೊಡುವ ಮುಗಧರು ಮಾತ್ರ ಪಂಚಾಚಾರ್ಯರ ಪಾಲಿಗೆ ಉಳಿದಂತಾಯಿತು. ಹೀಗಾಗಿ ನಿದ್ದೆಗೆಟ್ಟಿರುವ ಅವರು ಒಂದು ಹೊಸತಂತ್ರವನ್ನು ಹುಡುಕಿದರು. ಪಂಚಾಚಾರದವರು ಮತ್ತು ಪಂಚಾಚಾರ್ಯರು ಎರಡೂ ಪದಗಳನ್ನು ಸಮೀಕರಿಸಿ, ಕುಸಿಯುತ್ತಿರುವ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಬಹಳ ಕಷ್ಟಪಡುತ್ತಿದ್ದಾರೆ. ಎಲ್ಲ ಪಂಚಮಸಾಲಿಯವರು (ಬಣಜಿಗರು) ದಡ್ಡರೇನಲ್ಲ. ಪಂಚಾಚಾರದವರು ಎಂಬುದು ತತ್ತ್ವವಾಚಕ ಪದ. ಅದನ್ನು ಅಳವಡಿಸಿಕೊಂಡಿದ್ದರಿಂದ ಪಂಚಾಚಾರದವರು ಎಂಬ ಅನ್ವರ್ಥಕ ಹೆಸರು ಈ ಜನಕ್ಕೆ ಬಂದಿತು. ಆದ್ದರಿಂದ ಜಾಗೃತರಾದ ಪಂಚಮಸಾಲಿ (ಪಂಚಾಚಾರ)ಯವರು ಈ ತಪ್ಪು ಸಮೀಕರಣದಿಂದ ಬಸವ ಪಥದಿಂದ ದೂರಸರಿಸಿ ಬಸವ ದ್ವೇಷಿಗಳನ್ನಾಗಿ ಪಂಚಮಸಾಲಿಯವರನ್ನು ಮಾಡುವ ಪಂಚಾಚಾರ್ಯರ ಧೂರ್ತ ತಂತ್ರಕ್ಕೆ ಬಲಿಗೊಡದಂತೆ ರಕ್ಷಿಸುವುದು ಅಗತ್ಯವಿದೆ. ವರ್ಣಾಶ್ರಮ ವ್ಯವಸ್ಥೆಯನ್ನು ಇನ್ನೊಂದು ರೀತಿಯಲ್ಲಿ ತೂರಿಸಲು ಭಕ್ತ-ಮಾಹೇಶ್ವರ ಎಂಬ ತಂತ್ರವನ್ನು ಪ್ರಯೋಗಿಸುವವರ ಬಗ್ಗೆ ಎಚ್ಚರಗೊಳ್ಳಬೇಕು.

ಬೇಡ ಜಂಗಮರ ಕಥೆ

ಗುರು ಬಸವಣ್ಣನವರು ವಚನ ವಾಙ್ಮಯದಲ್ಲಿ ಪ್ರಯೋಗಿಸಿರುವ ಅತ್ಯಂತ ಕ್ರಾಂತಿಕಾರಿ ಪರಿಕಲ್ಪನೆ 'ಜಂಗಮ'. 9 ಬಗೆಯ ಅರ್ಥಗಳಿಂದ ಕೂಡಿ ಧಾರ್ಮಿಕ, ಸಾಮಾಜಿಕ, ಆರ್ಥಿಕ, ತಾತ್ತ್ವಿಕ ಎಲ್ಲ ಮುಖ್ಯಗಳನ್ನೂ ಹೊಂದಿರುವ ಈ ಪವಿತ್ರ ಪದ "ಜಂಗಮ" ವಿಕೃತಗೊಂಡು ದುರ್ಬಳಕೆಯಾಗುತ್ತಿರುವುದನ್ನು ಕಂಡು ಮನಸ್ಸು ಬಹಳ ಕಳವಳಗೊಳ್ಳುತ್ತಿದೆಯಾದರೂ ಅಷ್ಟು ಅರ್ಥಗರ್ಭಿತವಾದ ಇನ್ನೊಂದು ಪರ್ಯಾಯ ಪದ ಕಾಣದೆ ಮಾನಸಿಕ ಕ್ಲೇಶ ಉಂಟಾಗುತ್ತಿದೆ.

ಚಲನೆ, ಪರ್ಯಾಯ ಚಲನಶೀಲತೆ ಉಳ್ಳದ್ದು ಜಂಗಮ. ಒಂದು ಹೊಲವನ್ನೊ, ತೋಟವನ್ನೋ, ಖರೀದಿಸುವಾಗ, ಮಾರುವಾಗ ಅದರಲ್ಲಿರುವ ಸ್ಥಾವರ-ಜಂಗಮಾತ್ಮಕವಾದುದೆಲ್ಲವೂ ಕೊಂಡವನದು ಆಗುತ್ತದೆ. ಪುಸ್ತಕ ಸ್ಥಾವರ--ಜ್ಞಾನವು ಜಂಗಮ; ದೇಹವು ಸ್ಥಾವರ--ಆತ್ಮವು ಜಂಗಮ. ಶಿವಶಕ್ತಿಯ ಲೀಲಾವಿಲಾಸವಾದ ಜಗತ್ತು ಸ್ಥಾವರ, ಇದರಲ್ಲಿರುವ ದೇವಚೈತನ್ಯ ಜಂಗಮ. ದುಡ್ಡು ಸ್ಥಾವರ-ದುಡಿತ ಜಂಗಮ. ಇಂಥ ಅರ್ಥಗರ್ಭಿತ ಮನಸ್ಸನ್ನು ಬಿಟ್ಟುಕೊಡಲೂ ಮನಸ್ಸಿಲ್ಲ. ಲಿಂಗಾಯಿತ ಧರ್ಮದ ಜಂಗಮ ವಿರಕ್ತ, ಧರ್ಮ ಪ್ರಚಾರಕ, ಸದಾ ಸಂಚಾರಿ, ನಡೆಲಿಂಗ, ತ್ಯಾಗಿ, ಮೂಲತಃ ಚೈತನ್ಯಶಾಲಿಯಾದ ಈ ಜಂಗಮತ್ವ ಈಗ ಜಾತಿಯಾಗಿ ವಿಕೃತಗೊಂಡುದು ದೊಡ್ಡ ದುರಂತ.

ಅಲೆಮಾರಿಗಳಾದ (ಜಿಪ್ಸಿಗಳು) ಬೇಡ ಜಂಗಮ, ಬುಡುಗ ಜಂಗಮ ಮೂಲ ಜಂಗಮ ಎಂಬುವವರು ತೀರಾ ನಿಕೃಷ್ಟ ಸ್ಥಿತಿಯಲ್ಲಿರುವ ದೀನರು ; ಮಾಂಸಾಹಾರಿಗಳು, ಹಂದಿ ಸಾಕಾಣಿಕೆ ಮಾಡುವರು. ಇವರು ದಲಿತ ಹರಿಜನರಿಗಿಂತಲೂ ದಯನೀಯ ಸ್ಥಿತಿಯಲ್ಲಿ ಇದ್ದಾರೆ ಎಂದು ದಲಿತ ಸಂಘರ್ಷ ಸಮಿತಿಯವರೇ ಹೇಳುತ್ತಾರೆ. ಈ ದೀನರು ಅಲೆಮಾರಿಗಳಾದ ಕಾರಣ ಜಂಗಮ ಪದ ಬಳಕೆಯಾಗುತ್ತಲಿದೆ. ಆದರೆ ಈ ಪದವನ್ನು ಹೇಗೆ ಹುಡುಕಿದರೋ, ನಮ್ಮ ಸಮಾಜದ "ಜಂಗಮರು"(ಅದೂ ಎಲ್ಲರಿಗಿಂತಲೂ ಶ್ರೇಷ್ಠರು ಎಂದು ಬೀಗುತ್ತ ಉಳಿದ ಲಿಂಗಾಯತರನ್ನು ಬಾರಾಣೆ, ಚಾರಾಣೆ ಲಿಂಗಾಯತರನ್ನಾಗಿ ಕಂಡವರು) ಹದ್ದೆರಗಿದಂತೆ ಎರಗಿ ಆ ದಯನೀಯ ಸ್ಥಿತಿಯಲ್ಲಿ ಇರುವ ಬೇಡ-ಬುಡಗ-ಮೂಲ ಜಂಗಮರ ಸೌಲಭ್ಯಗಳನ್ನು ಕಸಿಯಲು ಸನ್ನದ್ಧರಾಗಿದ್ದಾರೆ. ಮೀಸಲಾತಿ ಸದ್ಯದಲ್ಲಿ ಜಾರಿಯಲ್ಲಿರುವುದು ಸಾಮಾಜಿಕ ನ್ಯಾಯ (Social Justice) ದಿಂದ ವಂಚಿತರಾದವರಿಗೇ ವಿನಾ ಆರ್ಥಿಕವಾಗಿ ದುರ್ಬಲರಾದವರಿಗಲ್ಲ. ಈಗ ಎಲ್ಲರೂ ಸೇರಿ ಆರ್ಥಿಕ ತಳಹದಿಯ ಮೇಲೆ ಮೀಸಲಾತಿಗಾಗಿ ಹೋರಾಡಿದರೆ ತಪ್ಪಲ್ಲ; ಆದರೆ ಸಾಮಾಜಿಕ-ಧಾರ್ಮಿಕವಾಗಿ ಹಿಂದುಳಿದವರ ಸವಲತ್ತನ್ನು ಸಾಮಾಜಿಕ-ಧಾರ್ಮಿಕವಾಗಿ ಬಲಿಷ್ಠರಾದವರು ಕಿತ್ತುಕೊಳ್ಳುವುದು ಮಾನವೀಯತೆಗೆ ಮಾಡುವ

ಅಪಚಾರ. ನಾವು ತಿಳಿದವರಾಗಿ ತಪ್ಪು ಮಾಡಬಾರದು. ಬೇಡುವ ಉದ್ಯೋಗ ಮಾಡುವ ಅಯ್ಯನವರು ಆರ್ಥಿಕವಾಗಿ ಹಿಂದುಳಿದಿರಬಹುದು - ಆದರೆ ಇವರು " ಬೇಡುವ ಜಂಗಮ" ರೇ ವಿನಾ "ಬೇಡ ಜಂಗಮ"ರಲ್ಲ. ಇವರಿಗೆ ಮನೆಗಳಲ್ಲಿ ಪ್ರವೇಶವಿದೆ, ಗೌರವ ಸ್ಥಾನವಿದೆ. ಆ ಮುಗ್ಧರು ಸಾಮಾಜಿಕ-ಧಾರ್ಮಿಕ ತುಳಿತಕ್ಕೆ ಒಳಗಾದವರು.

ಆದ್ದರಿಂದ ಅಂಥ ಮೋಸದ ವ್ಯವಹಾರವನ್ನು ಸ್ವಯಂ ಪ್ರೇರಣೆಯಿಂದ ನಿಲ್ಲಿಸಲಿ. ತುತ್ತನ್ನ, ಮೈಬಟ್ಟೆ, ನೌಕರಿಗಾಗಿ ಸುಳ್ಳು ಹೇಳುವ, ವಂಚನೆ ಮಾಡುವ ಧರ್ಮವನ್ನು ತೊರೆದು ಜಾತಿ ಹಿಡಿಯುವ ಅಸಹ್ಯತನ ಸಾಕು.

ಜಂಗಮ ಪದ ಬಳಕೆ ಬಗ್ಗೆ ಇಂದು ಎಚ್ಚರಗೊಳ್ಳಬೇಕು. ಇಲ್ಲವೋ ಪರ್ಯಾಯ ಪದವನ್ನು ಅನಿವಾರ್ಯವಾಗಿ ಹುಡುಕಬೇಕು. ಒಮ್ಮೆ ಓರ್ವ ಪ್ರೌಢರು ಹೇಳಿದರು. ನಮ್ಮೂರಿನವನೇ ಆ ಸ್ವಾಮಿ ಒಂದು ಹುಡುಗಿ ಓಡಿಸಿಕೊಂಡು ಹೋದ. ನನಗೆ ಗಾಬರಿಯಾಗಿ ಕೇಳಿದೆ. ಮಠಾಧಿಕಾರಿಯೇ? ಎಂದು. ಇಲ್ಲರೀ, ಲೆಕ್ಚರರ್ ಅವರ ಕಾಲೇಜ್ ವಿದ್ಯಾರ್ಥಿನಿ ಜೊತೆ ಪ್ರೇಮ ಕುದುರಿತು. ಕರಕೊಂಡು ಓಡಿ ಹೋದ. " ಎಂದು ವಿವರಣೆ ನೀಡಿದರು. ಈ ರೀತಿ ಮಾತನಾಡುವುದು ಎಷ್ಟು ವಿರೋಧಾಭಾಸ. ಜಂಗಮ, ಸ್ವಾಮಿ ಎಂಬ ಪದ ಜಂಗಮ (ಕಾವಿ) ಲಾಂಛನ ಧರಿಸಿದವರಿಗೆ, ಮಠ-ಪೀಠಕ್ಕೆ ಅಧಿಕಾರಿಗಳಾದವರಿಗೆ ಮೀಸಲಾಗಬೇಕು. "ಇವರೂ ಸ್ವಾಮಿಯೋರು" ಎಂದು ಇಂಜಿನಿಯರರೋ, ವೈದ್ಯರೋ, ವಕೀಲರೋ, ಒಕ್ಕಲುತನ ಮಾಡುವವರಿಗೋ ಜಾತಿ ವಾಚಕವಾಗಿ ಸುಲಭವಾಗಿ ಅನ್ನುತ್ತಾರೆ; ಉತ್ತರ ಕರ್ನಾಟಕದಲ್ಲಿ ಎಂ.ಎ., ಎಂ.ಎಸ್ಸಿ. ಓದಿದವರಿಗೆ, ಅಥವಾ ಪದವೀಪೂರ್ವ ಕಾಲೇಜಿನಲ್ಲಿ ಪಾಠ ಮಾಡುವವರಿಗೂ ಪ್ರೊಫೆಸರ್ ಎಂದಂತೆ. ಹಳೆಯ ಮೈಸೂರಿನ ಚಿತ್ರದುರ್ಗದಲ್ಲಿ ಬೆಳೆದ ನಮಗೆ ಹಾಗೆ ರೂಢಿ ಇರಲಿಲ್ಲ. ಪ್ರೊಫೆಸರ್ ಹುದ್ದೆ ಅತ್ಯಂತ ದೊಡ್ಡದು. ಗೌರವಾನ್ವಿತವಾದುದು ಎಂದು ನಾವು ತಿಳಿದಿದ್ದೆವು. ಇತ್ತ ಕಡೆ ಬಂದ ಮೇಲೆ ಸಣ್ಣವಯಸ್ಸಿನವರನ್ನು ತೋರಿಸಿ ಈತ ಕಾಲೇಜಿನಲ್ಲಿ ಪ್ರೊಫೆಸರ್ ಅದಾನೆ ಎಂದಾಗ ಗಾಬರಿ, ಗಲಿಬಿಲಿ ಎನಿಸುತ್ತಿತ್ತು. ಆಮೇಲೆ ತಿಳಿಯಿತು, ಉಪನ್ಯಾಸಕ ಅನ್ನಲು ಇದು ಸಾಮಾನ್ಯ ಪದ ಎಂದು. ಹಾಗೆಯೇ ಇಂದು ಜಂಗಮ ಪದ, ಸ್ವಾಮಿ ಅನ್ನುವ ಪದ. ಸರಿಪಡಿಸಲಾರದಷ್ಟು ತಪ್ಪು ಬಳಕೆಯಾಗುತ್ತಿದೆ. ಆದ್ದರಿಂದ ಜಂಗಮ ಪದವನ್ನು ಧರ್ಮಪ್ರಚಾರಕರಾದ, ಕಾವಿಯನ್ನು ಹೊದ್ದ ವ್ಯಕ್ತಿಗಳಿಗೆ, ಸ್ವಾಮಿ ಪದವನ್ನು ವೈರಾಗ್ಯ ಜೀವನವನ್ನು ಸ್ವೀಕರಿಸಿ ಲಾಂಛನ ಪಡೆದವರಿಗೆ, ಈ ಪದಗಳನ್ನು ಮಠ, ಪೀಠಾಧೀಶರಾದವರಿಗೆ ವಿಶೇಷವಾಗಿ ಬಳಸುವುದು, ಬಳಕೆಯನ್ನು ಕಾಯ್ದಿರಿಸುವುದು ಸೂಕ್ತ.

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ

ಜಯತು ಮಾತೆ ಮಹಾದೇವಿ

ಜಯತು ಮಾತೆ ಮಹಾದೇವಿ ಜಗದ್ಗುರುವೇ ವಂದಿಪೆ
ಜಯತು ಜಯತು ಬಸವಾತ್ಮಜೆ ಜ್ಞಾನ ನಿಧಿ ಕರುಣಿಸು ||ಪ||

ಪೂಜ್ಯ ಲಿಂಗಾನಂದರಿಗೆ ಶಿಷ್ಯೆಯಾಗಿ ಬಂದಿರಿ
ಬಸವವಾಣಿ ಸಾರುತಲಿ ಜನ-ಮನವ ಗೆಲಿದಿರಿ
ತನ್ನ ತನವನೆಲ್ಲ ಬಿಟ್ಟು ತತ್ವಕಾಗಿ ದುಡಿದಿರಿ
ಗುರು ಮೆಚ್ಚಿದ ಶಿಷ್ಯೆಯಾಗಿ ಜ್ಞಾನ ಜಗದಿ ಮೆರೆದಿರಿ ||೧||

ಸ್ತ್ರೀ ಪೀಠವ ಆರೋಹಿಸಿ ಪ್ರಥಮ ಗುರು ತಾವಾದಿರಿ
ಆತ್ಮ ಬಲದಿ ಮುನ್ನಡೆದು ಸ್ತ್ರೀಗೆ ಸ್ಫೂರ್ತಿ ನೀಡಿದಿರಿ
ಬಸವ ತತ್ವ ಕಹಳೆಯೂದಿ ಲೋಕ ಜಾಗೃತಿ ಗೈದಿರಿ
ಗುರುಮುಟ್ಟಿ ಗುರುವಾಗುವ ಸಾಧನೆಯನೆ ತೋರ್ದಿರಿ ||೨||

ತಮ್ಮ ಶ್ರಮದ ಕುರುಹಾಗಿ ಶರಣಮೇಳ ನಡೆದಿದೆ
ಶರಣ ಮೇಳ ಒಂದುಗೂಡಿ ಬಸವಗೀತೆ ಹಾಡಿದೆ
ಬಸವ ಧರ್ಮ ಪೀಠಕಿಂದು ಗುರುವು ತಾವಾದಿರಿ
ಧನ್ಯವಿಂದು ನಿಮ್ಮ ಪಡೆದು ಎಮ್ಮ ಶರಣ ಸಂತತಿ ||೩||

ಗುರು ಬಸವ ಸಂಕಲ್ಪವ ಪೂರೈಸಲು ಬಂದಿಹಿರಿ
ಶಿರ ಬಾಗಿ ನಮಿಸುವೆವು ತಮ್ಮ ಚರಣ ಕಮಲಕೆ
ಬಸವ ಪಥದಿ ನಡೆಯಲೆಮಗೆ ಮಾರ್ಗದರ್ಶಿಯಾದಿರಿ
ಜಯತು ಮಾತೆ ಮಹಾದೇವಿ ಸಚ್ಚಿದಾನಂದ ಸತಿ ||೪||

ಶರಣೆ ಭಾರತಿ ಕೆಂಪಯ್ಯ,
ಬೆಂಗಳೂರು

"ಬಸವಾಮೃತ" ಶರಣ ಮೇಳದಲ್ಲಿ ಬಿಡುಗಡೆ

"ಖಿರ್ಗೋಸಕ್ ಚಹಾ" ಎಂಬ ಒಂದು ಪಾನೀಯದ ಬಗ್ಗೆ ಇತ್ತೀಚೆಗೆ ಬಹಳ ಪ್ರಚಾರ ದೊರೆಯುತ್ತಿದೆ. ಇದು ರಶಿಯಾದ ಖಿರ್ಗೋಸಕ್ ಎಂಬ ಒಂದು ಪ್ರದೇಶದಲ್ಲಿ ದೊರೆಯುವ ಒಂದು ಜಾತಿಯ ಯೀಸ್ಟ್ (Yeast). ಹಲವಾರು ಪತ್ರಿಕೆಗಳಲ್ಲಿ ಈ ಬಗ್ಗೆ ಲೇಖನ ಪ್ರಕಟವಾಗಿವೆ. ಓರ್ವ ಜಪಾನಿ ವೈದ್ಯೆ ಖಿರ್ಗೋಸಕ್ ಪ್ರದೇಶವನ್ನು ಸಂದರ್ಶಿಸಿದಾಗ ಅಲ್ಲಿಯ ಜನ ಆರೋಗ್ಯವಂತರಾಗಿ, ದೀರ್ಘಾಯುಷಿಗಳಾಗಿ ಬದುಕುವುದು ಕಂಡು ಜಪಾನಿ ವೈದ್ಯೆ ಆಶ್ಚರ್ಯಗೊಂಡು ಗಮನಿಸಿದಾಗ ಈ ಖಿರ್ಗೋಸಕ್ ಚಹಾದ ಪಾನೀಯ ಕಾರಣ ಎಂದು ಮನವರಿಕೆಯಾಯಿತಂತೆ. ಆ ಯೀಸ್ಟಿನ ತುಂಡನ್ನು ತಂದು ಆ ಮಹಿಳೆ, ವೃದ್ಧಿಸಿ, ತನ್ನ ದೇಶದಲ್ಲಿಯೂ ಪ್ರಚಾರ ಮಾಡಿ ಕರಪತ್ರಗಳ ಮೂಲಕ ಜಗತ್ತಿನಾದ್ಯಂತ ಹಬ್ಬುವಂತೆ ಮಾಡಿದ್ದಾಳೆ. ಇದರ ಪರಿಣಾಮದ ಬಗ್ಗೆ ದೊಡ್ಡ ಪಟ್ಟಿಯನ್ನೇ ಕೊಡಲಾಗುತ್ತಿದೆ. ಯಾವುದೇ ಅಡ್ಡ ಪರಿಣಾಮಗಳಿಲ್ಲದ ನೈಸರ್ಗಿಕ ಪಾನೀಯವಿದು. ಮಧುಮೇಹ, ರಕ್ತದೊತ್ತಡ, ಉದರ ಶೂಲೆ, ಮಲಬದ್ಧತೆ, ಸ್ಥೂಲತೆಯ ಪರಿಹಾರ, ಅಕಾಲಿಕ ಮುಪ್ಪಿನ ನಿವಾರಣೆ ಅಲರ್ಜಿ ನಿವಾರಣೆ - ಹೀಗೆ ಪಟ್ಟಿಯು ಬೆಳೆಯುತ್ತಾ ಹೋಗುತ್ತದೆ.

ನಮ್ಮ ಆತ್ಮೀಯ ಸದ್ಭಕ್ತರೊಬ್ಬರು ನನ್ನ ಆರೋಗ್ಯ ಕುಂಠಿತವಾದಾಗ ಎಲ್ಲಿಂದಲೋ ಯೀಸ್ಟ್ (ಹಲವು ಜಾತಿಯ ಯೀಸ್ಟ್ ಇರುತ್ತವೆ. ಇದು ಮಾತ್ರ ಖಿರ್ಗೋಸಕ್ ಈಸ್ಟ್)ದ ತುಂಡೊಂದನ್ನು ಪಡೆದುಕೊಂಡು ಬಂದು ಉಪಯೋಗಿಸಲು ಹೇಳಿದರು. ಮೊದ ಮೊದಲು ಅಷ್ಟೊಂದು ಗಮನ ನಾನು ತೆಗೆದುಕೊಳ್ಳಲಿಲ್ಲ. ಆದರೆ ಕ್ರಮಬದ್ಧವಾಗಿ ಉಪಯೋಗಿಸಲು ತೊಡಗಿದಾಗ ಜಪಾನಿ ಮಹಿಳೆಯ ಕರಪತ್ರ ಉತ್ಪ್ರೇಕ್ಷೆಯದಲ್ಲ ಎನ್ನಿಸಿತು. ಆಗಿರುವ ಮತ್ತು ಆಗುವ ಪರಿಣಾಮಗಳ ಬಗ್ಗೆ ಒಂದು ಚಿಕ್ಕ ಪುಸ್ತಿಕೆ ಮಾಡಲಿದ್ದೇವೆ. ಕೆಲಸದ ಒತ್ತಡದಿಂದ, ಪ್ರಯಾಣದಲ್ಲಿ, ಅಪಾರ ದಣಿವು ಆಗುತ್ತಿತ್ತು. ಡಯಾಬಿಟೀಸ್‌ದಿಂದ ಬೇಗ ಬೇಗ ಹಸಿವು, ಸುಸ್ತು ಆಗುತ್ತಿತ್ತು. ಇದೆಲ್ಲವೂ ಯೀಸ್ಟದ ಉಪಯೋಗದಿಂದ ಕಮ್ಮಿಯಾಗಿವೆ.

ಆದ್ದರಿಂದ ಈ ಪಾನೀಯದ ಉಪಯೋಗವನ್ನು ಎಲ್ಲರೂ ಪಡೆಯಲೆಂದು "ಬಸವಾಮೃತ" ಎಂಬ ಹೆಸರಿನಿಂದ ಸಾರ್ವಜನಿಕರಿಗೆ ಬಿಡುಗಡೆ ಮಾಡಲು ಉದ್ದೇಶಿಸಿದ್ದೇವೆ. ಇದರ ಜೊತೆಗೆ ಒಂದು ಚಿಕ್ಕ ಕರಪತ್ರ ಕೊಡಲಾಗುವುದು. ಅದರಲ್ಲಿ ಖಿರ್ಗೋಸಕ್ ಚಹಾ ತಯಾರಿಸುವ ವಿಧಾನ, ಅದನ್ನು ಬಳಸುವ ವಿಧಾನ ಮತ್ತು ಮುಂದೆ ತಾವೇ ಅದನ್ನು ಅಭಿವೃದ್ಧಿ ಪಡಿಸುವ ವಿಧಾನ ಇವೆಲ್ಲವನ್ನೂ ವಿವರಿಸಲಾಗುವುದು. ಖಿರ್ಗೋಸಕ್ ಯೀಸ್ಟ್‌ನ ಚಹಾದ ಬಹುವಿಧ ಉಪಯೋಗ ಸಹ ತಿಳಿಸಲಾಗುವುದು.

ಅರ್ಧ ಲೀಟರಿನ ಗಾಜಿನ ಭರಣಿಯೊಳಗೆ ಯೀಸ್ಟ್ ಸಹಿತ ಖಿರ್ಗೋಸಕ್ ಪಾನೀಯವನ್ನು ಮಾರಾಟಕ್ಕೆ ಸಿದ್ಧಪಡಿಸಲಾಗುವುದು. ಬೆಲೆ 100 ರೂ. ನಮಗೆ ಈಸ್ಟ್ ತಂದುಕೊಟ್ಟವರ ಆಶಯವೂ ಸಹ ಇದನ್ನು ಸಂಸ್ಥೆಯಿಂದ ಸಿದ್ಧಪಡಿಸಿ ಜನರಿಗೆ ಕೊಡಬೇಕೆಂಬುದೇ ಆಗಿದೆ. ಆಸಕ್ತರು ಮೊದಲೇ ಪತ್ರ ಬರೆದು ತಮ್ಮ ಬಾಟಲಿಯನ್ನು ಕಾಯ್ದಿರಿಸಲು ತಿಳಿಸಬಹುದು.

ದಿ. 12.1.1996ರಂದು "ಬಸವಾಮೃತ"ವನ್ನು ಮಾರಾಟಕ್ಕೆ ಬಿಡುಗಡೆ ಮಾಡಲಾಗುವುದು. ಬಸವ ಕೃಪೆಯಿಂದ ಇದು ಎಲ್ಲರಿಗೂ ಅಮೃತವೇ ಆಗಿ, ಆರೋಗ್ಯವನ್ನು ಪುನಃಶ್ಚೇತನಗೊಳಿಸಲೆಂದು ನಮ್ಮ ಹಾರೈಕೆ. ಬಾಟಲಿ ಕೊಂಡವರಿಗೆ ವಿವರ ಸೂಚಿ ಉಚಿತ. ಕೇವಲ ವಿವರ ಸೂಚಿ ಬೇಕಾದವರೂ ಪ್ರತ್ಯೇಕವಾಗಿ ಕೊಳ್ಳಬಹುದು.

ಸಂತೋಷದ ವಿಷಯ : ಎಂಟನೆಯ ಶರಣ ಮೇಳದಲ್ಲಿ ಖರ್ಗೋಸಕ್ ಈಸ್ಟನ್ನು ಬಿಡುಗಡೆ ಮಾಡಲಾಯಿತು. ಬಹಳ ಬೇಡಿಕೆ ಬಂದಿತು. ಉಪಯೋಗಿಸಿದ ಜನರು ಒಳ್ಳೆಯ ಪರಿಣಾಮ ಕಂಡುಕೊಂಡರು. ಮೇ ತಿಂಗಳಲ್ಲಿ ನಡೆದ ಸಮ್ಮೇಳನದಲ್ಲೂ ಬಿಡುಗಡೆ ಮಾಡಿದೆವು. ಎಲ್ಲ ಬಾಟಲಿ ಖರ್ಚಾಗಿ ಉಪಯೋಗಿಸಿದ ಜನರು ಉತ್ತಮ ಪರಿಣಾಮ ಪಡೆದಿದ್ದಾರೆ. ಇದನ್ನು ಗಮನಿಸಿ ಒಂಭತ್ತನೆಯ ಶರಣ ಮೇಳಕ್ಕೂ ಖರ್ಗೋಸಕ್ ಚಹಾದ ಬಾಟಲಿಗಳನ್ನು ಸಿದ್ಧಪಡಿಸಲಾಗುತ್ತಿದೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ,
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ,
ಮಹಾಮನೆ ಮಹಾಮಠ,
ಕೂಡಲ ಸಂಗಮ - ೫೮೭ ೧೦೧

ರಾಷ್ಟ್ರೀಯ ಬಸವದಳದವರಿಗೆ ಸ್ಪಷ್ಟ ಸೂಚನೆ

1. ಶರಣ ಮೇಳದ ಕಡೆಯ ದಿವಸ ಅಂದರೆ ದಿ. 15.1.1996ರಂದು ಬೆಳಿಗ್ಗೆ 10 ಗಂಟೆಗೆ ರಾಷ್ಟ್ರೀಯ ಬಸವದಳಗಳ ಮಹಾಧಿವೇಶನ ನಡೆಯುವುದು. ಈ ಬಾರಿಯ ಅಧಿವೇಶನದಲ್ಲಿ ಸಂಘಟನಾತ್ಮಕ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಇದುವರೆಗೂ ನೊಂದಾಯಿತವಾಗಿರುವ ಎಲ್ಲ ರಾಷ್ಟ್ರೀಯ ಬಸವದಳಗಳ ಕನಿಷ್ಠ ಮೂವರು ಪದಾಧಿಕಾರಿಗಳು ಕಡ್ಡಾಯವಾಗಿ ಈ ಸಭೆಯಲ್ಲಿ ಇರಲೇಬೇಕು. ಕಾರ್ಯಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಪ್ರಧಾನ ಸಂಚಾಲಕರು ಮೂವರು ಭಾಗವಹಿಸಬೇಕು. ಯಾವ ರಾಷ್ಟ್ರೀಯ ಬಸವ ದಳಗಳು ಭಾಗವಹಿಸುವುದಿಲ್ಲವೋ ಅವುಗಳ ಹೆಸರನ್ನು ರಾಷ್ಟ್ರೀಯ ಬಸವದ ದಳಗಳ ಸದಸ್ಯತ್ವದಿಂದ ತೆಗೆದುಹಾಕಲಾಗುವುದು. ಅವರು ಮೂವರು ಒಂದು ಕಡೆ ಕುಳಿತಿರಬೇಕು. ಹಾಜರಿ ತೆಗೆದುಕೊಳ್ಳಲಾಗುವುದು.
2. ರಾಷ್ಟ್ರೀಯ ಬಸವ ದಳಗಳವರು 25ರೂ. ಶುಲ್ಕ ನೀಡಿ ತಮ್ಮ ಶಾಖೆಗಳನ್ನು ನವೀಕರಿಸಿಕೊಳ್ಳಬೇಕು. ಈ ನವೀಕರಣವನ್ನು ದಿ. 12.ರಿಂದಲೇ ಆರಂಭಿಸಬಹುದು. ಅಂದರೆ ನವೀಕರಣಕ್ಕೆ ಸಾಕಷ್ಟು ವೇಳೆಯು ದೊರೆಯುವುದು.
3. ನಿಮ್ಮ ಕ್ರಮ ಸಂಖ್ಯೆ ನಮೂದಿಸಿ, ನವೀಕರಿಸಬೇಕು.
4. ಯಾರಿಗೆ ಮಾನ್ಯತಾ ಪತ್ರ ಸಿಕ್ಕಿಲ್ಲವೋ ಅವರು ಕಾರ್ಯಾಲಯದಲ್ಲಿ ಮಾನ್ಯತಾ ಪತ್ರವನ್ನು ಪಡೆದುಕೊಳ್ಳಬೇಕು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ

ದಿ. 12.1.1996ರಂದು ಸಂಜೆ 5 ಗಂಟೆಗೆ ವಿವಿಧ ಭಾಷಿಕರ ಸಮ್ಮಿಲನ

ಶರಣ ಮೇಳಕ್ಕೆ ವಿವಿಧ ರಾಜ್ಯಗಳಿಂದ ಶರಣ ಬಂಧುಗಳು ಆಗಮಿಸುತ್ತಿದ್ದಾರೆ. ಒಂದೇ ರಾಜ್ಯದವರಿದ್ದರೂ ವಿವಿಧ ಪ್ರಾಂತ್ಯಗಳವರಿಗೆ ಪರಸ್ಪರ ಪರಿಚಯ ಇರದು. ಆದ್ದರಿಂದ 9ನೆಯ ಶರಣ ಮೇಳದಲ್ಲಿ ಒಂದು ವಿಶೇಷ ಕಾರ್ಯಕ್ರಮ ಪ್ರಾಯೋಜಿಸಲಾಗಿದೆ. ಪ್ರತಿವರ್ಷವೂ ಜನವರಿ 12ರಂದು ಸಂಜೆ 5 ಗಂಟೆಗೆ ಬಸವ ಧರ್ಮದ ಮಹಾಜಗದ್ಗುರುಗಳ ಪೀಠಾರೋಹಣದ ವಾರ್ಷಿಕೋತ್ಸವ ಇರುತ್ತಿತ್ತು. ಈ ಬಾರಿ ಪೀಠಾರೋಹಣವು ದಿ. 13.1.1996ರಂದು ಬೆಳಿಗ್ಗೆ 10ಕ್ಕೆ ನಡೆಯಲಿದೆ. ಆದ್ದರಿಂದ ದಿ. 12 ರಂದು ಸಂಜೆ 5 ಗಂಟೆಗೆ ಬೇರೆ ಬೇರೆ ಭಾಷಿಕರಿಗೆ ಒಂದೊಂದು ಸಭಾಂಗಣ ಒದಗಿಸಿಕೊಡಲಾಗುವುದು. ಅವರು ತಮ್ಮ ಪ್ರಾಂತೀಯ ಭಾಷೆಯಲ್ಲೇ ಕಾರ್ಯಕ್ರಮವನ್ನು ನಡೆಸಿಕೊಳ್ಳಬಹುದು. ಇದೇ ಸಂದರ್ಭದಲ್ಲಿ ಆಯಾ ರಾಜ್ಯ ಸಮಿತಿ ಸಹ ರಚಿಸಲಾಗುವುದು. ಬೇರೆ ಬೇರೆ ಭಾಷಿಕರಿಗೆ ಒಂದಗಿಸುವ ಸ್ಥಳದ ವಿವರ ಸ್ಥಳೀಯವಾಗಿ ನೀಡಲಾಗುವುದು.

ವಿ.ಸೂ.: ಆದಿ ಪ್ರಮಥರ ಪ್ರಾರ್ಥನೆ, ಮಂಗಲ, ಒಂದೆರಡು ವಚನ ಗಾಯನ ಬಿಟ್ಟರೆ ಉಳಿದಂತೆ ಹಾಡು, ನರ್ತನ, ನಾಟಕ ಮುಂತಾದ ಚಟುವಟಿಕೆಯಲ್ಲಿ ಸಮಯ ವ್ಯರ್ಥ ಮಾಡದೆ ಶರಣ ಬಂಧುಗಳು ಗಂಭೀರವಾಗಿ ತಮ್ಮ ಧರ್ಮಬಂಧುಗಳು ಎದುರಿಸುವ ಸಮಸ್ಯೆ, ಆಗಬೇಕಾದ ಸಂಘಟನೆ, ಹಾಕಿಕೊಳ್ಳಬೇಕಾದ ಯೋಜನೆ ಕುರಿತು ಚಿಂತನೆ ಮಾಡಿ, ನಿರ್ಣಯಗಳನ್ನು ತೆಗೆದುಕೊಳ್ಳಬೇಕು.

ಬೇರೆ ಬೇರೆ ಪ್ರಾಂತ್ಯದವರಿಗೆ ಕೊಡುವ ಸಭಾವಕಾಶ

1. ಕರ್ನಾಟಕ 2. ಮಹಾರಾಷ್ಟ್ರ 3. ಆಂಧ್ರಪ್ರದೇಶ 4. ತಮಿಳುನಾಡು ರಾಷ್ಟ್ರೀಯ ಬಸವ ದಳ ಜಿಲ್ಲಾ ಸಮಿತಿ ರಚನೆ

ಕರ್ನಾಟಕದ ಕೆಲವೊಂದು ಜಿಲ್ಲೆಗಳಲ್ಲಿ ರಾಷ್ಟ್ರೀಯ ಬಸವ ದಳಗಳು ಸಾಕಷ್ಟು ಸಂಖ್ಯೆಯಲ್ಲಿ ಆಗಿವೆ. ಜಿಲ್ಲಾ ಕೇಂದ್ರದಲ್ಲಿರುವ ತಾಲ್ಲೂಕು ಸಮಿತಿಯಲ್ಲಿ ಅವು ಸ್ಥಳೀಯ ಘಟಕಗಳು ಆಗುತ್ತವೆ. ಎಲ್ಲ ರಾಷ್ಟ್ರೀಯ ಬಸವ ದಳಗಳಿಂದ ಪ್ರತಿನಿಧಿಗಳನ್ನು ತೆಗೆದುಕೊಂಡು ಒಂದು ಜಿಲ್ಲಾ ಕಮಿಟಿ, ಅದರಲ್ಲಿ ಒಂದು ಕಾರ್ಯಕಾರಿ ಸಮಿತಿ ಮಾಡುವ ಉದ್ದೇಶವಿದೆ. ಇದೂ ಸಹ ದಿ. 12.1.96ರಂದು ಸಂಜೆ 5 ಗಂಟೆಗೆ ಸಾಧ್ಯವಿದೆ. ಈ ರೀತಿ ಮಾಡಲು ಆಲೋಚಿಸಿರುವ ಜಿಲ್ಲೆಗಳು

1. ಬೆಂಗಳೂರು 2.ಬೆಳಗಾಂವ 3.ಬೀದರ 4.ಧಾರವಾಡ 5.ಬಿಜಾಪುರ 6.ಚಿತ್ರದುರ್ಗ ಈ ಜಿಲ್ಲೆಗಳಲ್ಲಿರುವ ವಿವಿಧ ರಾ.ಬ. ದಳದವರು ತಮ್ಮ ಘಟಕಗಳಿಂದ ಜಿಲ್ಲಾ ಸಮಿತಿಗೆ ಯಾರನ್ನು ಆಯ್ದು ಆರಿಸುವರೋ ಅವರ ಬಗ್ಗೆ ಗಮನ ಹರಿಸಲು ಸಾಧ್ಯವಾಗುವುದು.

ದಿ. 15.1.1996ರಂದು ಮಹಾಧಿವೇಶನ

ರಾಷ್ಟ್ರೀಯ ಬಸವ ದಳಗಳ ಮಹಾಧಿವೇಶನವು ದಿ. 15.1.96 ರಾಷ್ಟ್ರೀಯ ಬಸವ ದಳಗಳ ಸಮಾರಂಭದಲ್ಲಿ ನಡೆಯುವುದಷ್ಟೇ. ಬೆಳಿಗ್ಗೆ 10ರಿಂದ 2ರ ವರೆಗೆ ನಡೆಯುವ ಈ ಸಭೆಯಲ್ಲಿ ಪ್ರತಿ ರಾಷ್ಟ್ರೀಯ ಬಸವ ದಳದಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಬೇಕು ಮತ್ತು ಕನಿಷ್ಟ ಪಕ್ಷ ಅಧ್ಯಕ್ಷರು, ಕಾರ್ಯದರ್ಶಿ ಮತ್ತು ಕೋಶಾಧ್ಯಕ್ಷರು ಹಾಜರಿರಲೇಬೇಕು. ಕೆಲವು ರಾಷ್ಟ್ರೀಯ ಬಸವದಳಗಳವರು ನಾಮಕಾವಸ್ಥೆಗೆ ಶಾಖೆ ತೆರೆದು ಯಾವುದೇ ಕೇಂದ್ರದೊಡನೆ ಸಂಪರ್ಕ ಬಲಪಡಿಸಿಕೊಳ್ಳದೆ ತಮತಮಗೆ ತಿಳಿದಂತೆ ಕಾರ್ಯಕ್ರಮ ಮಾಡಿಕೊಳ್ಳುವರು. ಆದ್ದರಿಂದ ಅವರು ಕಡ್ಡಾಯವಾಗಿ ಭಾಗವಹಿಸಿ ತಾವು ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮ ಕುರಿತು ಚಿಂತನೆ ಮಾಡುವುದು ಅಗತ್ಯವಿದೆ. ಆದ್ದರಿಂದ ಮೂವರು ಪದಾಧಿಕಾರಿಗಳಿಗೆ ಮಹಾಧಿವೇಶನದಲ್ಲಿ ಭಾಗವಹಿಸುವಿಕೆಯನ್ನು ಕಡ್ಡಾಯ ಮಾಡಲಾಗಿದೆ.

ವಿವಿಧ ವಿಭಾಗಗಳು

ಲಿಂಗಾಯತ ಧರ್ಮ ಮಹಾಸಭಾ ಮತ್ತು ರಾಷ್ಟ್ರೀಯ ಬಸವದಳಗಳ ಅಂಗಗಳಾಗಿ ಕೆಲವೊಂದು ಸಂಘಟನೆಗಳನ್ನು ಮಾಡಲಾಗಿದೆ. ದಿ. 7.11.1995 ರಂದು ಬೀದರದಲ್ಲಿ ನಡೆದ 201ನೆಯ ಬಸವ ಜ್ಯೋತಿ ಕಾರ್ಯಕ್ರಮದ ನಿಮಿತ್ತ ಶರಣ ಗಣ ಸಮ್ಮೇಳನದಲ್ಲಿ ನಡೆದ ಸಭೆಯಲ್ಲಿ ಕೆಲವೊಂದು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ.

1. ರಾಷ್ಟ್ರ ಕಲ್ಯಾಣ ವಿದ್ಯಾರ್ಥಿ ಗಣ: ಪಿ.ಯು.ಸಿ. ಮಟ್ಟದ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ಮಾಡುವವರು.

2. ಗಣ ದುಂದುಬಿ : ವಿದ್ಯಾಭ್ಯಾಸದಲ್ಲಿರದಿದ್ದರೂ ಬೇರೆ ಬೇರೆ ಕಾಯಕಗಳಲ್ಲಿರುವ 18 ವರ್ಷ ವಯಸ್ಸಿನ ಮೇಲೆ ಇರುವ ಯುವಕ ಯುವತಿಯರು.

3. ಅಕ್ಕ ನಾಗಲಾಂಬಿಕಾ ಮಹಿಳಾ ಗಣ: ಶರಣ ಧರ್ಮವು ಅಕ್ಕ ಮಹಾದೇವಿಯಂತಹ ವೀರ ವೈರಾಗ್ಯ ನಿಧಿ, ದಾರ್ಶನಿಕಳನ್ನು ಜಗತ್ತಿಗೆ ಕೊಟ್ಟುದು ಮಾತ್ರವಲ್ಲ, ನೀಲಾಂಬಿಕೆ, ಲಿಂಗಮ್ಮರಂತಹ ಆದರ್ಶ ಗೃಹಿಣಿಯರನ್ನು, ಯೋಗಿಣಿಯರನ್ನು ಕಾಣ್ಕೆಯಾಗಿ ನೀಡಿದೆ. ಕೆಳದಿ ಚನ್ನಮ್ಮ, ಕಿತ್ತೂರು ಚನ್ನಮ್ಮ, ಬೆಳವಡಿ ಮಲ್ಲಮ್ಮರಂತಹ ವೀರ ರಾಣಿಯರಿಗೆ ಸ್ಫೂರ್ತಿಯನ್ನೂ ನೀಡಿದ ವೀರಮಾತೆ ಅಕ್ಕ ನಾಗಲಾಂಬಿಕೆ. ವಚನ ವಾಙ್ಮಯ ರಕ್ಷಣೆಯಲ್ಲಿ ಆಕೆಯ ಪಾತ್ರ ಬಲು ಹಿರಿದು. ಅಂಥ ಅಕ್ಕಲಾಗಲಾಂಬಿಕೆಯ ಹೆಸರಿನಲ್ಲಿ ಮಹಿಳಾ ಗಣವನ್ನು ಆರಂಭಿಸಿದ್ದು, ಇದು ಶರಣೆಯರ ಒಕ್ಕೂಟವಾಗಿರುತ್ತದೆ.

4. ಶರಣ ನನೆ : 10ವರ್ಷ ಮೇಲ್ಪಟ್ಟು 18ರ ಒಳಗಿನ ವಯಸ್ಸಿನ ಯುವಕ-ಯುವತಿಯರ ಒಕ್ಕೂಟವಾಗಿ ಶರಣ ನನೆ ಇರುತ್ತದೆ.

5. 5 ವರ್ಷಗಳ ಮೇಲಿನ 10 ವರ್ಷಗಳ ಕೆಳಗಿನ ಮಕ್ಕಳ ಒಕ್ಕೂಟವಾಗಿ 'ಬಸವ ಸಿರಿ' ರೂಪಿಸಲಾಗಿದೆ.

ಶರಣ ಮೇಳವು ತಾತ್ತ್ವಿಕ ಮತ್ತು ಭಾಕ್ತಿಕ ಕಾರ್ಯಕ್ರಮವು ಆದುದರಿಂದ ಎಲ್ಲರಿಗೂ ಮಾತನಾಡಲು ಅವಕಾಶವು ಲಭ್ಯವಾಗದು. ಆದ್ದರಿಂದ ದಿ. 12.1.96ರಂದು ಸಂಜೆ 5 ಗಂಟೆಗೆ ಈ ಎಲ್ಲಾ ವಿವಿಧ ಸಂಘಟನೆಗಳವರಿಗೆ ಪ್ರತ್ಯೇಕ ಸಭಾಂಗಣ ಒದಗಿಸಿ ಸಮಯಾವಕಾಶ ನೀಡಲಾಗುವುದು. ಆದ್ದರಿಂದ ಬಸವ ಧರ್ಮ ಸಂಸತ್ ಸಭೆಯಲ್ಲಿ ಸೂಚನೆ ನೀಡುವ ಪ್ರಕಾರ ಈ ಎಲ್ಲ ವರ್ಗಗಳವರು ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

ವಿಶೇಷ ಎಚ್ಚರಿಕೆ : ಶರಣ ಧರ್ಮ-ಸಂಸ್ಕೃತಿಗೆ ಹೊರತಾದ ಯಾವುದೇ ಚಟುವಟಿಕೆ, ಸಾಂಸ್ಕೃತಿಕ ಕಾರ್ಯಕ್ರಮದ ಹೆಸರಿನಲ್ಲಿ ಲೌಕಿಕ ಹಾಡು, ಸಿನೆಮಾ ಸಂಗೀತ, ಲೌಕಿಕ ನೃತ್ಯ ಎಲ್ಲವನ್ನೂ ನಿಷೇಧಿಸಲಾಗಿದೆ.

ಸಾಮೂಹಿಕ ಆಟಗಳು

"ಶರಣ ಮೇಳದಲ್ಲಿ ಕೂಡಿ ಆಡಿಪಾಡಿ ನಲಿವೆವು"ಎಂಬ ವಾಕ್ಯವನ್ನು ಸಾಕಾರಗೊಳಿಸುವಂತೆ ಸಾಮೂಹಿಕ ಆಟಗಳನ್ನು ಏರ್ಪಡಿಸಲಾಗಿದೆ. ದಿ. 12.1.1996ರಂದು ಮಧ್ಯಾಹ್ನ 4.30 ರಿಂದ 5.30ರವರೆಗೆ ಈ ಸಾಮೂಹಿಕ ಆಟ ಆಡಿಸಲಾಗುವುದು. ಬೀದರಿನ ರಾಷ್ಟ್ರೀಯ ಬಸವ ದಳದ ಪ್ರಮುಖ ಕಾರ್ಯಕರ್ತೆಯೂ, ಗಣನಾಯಕಿಯೂ ಆದ ಸೋದರಿ ಅನ್ನಪೂರ್ಣ ಹಂಗರಗಿ ಮತ್ತು ಸೋದರಿ ಗಂಗಾಂಬಿಕೆ ಪಾಟೀಲ ಅವರ ನಿರ್ದೇಶನದಲ್ಲಿ ಆಟಗಳು ಶ್ರೀ ಸಂಗಮೇಶ್ವರ ಶಾಲೆ ಮತ್ತು ಬೋರ್ಡಿಂಗ್‌ದ ಆಟದ ಮೈದಾನದಲ್ಲಿ ನಡೆಯುತ್ತದೆ. ಎಲ್ಲ ವಯಸ್ಸಿನವರೂ ಇದರಲ್ಲಿ ಭಾಗಿಗಳಾಗಬೇಕು.

ಆಟದ ನಂತರ ಅಲ್ಪವಿರಾಮ, ಚಹಾಪಾನ; ನಂತರದ ವಿವಿಧ ರಾಜ್ಯಗಳಿಗಾಗಿ ಸಮಾವೇಶ, ಜಿಲ್ಲಾ ಸಮಿತಿಗಳ ರಚನೆ.

ಮಹಾರಾಷ್ಟ್ರ ಲಿಂಗಾಯತರಿಗಾಗಿ ವಿಶೇಷ ಕರೆ

ಮಹಾರಾಷ್ಟ್ರವು ಬಹುದೊಡ್ಡ ರಾಜ್ಯವಾಗಿದ್ದು ಕರ್ನಾಟಕದ ನಂತರ ಲಿಂಗಾಯತರ ಸಂಖ್ಯೆಯಲ್ಲಿ ಎರಡನೆಯ ಸ್ಥಾನ ಪಡೆಯುತ್ತದೆ. ಆದರೆ ಲಿಂಗಾಯತ ಧರ್ಮೀಯರು ಹರಿದು ಹಂಚಿ ಹೋಗಿದ್ದು, ಅವರುಗಳನ್ನು ಸಂಘಟಿಸಲೋಸುಗ ಒಂಭತ್ತನೆಯ ಶರಣ ಮೇಳದಲ್ಲಿ ವಿಶೇಷ ಸಭೆಯೊಂದನ್ನು ಏರ್ಪಡಿಸಲಾಗಿದೆ. ದಿ. 12.1.1996 ರಂದು ಸಂಜೆ 6 ಗಂಟೆಗೆ, ಮರಾಠಿ ಮಾತನಾಡುವ ವಿವಿಧ ಪ್ರಾಂತ್ಯಗಳ ಲಿಂಗಾಯತರು ಪ್ರತ್ಯೇಕ ಸಭೆಯೊಂದರಲ್ಲಿ ಭಾಗಿಯಾಗಿ, ಮಹಾರಾಷ್ಟ್ರ ರಾಜ್ಯ ಘಟಕ, ವಿವಿಧ ಜಿಲ್ಲಾ ಘಟಕ, ತಾಲ್ಲೋಕು ಮತ್ತು ಗ್ರಾಮ ಘಟಕಗಳನ್ನು ರಚಿಸಲಾಗುವುದು. ಆದ್ದರಿಂದ ಮಹಾರಾಷ್ಟ್ರ ಪ್ರಾಂತ್ಯದ ವಿವಿಧ ಊರುಗಳಿಂದ ಮತ್ತು ಗಡಿನಾಡುಗಳಲ್ಲಿದ್ದು ಕನ್ನಡ ಸರಿಯಾಗಿ ಓದಲು -ಬರೆಯಲು ಬರದ ಮರಾಠಿ ಭಾಷಿಕರು ಅಧಿಕ ಸಂಖ್ಯೆಯಲ್ಲಿ ಈ ಸಭೆಗೆ ಆಗಮಿಸಿ ಸಂಘಟನೆಗೆ ನೆರವಾಗಬೇಕೆಂದು ಆಶಿಸುತ್ತೇವೆ.

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ಮಹಾಜಗದ್ಗುರು ಪೀಠ
ಕೂಡಲ ಸಂಗಮ

ವೈಜ್ಞಾನಿಕ ವಿಧಾನದಿಂದ ಸಿದ್ಧಪಡಿಸಿದ ಅಷ್ಟಬಂಧ ಸಹಿತ ಇಷ್ಟಲಿಂಗ

ಹುಬ್ಬಳ್ಳಿ ತಾಲ್ಲೂಕಿನ ಶಿರಗುಪ್ಪಿ ಗ್ರಾಮದಲ್ಲಿರುವ ವೃತ್ತಿ (ಕಾಯಕ)ಯಿಂದ ವ್ಯಾಪಾರಸ್ಥರು, ಉದ್ಯಮಿಗಳೂ ಆಗಿ (ಪ್ರವೃತ್ತಿಯಿಂದ ಶಿವಯೋಗ ಸಾಧಕರಾಗಿರುವ /ಶರಣ ಬಸವರಾಜಪ್ಪ ಮೆಣಸಿನಕಾಯಿ ಇವರದ್ದು ಒಂದು ಬಹುದೊಡ್ಡ ಸಾಧನೆ ಮತ್ತು ಕೊಡುಗೆ - ವೈಜ್ಞಾನಿಕವಾದ ಇಷ್ಟಲಿಂಗ ನಿರ್ಮಾಣ. ಅವರ ಬಗ್ಗೆ ಬಹಳ ದಿವಸಗಳಿಂದ ಕೇಳಿ ಬಲ್ಲೆನಾದರೂ ಪ್ರತ್ಯಕ್ಷ ಭೇಟಿ ಮತ್ತು ಚರ್ಚೆ ನಡೆದುದು 1995ರ ನವೆಂಬರ್ 13 ರಂದು. ಧರ್ಮಪಿತ, ವಿಶ್ವಗುರು ಬಸವಣ್ಣನವರ ಶ್ರೇಷ್ಠ ಕೊಡುಗೆಯಾದ ಇಷ್ಟಲಿಂಗದ ರೂಪ, ರಚನೆ, ನಿರ್ಮಾಣದ ರಹಸ್ಯವನ್ನು ಅರಿಯಲು ಶರಣ ಬಸವರಾಜಪ್ಪ ಅಪಾರ ಸಾಹಸ ಮಾಡಿದ್ದಾರೆ. ಸಂತೆ ಹೊತ್ತಿಗೆ ಮೂರು ಮೊಳ ನೇಯುವಂತೆ ಇಷ್ಟಲಿಂಗ ಸಿದ್ಧಪಡಿಸುವ ಕಂಥೆ ಕಾಯಕದವರೇ ಬಹಳವಿರುವಾಗ, ಜಾತ್ರೆಯಲ್ಲಿ 'ಪ್ಲಾಸ್ಟಿಕ್ ಗಡಿಯಾರ ಕಟ್ಟಿಕೊಂಡು ಸಂತೋಷದಿಂದ ಬೀಗುವ ಬಾಲಿಶ ಬುದ್ಧಿಯ ಮಕ್ಕಳಂತೆ ಎಂಥದೋ ಒಂದು ಇಷ್ಟಲಿಂಗವನ್ನು ಕಟ್ಟಿಕೊಳ್ಳುವ ಲಿಂಗಾಯತರ ಸಂಖ್ಯೆಯೇ ಬಹಳವಿರುವಾಗ, ಇಷ್ಟಲಿಂಗವು ಅಂಧಕನ ಕೈಯ ದರ್ಪಣದಂತಿದೆಯಲ್ಲಾ ಎಂಬ ಕೊರಗು ಹೊಂದಿ, ಸ್ವಂತ ಪರಿಶ್ರಮದಿಂದ ಅಂತೂ ಕಂತೆಯ ರಹಸ್ಯವನ್ನು ಶರಣ ಬಸವರಾಜಪ್ಪ ತಿಳಿಯಲು ಸಮರ್ಥರಾದುದು ಅವರ ವಿದ್ವತ್‌ಪೂರ್ಣ ಮಾತುಗಳಿಂದ ಮನವರಿಕೆಯಾಯಿತು.

"ಇಲ್ಲಿಯವರೆಗೆ ನಾನು ಬಹಳ ಕಷ್ಟಪಟ್ಟು ಇಂಥ ಇಷ್ಟಲಿಂಗ ಮಾಡಿ ಕೊಟ್ಟಿದ್ದೇನೆ. ನನ್ನ ಕಾಯಕದ ಮಧ್ಯೆ ಇದನ್ನು ಹೆಚ್ಚು ಪ್ರಮಾಣದಲ್ಲಿ ಮಾಡಲು ಆಗದು. ತಾವು ಸಂಸ್ಥೆಯ ಮೂಲಕ ಮಾಡಿಸುವ ವ್ಯವಸ್ಥೆ ಮಾಡಿದರೆ ನನಗೆ ಸಂತೋಷವೆನಿಸುತ್ತದೆ " ಎಂದು ವಿನಂತಿಸಿದರು. ಅವರ ಕಳಕಳಿ ನೋಡಿ ನನಗೆ ಆನಂದ - ಆಶ್ಚರ್ಯ ಉಂಟಾದವು. ನಮ್ಮ ಸಂಸ್ಥೆಯಲ್ಲೀಗ ಕಂತೆ ಕಾಯಕ ಮಾಡುವ ಶರಣ. ಶಿವಲಿಂಗಪ್ಪನೂ ಉತ್ಸಾಹದಿಂದ ಸಿದ್ಧರಾಗಿ ಶರಣ ಬಸವರಾಜಪ್ಪನವರಿಂದ ತರಬೇತಿ ಪಡೆದು ಬಂದಿದ್ದಾರೆ. ಮ್ಯಾಗ್ನೆಟ್ ಒಳಗಿಟ್ಟು, ಎಂಟು ವಿಶೇಷ ರಾಸಾಯನಿಕಗಳನ್ನು ಹಾಕಿ ತ್ರಾಟಕ ಯೋಗಕ್ಕೆ ಸಾಧನಕಾರಿಯಾದ ವಿಶೇಷ ಲಿಂಗಗಳನ್ನೂ ಸಿದ್ಧಪಡಿಸುವ ಕಾಯಕ ಆರಂಭವಾಗಿದೆ. ಅಂಗುಷ್ಟ ಪ್ರಮಾಣದ ಈ ವೈಜ್ಞಾನಿಕ ತಯಾರಿಕೆಯ ಇಷ್ಟಲಿಂಗದ ಬೆಲೆ 200 (ಎರಡು ನೂರು) ರೂಪಾಯಿ. ಇದನ್ನು ಮಾಡುವ ಹಿಂದೆ ಅಪಾರ ಶ್ರಮವಿದೆ. ಆದ್ದರಿಂದ ವಿಶೇಷವಾಗಿ ತ್ರಾಟಕಯೋಗ ಸಾಧನೆ ಮಾಡಬೇಕು ಎನ್ನುವವರು ಮಾತ್ರ ಈ ವಿಶೇಷ ಲಿಂಗಗಳನ್ನು ಖರೀದಿಸಬೇಕು. ಜನರ ಬೇಡಿಕೆಗೆ ತಕ್ಕಂತೆ ಒದಗಿಸಲು ಸಾಧ್ಯವಾಗಲಿಕ್ಕಿಲ್ಲ. ಉಳಿದಂತೆ ಎಲ್ಲರಿಗೆ ತುಪ್ಪದ ಕಂಥೆ, ಸಾದಾ ಕಂಥೆಯ ಲಿಂಗ ಮಾರಾಟಕ್ಕೆ ಇರುತ್ತವೆ.

ಒಂದು ವೇಳೆ ಕೇಳಿದ ಆಸಕ್ತರೆಲ್ಲರಿಗೂ ಶರಣ ಮೇಳದ ಸಮಯದಲ್ಲಿ ಕೊಡಲು ಆಗದೆ ಇದ್ದರೆ, ಅವರಿಂದ ಮುಂಗಡವಾಗಿ ಹಣ ಪಡೆದು ಹೆಸರು -ವಿಳಾಸ ನೋಂದಾಯಿಸಿಕೊಂಡು ಸಿದ್ಧವಾದ ಮೇಲೆ ಕಳಿಸುವ ಏರ್ಪಾಡು ಮಾಡಲಾಗುವುದು. ಆದ್ದರಿಂದ ತೀವ್ರವಾದ ಸಾಧನೆಯ ಆಸಕ್ತಿ ಇರುವವರು ಮಾತ್ರ ಈ ವೈಜ್ಞಾನಿಕ ಇಷ್ಟಲಿಂಗವನ್ನು ಪಡೆಯಲು ಯತ್ನಿಸಬೇಕಾಗಿ ಸೂಚಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಓಂ ಶ್ರೀ ಗುರು ಬಸವಲಿಂಗಾಯ ನಮಃ

ಬಸವ ಧರ್ಮ ಪೀಠ (ರಿ) ದ ಆಶ್ರಯದ

ರಾಷ್ಟ್ರೀಯ ಬಸವ ದಳ

ಮಹಾಮನೆ ಮಹಾಮಠ, ಕೂಡಲ ಸಂಗಮ - 587 115

ತಾ|| ಹುನಗುಂದ, ಜಿಲ್ಲೆ-ಬಿಜಾಪುರ

ಶರಣ ಬಂಧುಗಳೇ,

ವಿಶ್ವಗುರು ಬಸವಣ್ಣನವರು ಮಾನವ ಸಮಾಜದಲ್ಲಿ ಭಾವೈಕ್ಯತೆಯನ್ನು ತರಲಿಕ್ಕೋಸುಗವಾಗಿ ಅಪಾರವಾಗಿ ಶ್ರಮಿಸಿದರು. ಜಾತಿ-ಮತ-ವರ್ಣ-ವರ್ಗ ಭೇದಗಳನ್ನು ನಿವಾರಿಸಲು ಧರ್ಮವನ್ನೇ ಸಾಧನವಾಗಿ ಮಾಡಿಕೊಂಡರು. "ಕಾಗೆಯೊಂದಗುಳ ಕಂಡಡೆ ಕೂಗಿ ಕರೆಯದೆ ತನ್ನ ಬಳಗವೆಲ್ಲವನು? ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವನು? ಎಂದು ತಿಳಿಸಿ, ಶಿವಭಕ್ತರಾಗಿ ಭಕ್ತಿಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಳಿಗಿಂತ ಕನಿಷ್ಠ" ಎಂದು ಸಂಘ ಜೀವನದ ಮಹತ್ವವನ್ನು ಸಾರಿದರು. ಧರ್ಮಪಿತರ ಈ ಆದೇಶ ಮತ್ತು ಆಶಯವನ್ನು ಪೂರೈಸಲು ಪ್ರತಿ ಊರು, ಗ್ರಾಮಗಳಲ್ಲಿ ರಾಷ್ಟ್ರೀಯ ಬಸವ ದಳವನ್ನು ತೆರೆಯಿರಿ. ಅರ್ಜಿಪತ್ರ ತೆಗೆದುಕೊಂಡು ತುಂಬಿ, ಕಾರ್ಯಕಾರಿ ಸಮಿತಿ ರಚಿಸಿ, 55 ರೂ ಕೊಟ್ಟು ನೋಂದಾಯಿಸಿ ಮಾನ್ಯತೆ ಪಡೆದು ನಿಮ್ಮ ಊರುಗಳಲ್ಲಿ ವಾರದ ಪ್ರಾರ್ಥನೆ, ಶರಣರ ಜಯಂತಿ ಆಚರಣೆ ಮುಂತಾಗಿ ಮಾಡಿರಿ.

ಈ ಸಂಘಟನೆಯ ಧ್ಯೇಯ ಜಾತಿವರ್ಣವರ್ಗರಹಿತ ಧರ್ಮಸಹಿತ ಕಲ್ಯಾಣರಾಜ್ಯ ನಿರ್ಮಾಣ. ಇದರ ಕೆಲವು ಸೂತ್ರಗಳು ಹೀಗಿವೆ :

ಧರ್ಮಬೇಕು, ಜಾತಿ ಬೇಡ
ದೇವರು ಬೇಕು, ಪುರೋಹಿತಶಾಹಿ ಬೇಡ
ಧರ್ಮಾಭಿಮಾನ ಬೇಕು, ಮತಾಂಧತೆ ಬೇಡ
ವೈಚಾರಿಕತೆ ಬೇಕು, ನಾಸ್ತಿಕತೆ ಬೇಡ
ವಿನಯಬೇಕು, ಹೇಡಿತನ ಬೇಡ.

ದೇವನೊಬ್ಬನೆ ತಂದೆ, ಮನುಜರೆಲ್ಲರು ಒಂದೆ
ಮರ್ತ್ಯಲೋಕವೆಂಬುದು ಕರ್ತಾರರ ಕಮ್ಮಟ
ಕುಲತನ ಇರುವುದು ಜಾತಿಯಲ್ಲಲ್ಲ, ಗುಣ ನಡತೆಗಳಲ್ಲಿ
ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು.

ಘೋಷಣೆಗಳು

ಭಾರತ ದೇಶ, ಜೈ ಬಸವೇಶ
ಬಸವ ದಳದ ವೀರ, ಹಿಮ್ಮೆಟ್ಟದ ಧೀರ
ಬಸವದಳದ ವ್ಯಕ್ತಿ, ದೇಶಕ್ಕೊಂದು ಶಕ್ತಿ
ಬಸವ ದಳದ ಶರಣ, ದೇಶದ ಆಶಾಕಿರಣ
ಕಟ್ಟುವೆವು ನಾವ್ ಕಟ್ಟುವೆವು
ಕಲ್ಯಾಣರಾಜ್ಯವ ಕಟ್ಟುವೆವು.

ಬಸವ ಧರ್ಮದ ಮಹಾ ಜಗದ್ಗುರು ಪೀಠದ ಧ್ಯೇಯೋದ್ದೇಶ

ಬಸವ ಪೀಠವು ಎದ್ದು | ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು | ಧರೆಯವಗೆ
ವಶವಾಗದಿಹುದೆ ಸರ್ವಜ್ಞ?

ವಿಶ್ವಗುರು ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಅವತರಿಸಿ ಬಂದ ಮಾನವತಾವಾದಿ, ಮಹಾಗುರು, ಮಂತ್ರಪುರುಷ, ಸಮತಾವಾದಿ. ಮರ್ತ್ಯಲೋಕದ ಈ ಕರ್ತನ ಕಮ್ಮಟವನ್ನು ಸ್ವಾರ್ಥಿಯಾದ ಮಾನವ ಮತ್ತು ಪಟ್ಟಭದ್ರ ಹಿತಾಸಕ್ತರು ವರ್ಣ, ಜಾತಿ, ವರ್ಗ, ಅಂತಸ್ತು ಭೇದಗಳಿಂದ ಅಂದಗೆಡಿಸಿದ್ದನ್ನು ಕಂಡು, ಮನನೊಂದು ಕರ್ತನ ಮೇಲಿನ ಅನನ್ಯವಾದ ಭಕ್ತಿಯಿಂದಲೂ, ಸೃಷ್ಟಿಯ ಬಗೆಗಿದ್ದ ಅಭಿಮಾನದಿಂದಲೂ, ಮಾನವ ಕುಲದ ಮೇಲಿನ ಉತ್ಕಟವಾದ ಪ್ರೀತಿಯಿಂದಲೂ ಬಸವಣ್ಣನವರು ಸುಧಾರಣೆಯನ್ನು ಕೈಗೊಂಡರು. ಮಾನವೀಯ ಮೌಲ್ಯಗಳನ್ನು ಜನಮನದಲ್ಲಿ ಬಿತ್ತಿದರು. ಧರ್ಮವೇ ಸಾಧನ ಮತ್ತು ವಿಶ್ವಕಲ್ಯಾಣವೇ ಗುರಿ ಎಂದು ಭಾವಿಸಿದ ಅವರು ಯಾವುದೇ ಭೇದವಿಲ್ಲದೆ ಎಲ್ಲರಿಗೂ ಧಾರ್ಮಿಕ ಸಮಾನತೆ-ಸ್ವಾತಂತ್ರ್ಯಗಳನ್ನು ಘೋಷಿಸಿದರು. ಆವರೆಗೂ ಜಗತ್ತು ಕಂಡರಿಯದ ಕೇಳರಿಯದ ಸಮಾನತೆಯನ್ನು ಸಮಾಜದಲ್ಲಿ ನೆಲೆಗೊಳಿಸಿದರು. ಧರ್ಮಶ್ರೀಯ ಜನಸಾಮಾನ್ಯರ ಮನೆ-ಮನಗಳನ್ನು ಪ್ರವೇಶಿಸುವಂತೆ ವಚನ ವಾಙ್ಮಯವನ್ನು ಕೊಟ್ಟರಲ್ಲದೆ, ಅನುಭವ ಮಂಟಪವೆಂಬ ಮಾದರಿ ಸಂಸ್ಥೆಯ ಮೂಲಕ ಬಯಸಿ ಬಂದವರಿಗೆಲ್ಲ ದೀಕ್ಷಾ ಸಂಸ್ಕಾರ, ಧಾರ್ಮಿಕ ತರಬೇತಿ ನೀಡಿದರು. ಶತಶತಮಾನಗಳ ಕಾಲದಿಂದಲೂ ಧಾರ್ಮಿಕ ಸಂಸ್ಕಾರದಿಂದ ವಂಚಿತರಾಗಿದ್ದ ಅಸಂಖ್ಯಾತರು ಬಸವ ಧರ್ಮದ ಪಾವನ ಜಲದಲ್ಲಿ ಮಿಂದು ಪುನೀತರಾದರು. ವಿಶ್ವ ಸಂಸ್ಥೆಯು ಸಮಸ್ತ ಮಾನವ ಕುಲಕೋಟಿಯ ಸಮಸ್ಯೆಗಳನ್ನು ಕುರಿತು ಚಿಂತನೆಗೈಯುವಂತೆ ಅನುಭವ ಮಂಟಪವು ಮಾನವ ಸಮಾಜದ ಸಮಸ್ಯೆಗಳನ್ನು ಚಿಂತಿಸಿತಲ್ಲದೆ ಉತ್ತಮ ಪರಿಹಾರ ನೀಡಿದು. ಜಗತ್ತಿನ ಧಾರ್ಮಿಕ ಇತಿಹಾಸದಲ್ಲೇ ಅಪೂರ್ವವೆನಿಸುವ ಶರಣ ಸಂದೋಹ ಬಸವಣ್ಣನವರ ಕಾರ್ಯಕ್ಷೇತ್ರ ಕಲ್ಯಾಣದಲ್ಲಿ ವಿಜೃಂಭಿಸಿತು. ವಿಶ್ವಗುರು ಬಸವಣ್ಣನವರ ಮುಖ್ಯ ಉದ್ದೇಶ ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾ (ದೈವೀ) ರಾಜ್ಯ ನಿರ್ಮಾಣ. ಈ ಧ್ಯೇಯದ ಅನುಷ್ಠಾನಕ್ಕಾಗಿ ಬಸವಧರ್ಮದ ಮಹಾಜಗದ್ಗುರು ಪೀಠವು ಜನ್ಮ ತಳೆದಿದೆ.

ದಿ. 13.1.1992 ರಂದು ಕೂಡಲ ಸಂಗಮದಲ್ಲಿ ಸ್ಥಾಪನೆಗೊಂಡ ಈ ಪೀಠದ ಪ್ರಥಮ ಅಧಿಕಾರಿಗಳಾಗಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಪೀಠಾಧಿಪತ್ಯ ವಹಿಸಿಕೊಂಡು ಕಾರ್ಯಮಾಜಿ, ಧರ್ಮ ಪೀಠದ ಕೀರ್ತಿಯನ್ನು ವಿಸ್ತರಿಸಿ ದಿ. 30.6.1995 ರಂದು ಲಿಂಗೈಕ್ಯರಾದರು. ಎರಡನೆಯ ಪೀಠಾಧಿಕಾರಿಣಿಯಾಗಿ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಬಸವಾದಿ ಪ್ರಮಥರ ಮಣಿಹ ಮತ್ತು ಸತ್ ಸಂಕಲ್ಪವನ್ನು ಪೂರೈಸಲು ಕಾರ್ಯೋನ್ಮುಖರಾಗಿದ್ದಾರೆ.

ಕೂಡಲಸಂಗಮ ಸುಕ್ಷೇತ್ರದಲ್ಲಿ ನಡೆಯುವ ಶರಣ ಮೇಳದಲ್ಲಿ ವಿಶೇಷವಾಗಿ ಒದಗಿಸಲಾಗುವ ಕೆಲವು ಸೌಲಭ್ಯಗಳು

ಮಾನ್ಯ ಶರಣ ಬಂಧುಗಳೆ,

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ ಶರಣ ಮೇಳವು ನಡೆಯುತ್ತಲಿದೆಯಷ್ಟೆ. ತಾವು ಇದಕ್ಕೆ ಆಗಮಿಸುತ್ತೀರಿ, ನೀವು ಈ ಕ್ಷೇತ್ರದಲ್ಲಿ ಇರುವಷ್ಟು ಕಾಲ ಆರಾಮವಾಗಿ, ಸೌಖ್ಯದಿಂದ ಇರಬೇಕೆಂದು ನಮ್ಮ ಅಭಿಲಾಷೆ. ಇದಕ್ಕಾಗಿ ಕೆಲವು ಅನುಕೂಲತೆಗಳನ್ನು ಕಲ್ಪಿಸಲಾಗಿದ್ದು, ಇವನ್ನು ನಿಮ್ಮ ಗಮನಕ್ಕೆ ತರುತ್ತಲಿದ್ದೇವೆ.

1. ವಾಸ್ತವ್ಯಕ್ಕಾಗಿ ತಾತ್ಕಾಲಿಕ ತಂಗುದಾಣಗಳಾಗಿ ಶಾಮಿಯಾನಾ ಟೆಂಟ್‌ಗಳನ್ನು ನಿರ್ಮಿಸಲಾಗಿದ್ದು, ಇವುಗಳನ್ನು ವಿಚಾರಣಾ ಮತ್ತು ಸ್ವಾಗತಾ ಕಾರ್ಯಾಲಯದಲ್ಲಿ ಪಡೆದುಕೊಳ್ಳಿರಿ.
2. ಜಮಖಾನಾಗಳು ಬಹಳಷ್ಟು ಕಳೆದುಹೋಗುವುದರಿಂದ ಈ ಸಲ ಅದರ ವಿಲೇವಾರಿಯ ಜವಾಬ್ದಾರಿಯನ್ನು ಸ್ವಾಗತ ಮಂಟಪ ಕಾರ್ಯಾಲಯದವರಿಗೆ ಕೊಡಲಾಗಿದೆ. ಅವರೇ ನೇರವಾಗಿ ಕೊಡುವರು. ಬೇಕಾದವರು ಅದರ ಬಾಡಿಗೆ ಕೊಟ್ಟು ಜಮಖಾನ ಪಡೆದು ಪುನಃ ವಾಪಸ್ಸು ಅವರಿಗೇ ಕೊಡಬೇಕು.
3. ಶುಲ್ಕ ಕೊಟ್ಟವರಿಗೆ ಮಾತ್ರವಲ್ಲದೆ, ಭಜನಾ ತಂಡದವರಿಗೆ, ಆರ್ಥಿಕ ಅನಾನುಕೂಲ ಇರುವವರಿಗೆ ಉಚಿತ ದಾಸೋಹದ ವ್ಯವಸ್ಥೆ ಇದೆ. ಆದರೆ ಶಿಸ್ತನ್ನು ಕಾಪಾಡಲು ಅವರು ತಮ್ಮ ತಂಡದಲ್ಲಿ ಎಷ್ಟು ಜನರಿದ್ದಾರೆಂದು ತಿಳಿಸಿ ಬ್ಯಾಡ್ಜ್ ಪಡೆಯಬೇಕು. ಇವರಿಗೆ ಪ್ರತ್ಯೇಕವಾದ ವ್ಯವಸ್ಥೆ ಇರುತ್ತದೆ.
4. ಈ ಮೊದಲೇ ಹಣ ಕಟ್ಟಿದವರು, ಕಳಿಸಿದವರು ರಸೀತಿ ತೋರಿಸಿ ಬ್ಯಾಡ್ಜಸ್ ಪಡೆಯಬೇಕು. ಹೊಸದಾಗಿ ಬಂದವರು ಹಣ ಕಟ್ಟಿ ಬ್ಯಾಡ್ಜಸ್ ಪಡೆಯಬೇಕು.
5. ದಾನಿಗಳು ಕೊಟ್ಟ ಹಣದ ನೆರವಿನಿಂದ ಅಕ್ಕ ನಾಗಲಾಂಬಿಕಾ ಅತಿಥಿ ಗೃಹ ಸಿದ್ಧವಿದ್ದು, ಕೆಲವು ದಾನಿಗಳಿಗೆ ಅವರವರ ರೂಮಿನಲ್ಲಿ ವಾಸ್ತವ್ಯಕ್ಕೆ ಅವಕಾಶ ಒದಗಿಸಲಾಗಿದೆ. ನಂತರ ಕೊಟ್ಟ ದಾನಿಗಳಿದ್ದು ಇನ್ನೂ ಕೋಣೆ ಸಿದ್ಧವಾಗಿಲ್ಲವಾದ್ದರಿಂದ, ಶಾಮಿಯಾನಾದ ಟೆಂಟ್ ನಿರ್ಮಿಸಿ, ವಾಸ್ತವ್ಯಕ್ಕೆ ಅವಕಾಶ ಮಾಡಲಾಗಿದೆ.
6. ಅವರವರ ಕೋಣೆಗಳಿಗೆ ಬೀಗ-ಬೀಗದ ಕೈ ತಂದಿದ್ದರೆ ಅವರು ಬಳಸಿಕೊಳ್ಳಬಹುದು. ಹಾಗೆ ತಂದಿಲ್ಲದಿದ್ದರೆ, ಒಂದು ಮೊತ್ತದ ಹಣವನ್ನು ಡಿಪಾಸಿಟ್ಟಾಗಿ ಇಟ್ಟು, ಬೀಗವನ್ನು ಪಡೆದುಕೊಂಡು, ನಂತರ ಅದನ್ನು ವಾಪಸ್ಸು ಮಾಡಿ ಹಣವನ್ನು ಪಡೆದುಕೊಳ್ಳಬಹುದು.

ಭದ್ರತಾ ಕೋಣೆ: ಶರಣ ಮೇಳಕ್ಕೆ ಬಂದ ಜನರು, ಶಾಮಿಯಾನಾಗಳಲ್ಲಿ ತಮ್ಮ ವಸ್ತುಗಳನ್ನಿಟ್ಟು ಹೋಗಲು ಆತಂಕ ಪಡುವರು ಮತ್ತು ಜೊತೆಗೇ ಇಟ್ಟುಕೊಂಡು ಓಡಾಡಲು ಬಹಳ ಅನಾನುಕೂಲತೆಯಾಗುವುದು. ಈ ಕಾರಣಕ್ಕಾಗಿ ಭದ್ರತಾ ಕೋಣೆಯ ವ್ಯವಸ್ಥೆಯನ್ನು ಮಾಡಲಾಗಿದೆ. ಒಂದು ವಸ್ತುವಿಗೆ ಒಂದು ದಿನಕ್ಕೆ ಒಂದು ರೂ.ನಂತೆ ಶುಲ್ಕ ನಿಗದಿ ಮಾಡಲಾಗಿದೆ.

ವಿಶೇಷ ಸೂಚನೆ: ಭದ್ರತಾ ಕೋಣೆಯೊಳಕ್ಕೆ ಸಾಮಾನು ಕೊಟ್ಟುದ್ದನ್ನು ವಾಪಸ್ಸು ಪಡೆದು, ಪುನಃ ಕೊಡಲು ಹೋದಾಗ ಶುಲ್ಕವನ್ನು ಕೊಡಬೇಕು. ರಾತ್ರಿ ವೇಳೆಯಲ್ಲಿ ಸಾಮಾನು ಇರಿಸಿಕೊಳ್ಳಲಾಗುವುದಿಲ್ಲ. ಬೆಳಿಗ್ಗೆ ಕೊಟ್ಟ ನಂತರ ರಾತ್ರಿ ಕಾರ್ಯಕ್ರಮ ಮುಗಿಯುವವರೆಗೆ ಮಾತ್ರ ಇರಿಸಿಕೊಳ್ಳಲಾಗುವುದು.

8. ಕೂಡಲ ಸಂಗಮ ಕ್ರಾಸಿನಿಂದ ಮಹಾಮನೆಗೆ, ಸಂಗಮಕ್ಕೆ ಅಲ್ಲಿಂದ ಸಂಗಮ ಕ್ರಾಸಿಗೆ, ಕೆ.ಎಸ್.ಆರ್.ಟಿ.ಸಿ. ಯವರು ವಾಹನ ಸೌಕರ್ಯ ಏರ್ಪಡಿಸಿರುತ್ತಾರೆ. ಜನರು ಇದರ ಉಪಯೋಗ ತೆಗೆದುಕೊಳ್ಳಬೇಕಾಗಿ ಸೂಚನೆ.

9. ಕೂಡಲಸಂಗಮದಿಂದ ತಂಗಡಗಿಗೆ ಅಂದರೆ, ನೀಲಾಂಬಿಕಾ ತಾಯಿಯ ಐಕ್ಯಮಂಟಪದ ದರ್ಶನಕ್ಕೆ ಹೋಗುವ ಅಪೇಕ್ಷೆಯುಳ್ಳವರು ಕೆ.ಎಸ್.ಆರ್.ಟಿ.ಸಿ. ಡಿಪೋದವರನ್ನು ಮೊದಲೇ ಸಂಪರ್ಕಿಸಿರಿ.

10. ಮಹಾಮನೆ ಆವರಣದಲ್ಲಿ ಸ್ಥಳೀಯರಿಗೆ ಊಟ-ವಸತಿಗಳ ವ್ಯವಸ್ಥೆ ಮಾಡಲಾಗಿರುವುದು. ಸಭಾ ಮಂಟಪವು ಇಲ್ಲಿಂದ ಸುಮಾರು ಮುಕ್ಕಾಲು ಕಿಲೋಮೀಟರ್ ಇರುವುದು. ಮಹಾಮನೆಯಿಂದ ನದಿಯ ಸಂಗಮ ಸ್ಥಾನಕ್ಕೂ ಅಷ್ಟೇ ದೂರ ಆಗುವುದು. ಅಶಕ್ತರು, ವೃದ್ಧರು ಮತ್ತು ಇನ್ನಿತರರಿಗಾಗಿ ಶರಣ ಮೇಳ ಉತ್ಸವ ಸಮಿತಿಯು ಸ್ಥಳೀಯ ಸಾರಿಗೆ ವ್ಯವಸ್ಥೆ ಮಾಡುತ್ತದೆ. ಸಭಾಮಂಟಪದಿಂದ ಮಹಾಮನೆ ಆವರಣಕ್ಕೆ ಊಟಕ್ಕೆ ಬಂದು ಹೋಗಲು ಇದು ಸಹಾಯಕವಾಗುತ್ತದೆ.

11. **ವೈದ್ಯಕೀಯ ನೆರವು:** ಯಾತ್ರಾರ್ಥಿಗಳಿಗೆ ಏನಾದರೂ ವೈದ್ಯಕೀಯ ನೆರವು ಬೇಕಾದಲ್ಲಿ ಮಹಾಮನೆ ಆವರಣದಲ್ಲಿ ಇರುವ ವೈದ್ಯಕೀಯ ಶಿಬಿರದಲ್ಲಿ ವಿಚಾರಿಸಿರಿ.

12. **ಉಪಾಹಾರ ಗೃಹಗಳು (Canteen):** ಕೆಲವು ಜನರ ಬೇಡಿಕೆ ಮತ್ತು ಅಗತ್ಯಗಳನ್ನು ಗಮನಿಸಿ, ಶರಣ ಮೇಳ ಉತ್ಸವ ಸಮಿತಿಯು 2 ಕ್ಯಾಂಟಿನ್‌ಗಳನ್ನು ತೆರೆಯುತ್ತಿದೆ. ಕಾರ್ಯಕ್ರಮದ ಪೆಂಡಾಲ್ ಬಳಿ ಒಂದು ಮತ್ತು ಮಹಾಮನೆ ಮಹಾಮಠದ ಆವರಣದಲ್ಲಿ ಮತ್ತೊಂದು. ಇಲ್ಲಿ ಕಾಫಿ, ಟೀ, ಇಡ್ಲಿ ಮುಂತಾದವು ದೊರೆಯುತ್ತದೆ. ಅಗತ್ಯವಿದ್ದವರು ಇದರ ಅನುಕೂಲ ಪಡೆದುಕೊಳ್ಳಬೇಕೆಂದು ಕೋರುತ್ತೇವೆ.

13. ಶರಣ ಮೇಳದ ಸಮಯದಲ್ಲಿ ಧಾರ್ಮಿಕ ಸಾಹಿತ್ಯ, ಕೆಸೆಟ್ಟುಗಳು, ಲೋಹದ ಭಿತ್ತಿಪಟಗಳು, ಸ್ಕಾರ್ಫ್‌ಗಳು, ಪೂಜಾವಸ್ತ್ರಗಳು, ಬಸವ ಮುದ್ರೆಗಳು, ಬಸವ ನಾಣ್ಯಗಳು, ದೊರೆಯುತ್ತವೆ. ಈ ಎಲ್ಲ ವಸ್ತುಗಳು ಸಭಾ ಮಂಟಪದ ಬಳಿ ಇರುವ ಪುಸ್ತಕ ಮಳಿಗೆಯಲ್ಲಿ ಮತ್ತು ಬಸವ ಧರ್ಮ ಪೀಠದ ಮಹಾಮನೆ ಆವರಣದಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.

14. "ಬಸವ ಪ್ರಸಾದ"ವಾಗಿ ಸ್ವೀಕರಿಸಲು ಮತ್ತು ಮನೆಗೆ ಒಯ್ಯಲು ಲಾಡು (ಬೂಂದಿ) ಉಂಡೆಗಳು ಲಭ್ಯವಿರುತ್ತದೆ. ತಾವು ಕೊಂಡುಕೊಳ್ಳಬಹುದು.

15. **ರುದ್ರಾಕ್ಷಿ ಮಾಲೆಗಳು :** ಪೂರ್ತಿ ರುದ್ರಾಕ್ಷಿ ಮಾಲೆಗಳೂ, ವಿಶೇಷವಾಗಿ ನೇಪಾಳದಿಂದ ತರಿಸಲ್ಪಟ್ಟವು ಮಾರಾಟಕ್ಕಿವೆ. ಆಸಕ್ತರು ಖರೀದಿಸಿರಿ. ಇವು ಪುಸ್ತಕ ಮಳಿಗೆಯಲ್ಲಿ ಇರದೆ ಸಂಸ್ಥೆಯ ವಿಶೇಷ ಕಾರ್ಯಕರ್ತರ ಬಳಿ ಇರುತ್ತದೆ.

16. ಆಡಿಯೋ ಕೆಸೆಟ್ಟು, ವೀಡಿಯೋ ಕೆಸೆಟ್ಟು ಮತ್ತು ಪುಸ್ತಕಗಳು ಮಾರಾಟಕ್ಕಿರುತ್ತವೆ.

17. ಶರಣರ ಭಾವಚಿತ್ರಗಳ ಪ್ರದರ್ಶನ ಶರಣ ಮಂಟಪ ಇರುತ್ತದೆ. ನೋಡಿ ಹೋಗಬೇಕಾಗಿ ಕೋರಿಕೆ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ : ಶರಣ ಮೇಳ ಉತ್ಸವ ಸಮಿತಿ, ಮಹಾಮನೆ ಮಹಾಮಠ, ಕೂಡಲಸಂಗಮ - 587 115. ತಾ || ಹುನಗುಂದ, ಜಿ || ಬಿಜಾಪುರ.

ಹೂಮಾಲೆಗಳು ಲಭ್ಯ

1. ಬಸವ ಧರ್ಮ ಪೀಠದ ಎರಡನೆಯ ಪೀಠಾಧೀಶರಾಗಿ ದಿ. 13.1.1996 ರಂದು ಪೀಠಾರೋಹಣ ಮಾಡುತ್ತಿರುವ ಪೂಜ್ಯ ಮಾತಾಜಿಯವರಿಗೆ ಪೀಠಾರೋಹಣ ಕಾಲದಲ್ಲಿ ಮಾಲಾರ್ಪಣೆ ಮಾಡಬೇಕು ಎನ್ನುವವರಿಗೆ ಬೇರೆ ಬೇರೆ ಸೈಜಿನ ಹೂಮಾಲೆಗಳು ಮಹಾಮನೆ ಆವರಣದಲ್ಲಿ ಶರಣ ವೀರಣ್ಣ ಹೂಗಾರ ತೆರೆಯಲಿರುವ ಅಂಗಡಿಯಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.
2. ಮಾಲಾರ್ಪಣೆ ಮಾಡಬೇಕು ಎನ್ನುವವರು ಕಾರ್ಯಕರ್ತರ ಬಳಿ ಮೊದಲಿಗೇ ಹೆಸರು ಬರೆಸಬೇಕು.
3. ಖಿರ್ಗೋಸಕ್ ಚಹಾ (1 ಬಾಟಲಿಗೆ ಬೆಲೆ 100 ರೂ) ಮಾರಾಟಕ್ಕೆ ಲಭ್ಯವಿರುತ್ತದೆ. ತಮಗೆ ಬೇಕಾದರೆ ಮೊದಲೇ ಕಾಯ್ದಿರಿಸಿಕೊಳ್ಳಿರಿ. ಹೋಗುವಾಗ ಒಯ್ಯಬಹುದು. ಹಿಂದಿನ ವರ್ಷ ಕಡಿಮೆ ಬಿದ್ದವು.

ವ್ಯವಸ್ಥಾಪಕರು

ಸತ್ ಪಥ ತೋರಿದ ಸದ್ಗುರುವೆ

ವಿಶ್ವಧರ್ಮದ ಜ್ಯೋತಿ ಬೆಳಗಿದ । ಶ್ರೀ ಗುರುವೇ ಲಿಂಗಾನಂದರೆ ॥
ಬಾಗಿ ನಮಿಸುವೆ ತಮ್ಮ ಚರಣಕೆ । ಸರ್ವಜನ ಸನ್ಮಾನ್ಯರೇ ॥ ಪ॥
ಶರಣ ತತ್ತ್ವದ ಸತ್ಯ ನೀತಿಯ । ಜಗಕೆ ತಿಳಿಸಿದ ಶ್ರೀ ಗುರು
ಜಗದ ಜನತೆಯ ಮನದ ಮಲಿನವ । ತೊಳೆದ ಪಾವನ ಸದ್ಗುರು ॥

ಬಸವ ಧರ್ಮಕೆ ಮುಸುಕಿದ ಅಂಧವ । ಹಸನದಿಮ್ ಪರಿಹರಿಸಿದೆ ॥
ದಾರಿಕಾಣದ ಜನಕೆ ಧರ್ಮದ । ಸತ್ಯ ಪಥವನು ತೋರಿದೆ ॥
ಬಸವತತ್ತ್ವದ ಕಲ್ಪಲತೆಯನು । ನಾಡಿನಗಲಕ್ಕೂ ಬೆಳೆಸಿದೆ ।
ವಿನೂತನದ ಪ್ರವಚನವೆಂಬ । ಜ್ಞಾನದಾಸೋಹವ ನಡೆಸಿದೆ ॥

ಸತ್ಯ ಶರಣರ ಸಂದೇಶವನು । ಬಿತ್ತರಿಸಿ ಜಗದೊಳು ಸಂಚರಿಸಿದೆ ॥
ಅಂಧಃ ಶ್ರದ್ಧೆಯ ಬಿಡಿಸಿ ಜನತೆಗೆ । ಪ್ರೀತಿ ಸ್ನೇಹವ ತಿಳಿಸಿದೆ ॥
ದ್ವಂದ್ವಭಾವನೆ ಪರಿಹರಿಸುತ । ಸದ್ಭಕ್ತಿಭಾವವ ಬೆಳಸಿದೆ ॥
ಜಾತಿಯತೆಯ ಭೂತ ಬಿಡಿಸಿ । ನೀತಿ ಜ್ಯೋತಿಯ ಬೆಳಗಿದೆ ॥

ವಿಶ್ವಬಂಧುತ್ವವನು ಬೆಳಸಿ । ವಿಶ್ವಧರ್ಮವ ಸಾರಿದೆ ॥
ಜನವ ಜಾಗೃತಗೊಳಿಸಿ ಸಂಗಮ । ಶರಣ ಮೇಳಕೆ ಕರೆಸಿದೆ ॥
ಧರ್ಮಗುರುವಿನ ಐಕ್ಯಕ್ಷೇತ್ರದ । ಅಭಿವೃದ್ಧಿಗಾಗಿ ಶ್ರಮಿಸಿದೆ ॥
ಇಷ್ಟಲಿಂಗದ ಮಹತೆ ತಿಳಿಸಿ । ಲಿಂಗಾಂಗ ಸಮರಸಗೊಳಿಸಿದೆ ॥

ಕಾಯ ಕಾಯಕದಿ ಮೀಸಲಿರಿಸಿ । ಮಹತ್ ಕಾರ್ಯ ಸಾಧಿಸಿ ತೋರಿದೆ ॥
ಧರ್ಮಪ್ರಚಾರ ದೋಣಿ ಸಾಗಲು । ಸಾಧಕರ ಸಜ್ಜುಗೊಳಿಸಿದೆ ॥
ಮಾತಾಜಿ, ಗಂಗಾಮಾತೆಯಂತಹ । ಮಹನೀಯರ ನಾಡಿಗೆ ನೀಡಿದೆ ॥
ವಿಶ್ವಧರ್ಮ ಶಾಂತಿ ಸಮನ್ವಯ । ಬಸವ ದಳವ ಸಂಘಟಿಸಿದೆ ॥

ತಾವು ಚಲಿಸಿದ ಹೆಜ್ಜೆ ಹೆಜ್ಜೆಯೂ । ಪುಣ್ಯಕ್ಷೇತ್ರವೆನಿಸಿದೆ ॥
ತಮ್ಮ ಚರಣ ಸ್ಪರ್ಶದಿಂದಲೀ । ಭುವನ ಪಾವನ ಹೊಂದಿದೆ ॥
ಭುವಿಯ ಜನತೆಯ ಬವಣೆ ಹರಿಯಲು । ಧರೆಗೆ ನೀ ಅವತರಿಸಿದೆ ॥
ಸತ್ಯ ಧರ್ಮದ ತಿರುಳ ತಿಳಿಸಿ । ಮುಕ್ತಿ ಮಾರ್ಗವ ಹಿಡಿಸಿದೆ ॥

ತಾವು ತೋರಿದ ಧರ್ಮ ಮಾರ್ಗದಿ । ನಡೆವ ಶಪಥವ ಗೈಯುವೆ ॥
ತವ ದಿವ್ಯ ಸಂದೇಶವನ್ನು ।ಬಾಳಿನುದ್ದಕ್ಕೂ ಬಳಸುವೆ ॥
ಧರ್ಮಪೀಠದ ಆದೇಶಕ್ಕೆ । ಶಿರವ ಬಾಗಿ ನಾ ನಡೆಯುವೆ ॥
ಬಸವ ದಳದ ಕುಸುಮವಾಗಿ । ತಮ್ಮ ಚರಣಕ್ಕೆ ನಮಿಸುವೆ ॥

ಶರಣ ಮಹಾದೇವ ಗುಡೇರ
ಜೆ.ಎಸ್.ಎಸ್. ಕಾಲೇಜ್, ಗೋಕಾಕ.

ಕೂಡಲ ಸಂಗಮದಲ್ಲಿ ಸಂದರ್ಶಿಸಬೇಕಾದ ಸ್ಥಳಗಳು

ಸಂಗಮೇಶ್ವರ ದೇವಾಲಯ : ಚಾರಿತ್ರಿಕ, ಪುರಾತನ, ಶಿವ ದೇವಾಲಯ

ಬಸವೇಶ್ವರ ಐಕ್ಯ ಮಂಟಪ : ಗುರು ಬಸವಣ್ಣನವರ ದಿವ್ಯ ಸಮಾಧಿ

ಬಸವ ಸಾಗರ : ಕೃಷ್ಣ-ಮಲಾಪಹಾರಿ ನದಿಗಳ ಸಂಗಮದಿಂದ ರೂಪುಗೊಂಡಿರುವ ಸುಂದರ ಜಲರಾಶಿ

ಅಖಂಡ ವಚನ ಪಠಣ ಮಂಟಪ : ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ದಿನಾಂಕ 9.1.1996 ರಿಂದ 16.1.96ರ ವರೆಗೆ ಅಖಂಡ ವಚನ ಪಠಣ ನಡೆಯುತ್ತಿರುವ ಮಂಟಪ ಮತ್ತು 24 ಜನ ಶರಣರ ಸುಂದರ ಮೂರ್ತಿಗಳು-ಮಂಟಪಗಳು.

ಶ್ರೀ ಬಸವೇಶ್ವರ ಪೂಜಾಮಂಟಪ : ಮಹಾಮನೆಯ ಆವರಣದಲ್ಲಿರುವ ಇಲ್ಲಿಗೆ ಬಂದು ಪೂಜೆ ಮಾಡಿಸಿ, ದರ್ಶನ ಪಡೆದು, ತೀರ್ಥ ಪ್ರಸಾದವನ್ನು ಪಡೆಯಿರಿ.

ಬಸವ ಮುದ್ರೆ ಮತ್ತು ನಾಣ್ಯ : ಪೂಜ್ಯ ಗುರು ಬಸವಣ್ಣನವರ ಚಿತ್ರ, ಷಟ್ಕೋನ, ಬಸವ ಮಂತ್ರ-ಪಾದಪೀಠ ಸಹಿತ ಇರುವ ಮುದ್ರೆಗಳು ದೊರೆಯುತ್ತವೆ.

- ಪೂಜ್ಯ ಶ್ರೀಮಾನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಬರೆದ, ಪ್ರಕಟಿಸಿದ ಅನೇಕ ಗ್ರಂಥಗಳು ಮತ್ತು ಪ್ರವಚನಗಳ ಆಡಿಯೋ-ವಿಡಿಯೋ ಕೆಸೆಟ್ಟುಗಳು ಮಹಾಮನೆ ಮಹಾಮಠದ ಆವರಣದಲ್ಲಿ, ಶರಣ ಮೇಳ ಮಂಟಪದ ಸಮೀಪದ ಬುಕ್‌ಸ್ಟಾಲಿನಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ.
- ಶರಣಮೇಳದಲ್ಲಿ ಭಾಗಿಗಳಾದವರು ಮನೆಗೆ, ಬಂಧು -ಮಿತ್ರರಿಗೆ ಪ್ರಸಾದವನ್ನಾಗಿ ಒಯ್ಯಲು ಲಾಡು (ಬೂಂದಿ) ಉಂಡೆಗಳು ಮತ್ತು ಕಲ್ಲುಸಕ್ಕರೆ ಪೊಟ್ಟಣಗಳು ಮಾರಾಟಕ್ಕೆ ಲಭ್ಯವಿರುತ್ತವೆ.
- ಬಸವಧರ್ಮಪೀಠದ ತಯಾರಿಕೆಯ ಅತ್ಯುತ್ತಮ ವಿಭೂತಿ ಗಟ್ಟಿಗಳು, ಕಂಥೆಯ ಇಷ್ಟಲಿಂಗಗಳು, ರುದ್ರಾಕ್ಷಿ ಮಾಲೆಗಳು, ಮಾರಾಟಕ್ಕೆ ದೊರೆಯುತ್ತವೆ.
- ಅತ್ಯಂತ ಸುಂದರವಾದ ಬಟ್ಟೆಯ ಮಾಲೆಗಳು ಫೋಟೋಗಳಿಗೆ ಹಾಕಲು ಸಿದ್ಧವಾಗಿ ದೊರೆಯುತ್ತವೆ.

*** ಸೂಚನೆಗಳು ***

ಬಸವ ಧರ್ಮ ಪೀಠದ ಮಹಾಮನೆಯ ಆವರಣದಲ್ಲಿ ಶರಣಮೇಳ ಉತ್ಸವ ಸಮಿತಿಯ ಕಾರ್ಯಾಲಯ ಮತ್ತು ಸಮಾಚಾರ ಕೇಂದ್ರಗಳಿವೆ. ಪ್ರತಿನಿಧಿಗಳು ತಮ್ಮ ತಮ್ಮ ರಸೀತಿಗಳನ್ನು ತೋರಿಸಿ ಬ್ಯಾಡ್ಜಸ್ (ಗುರುತಿನ ಚೀಟಿ), ಪ್ರಸಾದ ನಿಲಯದ ಪ್ರವೇಶ ಚೀಟಿ ಮುಂತಾದುವನ್ನು ಪಡೆಯಬೇಕು.

ಕಾಣಿಕೆ ಸಂಗ್ರಹಿಸಲು ರಸೀತಿ ಪುಸ್ತಕ ಪಡೆದವರು ತಾವು ಸಂಗ್ರಹಿಸಿದ ಕಾಣಿಕೆ ಮತ್ತು ರಸೀತಿ ಪುಸ್ತಕಗಳನಲು ಕಾರ್ಯಾಲಯದಲ್ಲಿ ಇರುವ ಕೋಶಾಧ್ಯಕ್ಷೆ ಪೂಜ್ಯ ಶ್ರೀ ಮಾತೆ ಗಂಗಾದೇವಿಯವರಿಗೆ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎನ್. ಪುಟ್ಟರುದ್ರಪ್ಪ ಮತ್ತು ಕಲ್ಯಾಣಪ್ಪ ಪರಮಾದಿ ಅವರಿಗೆ ಒಪ್ಪಿಸಿ, ಅವರ ಸಹಿ ಇರುವ ಪಾವತಿ ಪಡೆಯಬೇಕು.

ಕೂಡಲ ಸಂಗಮ-ಸ್ಥಳದ ಮಹತ್ವ ಮತ್ತು ನಿರ್ದೇಶನ

- ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೋಕದಲ್ಲಿ ಕೃಷ್ಣಮಲಾಪಹಾರಿ ನದಿಗಳ ಸಂಗಮದಲ್ಲಿರುವ ಸುಕ್ಷೇತ್ರ
- ರಾಷ್ಟ್ರೀಯ ಹೆದ್ದಾರಿ ನಂ. 13ಕ್ಕೆ ಕೇವಲ 7 ಕಿಲೋಮೀಟರ್ ದೂರದಲ್ಲಿದೆ. ಹುನಗುಂದದಿಂದ 22 ಕಿ.ಮಿ. ಆಲಮಟ್ಟಿಯಿಂದ 30 ಕಿ.ಮಿ.
- ಹುನಗುಂದ-ಇಳಕಲ್-ಬಾಗಿಲಕೋಟೆ-ಬಿಜಾಪುರ ನಗರುಗಳು ಕೂಡಲ ಸಂಗಮಕ್ಕ ಸನಿಹದಲ್ಲಿರುವ ಪ್ರಮುಖ ಪಟ್ಟಣಗಳು. ಈ ಸ್ಥಳಗಳಿಂದ ಕೂಡಲ ಸಂಗಮ ಕ್ಷೇತ್ರಕ್ಕೆ ಬಹಳಷ್ಟು ಸಾರಿಗೆ ಸಂಪರ್ಕ ವ್ಯವಸ್ಥೆ ಇದೆ.
- ಪುರಾತನ ಶೈವ ಕ್ಷೇತ್ರವಾದ ಕೂಡಲಸಂಗಮವು 12ನೆಯ ಶತಮಾನದ ಕಾಲದಲ್ಲಿ ಅತ್ಯಂತ ವೈಭವದ ಸ್ಥಿತಿಯಲ್ಲಿದ್ದು ಪ್ರಸಿದ್ಧ ಗುರುಕುಲವನ್ನು ಹೊಂದಿತ್ತು. ಗುರುಕುಲದ ಅಧಿಪತಿಗಳಾದ ಶ್ರೀ ಜಾತವೇದ ಮುನಿಗಳು ಬಹು ಖ್ಯಾತ ಯೋಗಿಗಳಾಗಿದ್ದರು.
- ಸಮತಾವಾಧಿ, ಕ್ರಾಂತಿಯೋಗಿ ಬಸವಣ್ಣನವರು ವಿದ್ಯಾರ್ಜನೆ ಮಾಡಿದ, ತಪಸ್ಸು ಗೈದ, ನವಧರ್ಮ ದ್ರಷ್ಟಾರರಾದ ಮತ್ತು ಐಕ್ಯರಾದ ಸ್ಥಾನ ಕೂಡಲ ಸಂಗಮ. ಈ ದಿವ್ಯ ಸಂಗಮವು ಒಂದು ದಂಡೆಗೆ ಬಸವಣ್ಣನವರ ಐಕ್ಯ ಮಂಟಪವನ್ನು ಹೊಂದಿದೆ. ನೀಲಾಂಬಿಕಾ ತಾಯಿಯ ದಿವ್ಯ ಸಮಾಧಿಯು ಕೃಷ್ಣಾ ನದಿಯ ಇನ್ನೊಂದು ಬದಿಗೆ ತಂಗಡಗಿ ಗ್ರಾಮದ ಬಳಿ ಇದ್ದು ಅತ್ಯಂತ ಸುಂದರ ಪರಿಸರದಲ್ಲಿದೆ. ದೋಣಿಯಲ್ಲಿ ಕುಳಿತು ಪಯಣಿಸಲು ಅವಕಾಶ ಉಂಟು. ಅಥವಾ ಬಸ್ಸು-ಕಾರುಗಳ ಮೂಲಕ ಬೆಳಗಲ್ ಮಾರ್ಗವಾಗಿ ಹೋಗಬಹುದಾಗಿರುತ್ತದೆ.
- ಕೂಡಲ ಸಂಗಮಕ್ಕೆ ಹತ್ತಿರದಲ್ಲಿರುವ ಬಸವನ ಬಾಗೇವಾಡಿಯು ಶ್ರೀ ಗುರುಬಸವಣ್ಣನವರ ಜನ್ಮ ಸ್ಥಳ. ಹೆದ್ದಾರಿ 13ಕ್ಕೆ ಸನಿಹದಲ್ಲಿರುವ ಬಸವನ ಬಾಗೇವಾಡಿ ಸಂದರ್ಶನಾರ್ಹ ಸ್ಥಳವಾಗಿದೆ.
- ಬಸವ ಧರ್ಮಪೀಠ ಟ್ರಸ್ಟ್ ಹದಿನಾಲ್ಕೂವರೆ ಎಕರೆ ಜಮೀನನ್ನು ಖರೀದಿಸಿ ಶ್ರೀ ಬಸವೇಶ್ವರ ಪೂಜಾ ಮಂಟಪ, ಅತಿಥಿ ಗೃಹ, ಶರಣರ ಮಂಟಪಗಳು ಮುಂತಾದುವನ್ನು ನಿರ್ಮಾಣ ಮಾಡುತ್ತಲಿದೆ. ಅಕ್ಕನಾಗಲಾಂಬಿಕಾ ಶರಣಧಾಮ ಎಂಬ ಅತಿಥಿ ಗೃಹವು ಈಗ ಪೂರ್ಣಗೊಂಡಿದ್ದು, ಸರ್ವಜ್ಞ ಶರಣಧಾಮವು ಈಗ ನಿರ್ಮಾಣ ಹಂತದಲ್ಲಿದೆ.
- 1996ನೆಯ ಜನವರಿ 12, 13, 14 ಮತ್ತು 15ರಂದು ನಡೆಯಲಿರುವ ಶರಣ ಮೇಳಕ್ಕೆ ನಾಡಿನಾದ್ಯಂತದಿಂದ ಜನರು ಬರಲು ಅನುಕೂಲವಾಗುವಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು (ಕಾಂಟ್ರಾಕ್ಟ್) ವಿಶೇಷ ಬಸ್ಸುಗಳನ್ನು ವ್ಯವಸ್ಥೆ ಮಾಡಿದೆ. ಮತ್ತು ರಾಷ್ಟ್ರೀಯ ಹೆದ್ದಾರಿ 13ರ ಮೇಲೆ ಸಂಚರಿಸುವ ಬಸ್ಸುಗಳನ್ನು ನಿಲ್ಲಿಸಿ, ಮುಂದೆ ಹೋಗಲು ಸಾರಿಗೆ ಚಾಲಕರಿಗೆ ಆದೇಶ ನೀಡಿದೆ.

ಶರಣ ಮೇಳದ ಸಮಯದಲ್ಲಿ ಬಾಗಿಲಕೋಟೆಯವರೆಗೆ ಟ್ರೇನಿನಲ್ಲಿ ಬಂದು ಕೂಡಲ ಸಂಗಮಕ್ಕೆ ಬರಲು ಸಂಪರ್ಕ ಬಸ್ಸುಗಳ ಅನುಕೂಲತೆ ಇರುವುದು.

ಏಕದೇವತೋಪಾಸನೆಯ ಸೊಲ್ಲಗಳ ಮಾಲೆ

ಸೃಷ್ಟಿಕರ್ತನೊಬ್ಬನಲ್ಲದೆ ಬೇರೆ ದೈವವಿಲ್ಲ
ತುಷ್ಟ ಜೀವನವೊಂದಲ್ಲದೆ ಬೇರೆ ನೆಮ್ಮದಿಯಿಲ್ಲ.

ಧರ್ಮಪಿತ ಬಸವಣ್ಣನವರ ನುಡಿಯಂತೆ,
ಕರ್ಮಯೋಗಿ ಬಸವಣ್ಣನವರ ನಡೆಯಂತೆ,
ನಿರ್ಮಲ ಹೃದಯದ ಬಸವಣ್ಣನವರ ಮನದಂತೆ
ಧರ್ಮಿಷ್ಠ ಬಸವಣ್ಣನವರ ನಿಷ್ಕಲ ತತ್ತ್ವದಂತೆ
ಏಕದೇವ ನಿಷ್ಠನಾದವನೇ ನಿಜ ಶರಣ

ಕರ್ತನನರಿಯದವ ವಿಪ್ರನಾದಡೇನು?
ಕರ್ತನ ಪೂಜಿಸದವ ಚತುರ್ವೇದಿಯಾದಡೇನು?
ಕರ್ತನಲ್ಲಿ ಶ್ರದ್ಧೆ ಚ್ಯುತನಾದವ ನೇಮನಿಷ್ಠ ನಾದಡೇನು?
ಕರ್ತನ ಮರೆದವ ಉಪವಾಸ ವ್ರತಿಯಾದಡೇನು?
ಕರ್ತೃ ದೇವನ ದಿವ್ಯತಮ ಶರಣ.

ಸೃಷ್ಟಿಕರ್ತನ ಸ್ಥಾನ ಕ್ಷುದ್ರ ದೇವತೆಗಲ್ಲ
ಸೃಷ್ಟಿಕರ್ತನಮಾನ ಢಾಂಭಿಕ ದೇವತೆಗಲ್ಲ
ಸೃಷ್ಟಿಕರ್ತನ ಸ್ಥಾನ ಬಾಲಿಶ ಬುದ್ಧಿಯವನಿಗಲ್ಲ
ಸೃಷ್ಟಿಕರ್ತನ ಸ್ಥಾನ ನೂರಾರು ದೇವತೆಗಳಿಗಲ್ಲ
ಸೃಷ್ಟಿಕರ್ತನ ಸ್ಥಾನ ಒಬ್ಬ ದೇವನಿಗುಂಟು.

ಏಕದೇವೋಪಾಸನೆ ಶಿಖರಪ್ರಾಯವಾಗಿದೆ
ಏಕದೇವೋಪಾಸನೆ ಧಾರ್ಮಿಕ ಜಗದ ಪ್ರೌಢಿಮೆಯಾಗಿದೆ
ಏಕ ದೇವೋಪಾಸನೆ ಆತ್ಮವಿಶ್ವಾಸದ ಪ್ರತೀಕವಾಗಿದೆ
ಏಕ ದೇವೋಪಾಸನೆ ತತ್ತ್ವನಿಷ್ಠೆಯುಳ್ಳ ಧರ್ಮವಾಗಿದೆ
ಏಕಮೇವಾದ್ವಿತೀಯ ಧರ್ಮ ನಂಬಿದವನೇ ಶರಣ

ಏಕ ದೇವೋಪಾಸನೆ ರಾಷ್ಟ್ರೀಯ ಬಸವದಳದ ಧರ್ಮ
ಏಕ ದೇವೋಪಾಸನೆ ಶರಣ ಸಾಮ್ರಾಟನ ಧರ್ಮ
ಏಕ ದೇವೋಪಾಸನೆ ವಿಶ್ವಸ್ಥ ಶರಣ ಧರ್ಮ
ಏಕದೇವೋಪಾಸನೆ ಮುಕ್ತಿಗಾಧಾರದ ಧರ್ಮ
ಏಕ ದೇವೋಪಾಸನೆ ವಿಶ್ವಗುರು ಬಸವಣ್ಣನವರ ಧರ್ಮ

'ನೀಲಕಂಠ' ಕಾವ್ಯನಾಮದ ಎಸ್.ಜಿ. ಚೌಡಗೌಡರ
ನಿವೃತ್ತ ಮುಖ್ಯಾಧ್ಯಾಪಕ
ಗದಗ ರಾಷ್ಟ್ರೀಯ ಬಸವದಳದ ಗೌರವಾಧ್ಯಕ್ಷ

ಗಣನಾಯಕ-ನಾಯಕಿಯರಿಗೆ ಒಂದು ಪತ್ರ

ಆತ್ಮೀಯ ಶರಣ ಬಂಧುವಿಗೆ (ಹೆಸರನ್ನು ಉದ್ದೇಶಪೂರ್ವಕವಾಗಿ ಕಾಣಿಸಿಲ್ಲ)

ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ನಿಮ್ಮನ್ನು ಗಣನಾಯಕ/ಗಣನಾಯಕಿಯನ್ನಾಗಿ ಆಯ್ಕೆ ಮಾಡಿ, ಪ್ರತಿಜ್ಞೆ ಮಾಡಿಸಲಾಗಿದೆ.

ಇದು ಯಾವುದೇ ಒಂದು ಪ್ರಶಸ್ತಿಯಲ್ಲ, ಸನ್ಮಾನವಲ್ಲ, ವಹಿಸಿಕೊಟ್ಟಿರುವ ಒಂದು ಹೊಣೆಗಾರಿಕೆ. ಸಿಖ್ ಧರ್ಮದ ಪಂಚ ಪ್ರಬಂಧಕ ಸಮಿತಿಯಂತೆ ಹೊಣೆಗಾರಿಕೆಯುಳ್ಳದ್ದು. ಹೀಗೆ ಆಯ್ಕೆಯಾದ ನಿಮ್ಮ ಮೇಲೆ ಕೆಲವು ಹೊಣೆಗಾರಿಕೆ ಕರ್ತವ್ಯಗಳಿವೆ. ಬಸವ ಧರ್ಮ ಪೀಠದ ಆದೇಶ ಪಾಲಿಸುವುದು ಮಾತ್ರವಲ್ಲದೆ ಶರಣ ಮೇಳ ಉತ್ಸವವನ್ನು ನಿರಂತರವಾಗಿ ನಡೆಸಿಕೊಂಡು ಹೋಗುವುದು. ಧರ್ಮಪಿತ ಬಸವಣ್ಣನವರ ನಂತರ 800 ವರ್ಷಗಳ ಕಾಲ ಒಂದು ಅಂಧಕಾರವು ವ್ಯಾಪಿಸಿತ್ತು. ಈಗ ಅದು ಸರಿದಿದೆ. ಈಗ ಆರಂಭಗೊಂಡಿರುವ ಈ ಪುನರುತ್ಥಾನ ಕಾರ್ಯ ಸ್ಥಗಿತಗೊಳ್ಳಲೇ ಕೂಡದು. ನಮ್ಮ ನಂತರವೂ ಇದು ಚೆನ್ನಾಗಿ ಸಾಗಬೇಕು. ಶರಣ ಮೇಳವು ಅಖಂಡವಾಗಿ ಅವ್ಯಾಹತವಾಗಿ ನಡೆಯುವಂತಾಗಬೇಕು. ನೀವು ಈ ದಿಶೆಯಲ್ಲಿ ತನು-ಮನ-ಧನಗಳಿಂದ ನಿಮ್ಮನ್ನು ತೊಡಗಿಸಿಕೊಳ್ಳಬೇಕು.

1. *ಶರಣ ಮೇಳದ ನಾಲ್ಕೂ ದಿನಗಳಲ್ಲಿ ಭಾಗಿಗಳಾಗಬೇಕು. ಜನವರಿ 12 ರ ಬೆಳಿಗ್ಗೆ 10 ಗಂಟೆಯಿಂದ ದಿ. 15ರ ಮಧ್ಯಾಹ್ನ 3 ಗಂಟೆವರೆಗೆ ನಿಮ್ಮ ಉಪಸ್ಥಿತಿ ಅತ್ಯಗತ್ಯ.*

2. *ಪೀಠಾರೋಹಣ ಮತ್ತು ಅದರ ವಾರ್ಷಿಕೋತ್ಸವದಲ್ಲಿ ನೀವು ಇರಲೇಬೇಕು. ದಿ. 14 ರಂದು ಈ ವರ್ಷದಿಂದ ಪ್ರತಿವರ್ಷವು ಸಂಜೆ 7 ಕ್ಕೆ ಸಾಮೂಹಿಕ ಇಷ್ಟಲಿಂಗ ಪೂಜೆಯ ಪ್ರಾತ್ಯಕ್ಷಿಕೆ ಇರುತ್ತದೆ. ಬಸವ ಧರ್ಮದ ಮಹಾಜಗದ್ಗುರು ಪೀಠದ ಅಧಿಕಾರಿಗಳೂ, ಧರ್ಮಪೀಠದ ಇತರೆ ವಿರಕ್ತರು ವೇದಿಕೆಯ ಮೇಲೆ ಇಷ್ಟಲಿಂಗ ಪೂಜೆ ಮಾಡಿ ತೋರಿಸುವರು. ಆಗ ನೀವು ಹನ್ನೆರಡೂ ಜನರು ಪೂಜೆಯನ್ನು ಮಾಡಿ ತೋರಿಸಲೇಬೇಕು.* ಇಷ್ಟಲಿಂಗವು ಧರ್ಮಪಿತ ಬಸವಣ್ಣನವರ ಸರ್ವಶ್ರೇಷ್ಠ ಕೊಡುಗೆ. ಇಷ್ಟಲಿಂಗಾರ್ಚನೆ ಅಪೂರ್ವ ಕ್ರಿಯೆ. ಇದನ್ನು ನೀವು ಮಾಡುವುದು, ಮಾಡಿ ತೋರಿಸುವುದನ್ನು ಕಲಿಯಬೇಕು. ಗಣನಾಯಕರು ಧೋತ್ರವನ್ನು ಉಟ್ಟು ಶಲ್ಯ ಹೊದ್ದು (ಬಿಳಿಯ ವರ್ಣದ್ದಿರಬೇಕು, ರೇಷ್ಮೆ ಆದರೂ ಸರಿ, ಹತ್ತಿಯದಾದರೂ ಸರಿ) ಕಾವಿ ಸ್ಕಾರ್ಫ್ ಹಾಕಿರಬೇಕು. ಗಣ ನಾಯಕಿಯರು ಬಿಳಿಯ ಸೀರೆ, ಬಿಳಿಯ ರವಿಕೆ ತೊಟ್ಟು, ಸ್ಕಾರ್ಫ್ ಹಾಕಿರಬೇಕು. ಇಷ್ಟಲಿಂಗವು ಸುಂದರವಾಗಿ, ಹೊಳೆಯುವಂತೆ, ದೊಡ್ಡ ಗಾತ್ರದ್ದು ಇರಬೇಕು. (ಇವೆಲ್ಲ ವಿಡಿಯೋದಲ್ಲಿ ಚಿತ್ರೀಕರಿಸಲ್ಪಡುತ್ತವೆ) 33 ಮಣಿಗಳ ರುದ್ರಾಕ್ಷಿ ಕಂಠಮಾಲೆ, 108 ಕಾಳುಗಳ ಜಪಮಾಲೆ ನಿಮ್ಮಲ್ಲಿರಬೇಕು.

☆ ಪೀಠಾರೋಹಣದ ಪವಿತ್ರ ಜವಾಬ್ದಾರಿ ನಿಮ್ಮದಾಗಿರುವುದು.

☆ ಇಷ್ಟಲಿಂಗಾರ್ಚನೆಯ ಪ್ರಾತ್ಯಕ್ಷಿಕೆ ಸಹ ನಿಮ್ಮದಾಗಿರುವುದು. ನೀವು ಬಸವ ಧರ್ಮದ ಆಧಾರಸ್ತಂಭಗಳಂತೆ ಎಂಬ ಭಾವ ಬೆಳೆಸಿಕೊಳ್ಳಬೇಕು ಮತ್ತು ಬಲಿಸಿಕೊಳ್ಳಬೇಕು. ಧರ್ಮಪಿತ ಬಸವಣ್ಣನವರ ಸಂದೇಶವಾಹಕರೆಂಬ ನಂಬಿಕೆ ದೃಢಪಡಿಸಿಕೊಳ್ಳಬೇಕು.

ಗಣನಾಯಕ -ಗಣನಾಯಕಿಯರಲ್ಲಿ ಕೆಲವರು ಲಿಂಗನಿಷ್ಠೆ ಹೊಂದಿರದ, ಅನ್ಯದೈವ, ಉಪಾಸಕರೂ ಆಗಿದ್ದಾರೆ ಎಂಬ ಸುದ್ದಿ ಬಂದಿದೆ. ಇದರಿಂದ ಖೇದವಾಗಿದೆ. ಏಕೆಂದರೆ ನೀವು ಬಸವ ತತ್ತ್ವದ ಆದರ್ಶ ಮಾದರಿಗಳು ಆಗಬೇಕೆಂದು ನನ್ನಿಚ್ಛೆ.

ಆದ್ದರಿಂದ

1. ನಿಮಗೆ ಶರಣ ಮೇಳದ ನಾಲ್ಕೂ ದಿನ ಭಾಗವಹಿಸಲು ಆಗದೆ ಇದ್ದಲ್ಲಿ,
2. ಇಷ್ಟಲಿಂಗ ನಿಷ್ಠೆ-ಬಸವ ಗುರು ನಿಷ್ಠೆ ಅಳವಟ್ಟಿರದಿದ್ದಲ್ಲಿ
3. ಅನ್ಯದೇವತೆಗಳ ಉಪಾಸನೆ ಬಿಡಲು ಮಾನಸಿಕ ಸ್ಥೈರ್ಯ -ತಾತ್ವಿಕ ತಿಳುವಳಿಕೆ ಬಂದಿರದೆ ಇದ್ದಲ್ಲಿ,
4. ನಿಮ್ಮ ಸ್ವಂತ ಕೆಲಸದ (ಕಾಯಕದ) ಒತ್ತಡ ಬಹಳವಿದ್ದು ಸಮಾಜ-ಧರ್ಮಗಳಿಗೆ ಸಮಯ ಕೊಡಲು ಆಗದೆ ಇದ್ದಲ್ಲಿ,

ನೀವು ಸ್ವಯಂ ಪ್ರೇರಣೆಯಿಂದ ಈ ಹುದ್ದೆಯನ್ನು ಬಿಟ್ಟು ಕೊಡಿರಿ. ನಾವು ಬೇರೆಯವರನ್ನು ಆಯ್ಕೆ ಮಾಡುತ್ತೇವೆ. ಏಕೆಂದರೆ ಈ 12 ಸ್ಥಾನಗಳು ಖಾಲಿಯಾಗಿ ಇರಕೂಡದು.

ಪತ್ರ ಬರೆಯುವ ಸದಭ್ಯಾಸವಿಲ್ಲದೆ ನೀವು ಜನವರಿ 5ರೊಳಗೆ ಪತ್ರ ಬರೆದು ತಿಳಿಸದಿದ್ದರೆ, ಆಗ ಅದು ಗಣನಾಯಕ-ನಾಯಕಿ ಹುದ್ದೆಯಿಂದ ಕೆಳಗಿಳಿಯುವ ನಿಮ್ಮ ಮೌನ ಸಮ್ಮತಿ ಎಂದು ಭಾವಿಸಿ ಬೇರೆಯವರನ್ನು ಆಯ್ಕೆ ಮಾಡುತ್ತೇವೆ.

ಶುಭ ಹಾರೈಕೆಗಳೊಡನೆ,

ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲಸಂಗಮ

ಪುಷ್ಪಾಂಜಲಿ

(ಲಾವಣಿಯ ದಾಟಿಯಲ್ಲಿ)

ಬಸವ ಪ್ರಭುವಿನ ಚಿತ್ಕಳೆಯೊಂದು
ಬೆಳಗಿತು ಬಾನು-ಭುವಿಗಳನ್ನು
ಮನಗೂಳಿಯ ಶಿಶು ಸಂಗಮ ದೇವರು
ಲಿಂಗದಾಲಿಂಗನ ಹೊಂದಿದರು ||ಪ||

ಪ್ರವಚನ ಪಿತಾಮಹರೆನಿಸಿದ ಗುರುವು
ಬಸವ ಪ್ರಭೆಯನು ಸೂಸಿದರು
ಜಾತಿ_ಭೇದದ ಕರ್ಮವ ಕಳೆಯಲು
ಧರ್ಮದ ಕಂಕಣ ಕಟ್ಟಿದರು ||2||

ಅರಿದಡೆ ಶರಣ ಮರೆದಡೆ ಮಾನವ
ಅರುವಿನ ಕುರುಹನು ತೋರಿದರು
ಶರಣರ ಬಳಗವ ಕಟ್ಟುತ ನಡೆದು
ಗುರುವಿನ ಪದವಿಯ ಹೊಂದಿದರು ||3||

ಸುಂದರ ಸಂಜೆಯೊಳ್ ಸಂಗಮಗೈದು
ವಚನದ ಧಾರೆಯ ಹರಿಸಿದರು
ಶರಣರು ಬಿತ್ತಿದ ಭಕ್ತಿಯ ಬೆಳೆಗೆ
ತತ್ತ್ವದ ನೀರನು ಉಣಿಸಿದರು ||4|

ಬಸವನಾಣತಿಯಿಂ ದೀಕ್ಷೆಯ ಧರಿಸಿ
ಮನ್ನಣೆ ಹೊಂದಿದ ಮಹಾಯೋಗಿ
ವಾಙ್ಮಯ ತಪಸಿಯ ಅನುಭವ ವಾಣಿಗೆ
ನಾಡಿನ ಜನತೆಯು ತಲೆದೂಗಿ ||5||

ಕ್ರಾಂತಿಯ ಕಹಳೆಯ ಮೊಳಗಿಸಲೆಳಸಿ
ನಾಡು ನಾಡಿಗೆ ಸಂಚರಿಸಿ
ನಡೆ-ನುಡಿಗಳನ್ನು ಒಂದಾಗಿಸುತ
ಶರಣರ ಮೇಳವ ತಾವ್ ನಡೆಯಿಸಿ ||6||

ತನುವೇ ಮಂದಿರ ಮನವೇ ಲಿಂಗ
ಮನುಕುಲಕೊಬ್ಬನೆ ಮಹದೇವ
ಜ್ಯೋತಿಯ ತೆರದಲಿ ಉರಿದುಕೊಂಡು
ಬೆಳಗನು ನೀಡಿದ ಶ್ರೀ ಗುರುವೆ ||7||

ಮಹಾಮಾತೆಗೆ ಬೋಧನೆ ನೀಡಿದ
ಮಂಗಳ ಪಾಡಿದ ಬಸವೇಶ
ಕಂಗಳು ನಿಮ್ಮನು ಕಾಣದಿದ್ದರೂ
ನಮ್ಮೊಡನಿರುವಿರಿ ಲಿಂಗೇಶ || 8 ||

ಶ್ರದ್ಧಾಂಜಲಿಯಿದು ಪುಷ್ಪಾಂಜಲಿಯಿದು
ನಮಿಸುವೆ ನಿಮಗೆ ಓ ಗುರುವೆ
ನಿಮ್ಮಯ ಕರುಣೆ ಇರಲೆಮಗೆಂದೂ
ಧರ್ಮಕೆ ಜಯ ಜಯ ಜಯ ಗುರುವೆ

— ಶ್ರೀಮತಿ ಅನ್ನಪೂರ್ಣ ಮನ್ನಾಪುರ
ಮಂಡಿಹಾಳ

ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಪೀಠಾಧೀಶರಾಗಿದ್ದ ಲಿಂ|| ಪೂಜ್ಯ ಶ್ರೀಮನ್ ನಿರಂಜನ

ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರು.



ವಿಶ್ವಗುರು ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಮಣಿಗವಳ್ಳಿಯ ಮಾಣಿಕ್ಯವಾಗಿ 15.9.1931 ರಂದು ಜನಿಸಿ ಬಿ.ಎ. ಆನರ್ಸ್ ಪದವೀಧರರಾಗಿ ಬಸವ ಗುರುವಿನ ಪ್ರೇರಣೆಯಿಂದ 25.4.1955 ರಂದು ಆಧ್ಯಾತ್ಮಿಕ ಮಾನಸಾಂತರ ಹೊಂದಿ, 19.11.1956 ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಅಂದಿನಿಂದ ಇಂದಿನವರೆಗೂ ಒಂದು ದಿನವೂ ಬಿಡದಂತೆ ಪ್ರವಚನದ ಮೂಲಕ ಜ್ಞಾನ ದಾಸೋಹ ಮಾಡುತ್ತಿರುವ ಪೂಜ್ಯ ಲಿಂಗಾನಂದ ಸ್ವಾಮಿಗಳು ಅಪೂರ್ವ ವಾಗ್ಮಿಗಳು, ಪ್ರತಿಭಾನ್ವಿತ ಚೇತನ, ಪ್ರವಚನ ಪಿತಾಮಹರು.

ವಿಶ್ವಗುರು ಬಸವಣ್ಣನವರು ಬೋಧಿಸಿದ ವಿಶ್ವಧರ್ಮದ ಸಾರವನ್ನು ಪ್ರವಚನಗಳ ಮೂಲಕ ಮಾತ್ರವಲ್ಲ ಸಾಹಿತ್ಯ ಕೃತಿಗಳ ಮೂಲಕ ಪ್ರಚಾರ ಮಾಡಿದ್ದೇ ಅಲ್ಲದೆ, ಹಲವಾರು ಧರ್ಮ ಪ್ರಚಾರಕರನ್ನು ತರಬೇತಿಗೊಳಿಸಿ, ಅನೇಕ ಸಂಸ್ಥೆಗಳನ್ನು ಕಟ್ಟಿದ ಕ್ರಿಯಾಶೀಲ ಮಹಂತರು. ಪ್ರಪ್ರಥಮ ಮಹಿಳಾ ಜಗದ್ಗುರು ಪೀಠವನ್ನು ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಹೆಸರಿನಿಂದ ಸ್ಥಾಪಿಸಿ, ತಮ್ಮ ಕರಕಮಲ ಸಂಜಾತೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಪ್ರಥಮ ಅಧಿಕಾರಿಣಿಯನ್ನಾಗಿ ಮಾಡಿ, ಸ್ತ್ರೀ ಸಮಾನತಾ ತತ್ತ್ವವನ್ನು ಎತ್ತಿಹಿಡಿದ ಕ್ರಾಂತಿಕಾರಿಗಳು. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯನ್ನು ಸ್ಥಾಪಿಸಿ, ಅದರ ಚೇರ್ಮನ್ನರಾಗಿ ಸಂಸ್ಥೆಯನ್ನು ಬೃಹತ್ತಾಗಿ ಬೆಳೆಸಿದುದೇ ಅಲ್ಲದೆ, ಇದೀಗ ಕೂಡಲ ಸಂಗಮ ಕ್ಷೇತ್ರವನ್ನು ಸರ್ವಾಂಗ ಸುಂದರವಾಗಿ ಕಟ್ಟಲೋಸುಗ ಬಸವ ಧರ್ಮ ಪೀಠ ಟ್ರಸ್ಟನ್ನು ರಚಿಸಿ, ಬೃಹತ್ ಯೋಜನೆಗಳನ್ನು ಹಾಕಿರುವ ಅವಿಶ್ರಾಂತ ಕ್ರಿಯಾಮೂರ್ತಿ. ನಾಡಿನಾದ್ಯಂತ ಸಂಚರಿಸಿ, ಜನಮನದಲ್ಲಿ ಬಸವ ತತ್ತ್ವದ ಬೀಜಗಳನ್ನು ಬಿತ್ತಿ, ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು, ಒತ್ತಿ ಹಿಡಿದರೆ ಭಕ್ತಿ ಎಂಬ ರಸ' ಎಂಬ ವಾತಾವರಣ ನಿರ್ಮಾಣ ಮಾಡಿ, ಬಸವ ಯುಗಕ್ಕೆ ನಾಂದಿ ಹಾಡಿದ ಜಂಗಮ ಜ್ಯೋತಿ. ಇಂತಹ ಪೂಜ್ಯರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ದಿನಾಂಕ 13.1.1992 ರಂದು ಏರಿದರು. ಸಾರ್ಥಕದ ಬಾಳನ್ನು ಬಾಳಿ ದಿ. 30.6.1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನೈದಿದರು.

ಶರಣ ಮೇಳಕ್ಕೆ ಕಾರ್ಯಕರ್ತರನ್ನು ಕಳಿಸುವ ಬಗ್ಗೆ ರಾಷ್ಟ್ರೀಯ ಬಸವ ದಳದವರಿಗೆ ಸೂಚನೆ.

ಶರಣ ಮೇಳ ಉತ್ಸವವು ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತಿರುವುದು ಸರಿಯಷ್ಟೆ. ಕಳೆದ ವರ್ಷ 2 1/2 ಲಕ್ಷಕ್ಕೂ ಮೀರಿ ಜನರು ಸಮಾವೇಶಗೊಂಡು ಶರಣ ಮೇಳಕ್ಕೆ ಮೆರುಗು ನೀಡಿದರು. ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು /ಸ್ವಯಂ ಸೇವಕರು ನಿಷ್ಠಾವಂತರಾಗಿ ಹಗಲಿರುಳು ದುಡಿದು, ಶರಣ ಮೇಳದ ಯಶಸ್ಸಿಗೆ ಕಾರಣರಾದರು. ಪ್ರತಿವರ್ಷದಂತೆ ಈ ವರ್ಷವೂ ಸಹ ರಾಷ್ಟ್ರೀಯ ಬಸವ ದಳದವರು ಕಡ್ಡಾಯವಾಗಿ ತಮ್ಮ ಸ್ಥಳೀಯ ಘಟಕದಿಂದ ಕಾರ್ಯಕರ್ತರನ್ನು ಕಳಿಸುವ ವ್ಯವಸ್ಥೆ ಮಾಡಬೇಕು. ಸ್ವಯಂ ಸೇವಕರಿಗೆ ಊಟ ವಸತಿಗಳನ್ನು 'ಶರಣ ಮೇಳ ಉತ್ಸವ ಸಮಿತಿ'ಯು ನೋಡಿಕೊಳ್ಳುವುದು. ಆದರೆ ಅವರಿಗೆ ಕೂಡಲಸಂಗಮಕ್ಕೆ ಹೋಗಿ ಬರುವ ಖರ್ಚನ್ನು (ಅವರು ಬಡತನದಲ್ಲಿದ್ದು ಅಪೇಕ್ಷಿಸಿದರೆ) ಆಯಾ ರಾಷ್ಟ್ರೀಯ ಬಸವದಳದವರೇ ಭರಿಸತಕ್ಕದ್ದು. ಸ್ವಯಂ ಸೇವಕರು ಕೂಡಲ ಸಂಗಮಕ್ಕೆ ದಿನಾಂಕ 4.1.96ರ ಒಳಗೇ ಬರತಕ್ಕದ್ದದ್ದು. ಪ್ರತಿವರ್ಷ ತಪ್ಪದೇ ಬರುವ ಕಾರ್ಯಕರ್ತರು ಅಥವಾ ಹೊಸದಾಗಿ ಸ್ವಯಂ ಸೇವಕರಾಗಿ ಬರುವವರು ತಮ್ಮ ಊರಿನ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರು /ಕಾರ್ಯದರ್ಶಿಯವರಿಂದ ಅಧಿಕೃತ ಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು.

ಬಸವ ಭಕ್ತರಿಂದ ಸೇವೆಗೆ ಕರೆ

ಕಾರ್ಯಕರ್ತರು/ಸ್ವಯಂ ಸೇವಕರನ್ನು ಹೊರತುಪಡಿಸಿ ಪ್ರತಿಯೊಂದು ರಾಷ್ಟ್ರೀಯ ಬಸವದಳದಿಂದ ಶರಣ ಮೇಳಕ್ಕೆ ಬರುವ ಎಲ್ಲಾ ಬಸವ ಭಕ್ತರು ಪವಿತ್ರ ಶರಣ ಮೇಳದಲ್ಲಿ ಕಿಂಚಿತ್ ಆದರೂ ಸೇವೆಯನ್ನು ಮಾಡಿಯೇ ತಮ್ಮ ಊರಿಗೆ ತೆರಳಬೇಕೆಂಬ ನಿಲುವನ್ನು ತಳೆಯಬೇಕು. ಕಳೆದ ವರ್ಷ ಧಾರವಾಡ ರಾಷ್ಟ್ರೀಯ ಬಸವದಳದ ಶರಣ ಶರಣೆಯರು ಈ ನಿಲುವು ತಳೆದು ಒಂದು ಹೊತ್ತಿನ ಪ್ರಸಾದವನ್ನು ಲಕ್ಷಾಂತರ ಜನಕ್ಕೆ ನೀಡಿ ಸೇವೆ ಸಲ್ಲಿಸಿದರು. ಇದರಂತೆ ಎಲ್ಲ ರಾಷ್ಟ್ರೀಯ ಬಸವದಳದವರೂ ತಮ್ಮ ಕರ್ತವ್ಯವೆಂಬಂತೆ ಸ್ವಲ್ಪವಾದರೂ ತನುವಿನ ಸೇವೆ ಸಲ್ಲಿಸಬೇಕು. ಅದಕ್ಕಾಗಿ ಈ ಬಾರಿ ಶರಣ ಮೇಳದಲ್ಲಿ ಸೇವೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದೇನೆಂದರೆ,

ಶರಣ ಮೇಳದ ಪ್ರಸಾದವನ್ನು ನೀಡುವ ಕಾರ್ಯ ದಿನಾಂಕ 12 ರಿಂದ 15ರ ವರೆಗೆ ನಿರಂತರವಾಗಿ ನಡೆಯುತ್ತಲಿರುವುದು ಸರಿಯಷ್ಟೆ. ಪ್ರತಿದಿನ ಬೆಳಿಗ್ಗೆ 7 ರಿಂದ 12ರ ವರೆಗೆ, ಮಧ್ಯಾಹ್ನ 12 ರಿಂದ 5ರ ವರೆಗೆ, ಸಂಜೆ 5 ರಿಂದ ರಾತ್ರಿ 12ರ ವರೆಗೆ ಹೀಗೆ ಪ್ರಸಾದದ ವ್ಯವಸ್ಥೆ ನಡೆಯುವುದು.

ಈ ಸಂದರ್ಭದಲ್ಲಿ ಮೇಲೆ ಸೂಚಿಸಿದಂತೆ, ಬಸವ ಭಕ್ತರು 4 ದಿನದ ಕಾರ್ಯಕ್ರಮದಲ್ಲಿ ಯಾವುದಾದರೂ ಒಂದು ದಿನ, ಒಂದು ಅವಧಿಗೆ ತಮ್ಮ ಸೇವೆಯನ್ನು ಸಲ್ಲಿಸಲು ಅನುವು ಮಾಡಿಕೊಡಲಾಗುವುದು. ಈ ರೀತಿ ಲಕ್ಷಾಂತರ ಬಸವ ಭಕ್ತರಿಗೆ ಪ್ರಸಾದ ನೀಡಿ ಸೇವೆ ಸಲ್ಲಿಸುವ ಅಪೂರ್ವ ಅವಕಾಶವನ್ನು ಈ ವರ್ಷದಿಂದ ಕಲ್ಪಿಸಿದ್ದೇವೆ. ಇದನ್ನು ಪ್ರತಿಯೊಂದು ರಾಷ್ಟ್ರೀಯ ಬಸವದಳದವರು ಒಪ್ಪಿಕೊಂಡು ಕೂಡಲೇ ತಮ್ಮ ಒಪ್ಪಿಗೆಯನ್ನು ಹಾಗೂ ಶರಣ ಮೇಳಕ್ಕೆ ಎಷ್ಟು ಜನ ಬರುತ್ತಿದ್ದೀರಿ (ಅಂದಾಜು) ಎಂಬುದನ್ನು ಬೇಗನೇ ನಮಗೆ ತಿಳಿಸತಕ್ಕದ್ದು. ಆಗ ನಾವು ತಮಗೆ ಸೇವಾವಧಿ ಯಾವ ದಿನ ಹಾಗೂ ಯಾವ ಅವಧಿಯಲ್ಲಿ ಮಾಡಬೇಕೆಂದು ಮೊದಲೇ ಪತ್ರ ಬರೆದು ತಿಳಿಸುವೆವು. ಇದಕ್ಕೆ ಹೆಚ್ಚಿನ ಆಸಕ್ತಿ ತೋರುವಿರಾಗಿ ನಂಬುವೆವು.

- ವಿಜಯಾನಂದ
ಬಸವ ಮಂಟಪ, ಬೆಂಗಳೂರು

ಧರ್ಮಕ್ಷೇತ್ರ ಸಂಗಮ

ಧರ್ಮಕ್ಷೇತ್ರ ಸಂಗಮ | ಕೂಡಲ ಸಂಗಮ
ಬಸವ ಬಯಲಾದ ಕ್ಷೇತ್ರ ಸಂಗಮ /ಅನುಪಮ
ಬಸವಣ್ಣನ ಐಕ್ಯಕ್ಷೇತ್ರ ಸಂಗಮ ||ಪ||

ವನದೈಸಿರಿಯ ಮಡಿಲಲ್ಲಿ| ಬಸವ ಸಾಗರ ಸಮೀಪದಲ್ಲಿ
ಕೃಷ್ಣೆ ಮಲಾಪಹಾರಿ ಕೂಡಿಹರಿಲ್ಲಿ
ಈ ನಾಡು ಬಸವನ ನಾಡು ಶರಣರ ಬೀಡು ಬಂದುನೋಡು ||೧||

ಬಸವಣ್ಣನೇ ಧರ್ಮಗುರು| ಇಷ್ಟಲಿಂಗ ದೇವನ ಕುರುಹು
ವಚನ ಸಾಹಿತ್ಯವೇ ಧರ್ಮ ಸಂಹಿತೆಯು
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು || ೨||

ಮಹಾಮನೆ ಮಹಮಠದಲ್ಲಿ | ಶರಣ ಮೇಳ ನಡೆದಿಹುದಿಲ್ಲಿ
ಬಸವನ ಭಕ್ತರು ಬಂದು ನೆರೆದಿಹರಿಲ್ಲಿ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು || ೩||

ಜಗದ್ಗುರು ಲಿಂಗಾನಂದ ಸ್ವಾಮಿ | ಜಗದ್ಗುರು ಮಾತೆ ಮಹಾದೇವಿ
ಬಸವ ತತ್ತ್ವ ಬೆಳಗಿಸುತಿರುವ ದಿವ್ಯಜ್ಯೋತಿ
ಈ ನಾಡು ಬಸವನ ನಾಡು, ಶರಣ ಬೀಡು ಬಂದು ನೋಡು || ೪||

ಕನ್ನಡಮ್ಮನ ಹಿರಿಮೆ | ಭಾರತಾಂಬೆಯ ಹೆಮ್ಮೆ
ಕಂಡು ಬೆರಗಾದೆವು ಪೂಜ್ಯದ್ವಯರ ಜಾಣ್ಮೆ
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ||೫||

ಕಲ್ಯಾಣ ರಾಜ್ಯ ಕಟ್ಟುವೆವೆಂದು| ಬಸವಧರ್ಮ ಬೆಳೆಸುವೆವೆಂದು
ಬಸವದಳ ವೀರರೇ ಪಣವ ತೊಡಬೇಕೆಂದು
ಈ ನಾಡು ಬಸವನ ನಾಡು ಶರಣರ ಬೀಡು ಬಂದು ನೋಡು ||೬||

ಧರ್ಮಕ್ಷೇತ್ರ ಸಂಗಮ | ಕೂಡಲ ಸಂಗಮ
ಬಸವ ಬಯಲಾದ ಕ್ಷೇತ್ರ ಸಂಗಮ | ಅನುಪಮ
ಬಸವಣ್ಣನ ಐಕ್ಯ ಕ್ಷೇತ್ರ ಸಂಗಮ

ರಚನೆ | ಸೌ. ಶಶಿಕಲಾ ತಾಯಿ ಮಡಕಿ
ಸೊಲ್ಲಾಪುರ



ಬಸವ ಧರ್ಮ ಪೀಠದ ಜ್ಞಾನರತ್ನ - ಪೂಜ್ಯ ಮಾತಾಜಿಯವರು

"ಮಾತಾಜಿಯವರ ನಾಲಿಗೆಯಲ್ಲಿ ಕನ್ನಡ ಸಾಹಿತ್ಯ ಸರಸ್ವತಿಯು ನಾಟ್ಯವಾಡುತ್ತಾಳೆ."-

ಇದು ಹೆಸರಾಂತ ಸಾಹಿತಿ ದೇ. ಜವರೇಗೌಡರ ಉದ್ಗಾರ! ನಿಜ, ಪೂಜ್ಯ ಮಾತಾಜಿಯವರ "ನುಡಿಗಡಣ" ಎಂದರೆ, ಸಕ್ಕರೆಗೆ ಇರುವೆ ಮುತ್ತುವ ಹಾಗೆ ಪಂಡಿತರು, ಸಾಹಿತಿಗಳು, ಮುಮುಕ್ಷುಗಳು, ಧಾರ್ಮಿಕ ಮನೋಭಾವದ ಭಕ್ತರು, ಜನಸಾಮಾನ್ಯರು ಬಂದು ಬಂದು ಸೇರುವರು. ಆ ನುಡಿಗಡಣದ ಸಿಹಿಯನ್ನು ಆಸ್ವಾದಿಸುತ್ತ ಮೈಮರೆಯುವರು, ಸಮಯದ ನೆನಪು ಎಷ್ಟೂ ಬಾರದು. ಪ್ರವಚನ ಮುಗಿದ ನಂತರ ಸಮಯ ನೋಡಿ ಚಡಪಡಿಸಬೇಕಷ್ಟೆ ! ಇಂದು ಕರ್ನಾಟಕದಾದ್ಯಂತ ಹಾಗೂ ಬಸವಾಯಿತರಿರುವ ಮಹಾರಾಷ್ಟ್ರ, ತಮಿಳುನಾಡು, ಆಂಧ್ರಗಳಲ್ಲಿ 'ಮಾತಾಜಿ'ಯವರ ಹೆಸರು ಜನಜನಿತವಾಗಿದ್ದು ಅವರ ಜ್ಞಾನಶಕ್ತಿಯ ಪ್ರಭಾವದಿಂದಲೇ. ಸಾಮಾನ್ಯವಾಗಿ ಜ್ಞಾನವು ಎಂಥಹ ಬುದ್ಧಿಶಕ್ತಿ ಉಳ್ಳವರಿದ್ದರೂ ಒಂದು ಸೀಮಿತ ಪರಧಿಯನ್ನು ಹೊಂದಿರುತ್ತದೆ. ಹಾಗೆ ಬುದ್ಧಿವಂತರೆನಿಸಿ ಕೊಂಡವರು ಎಲ್ಲವನ್ನು ತಿಳಿದರೂ, ಎಲ್ಲದರಲ್ಲೂ ಪರಿಣತಿ ಹೊಂದಿರಲು ಸಾಧ್ಯವಿಲ್ಲ. ಯಾವುದಾದರೂ ಒಂದು ವಿಷಯದಲ್ಲಿ ಮಾತ್ರ ಪರಿಣಿತರಾಗಿರುವರು. Jack of all, master of one ಎಂಬಂತೆ. ಆದರೆ ಪೂಜ್ಯ ಮಾತಾಜಿಯವರದು ಎಲ್ಲರನ್ನೂ ಮೀರಿದ ಜ್ಞಾನ. Jack of all master of all ಎಂಬಂತೆ ಯಾವುದೇ ವಿಷಯದಲ್ಲೂ ಅಪರಿಮಿತ ಜ್ಞಾನ. ಅವರ ಪರಿಣತಿ ಬಗ್ಗೆ ಎಲ್ಲರಿಗೂ ಆಶ್ಚರ್ಯ. ಯಾವುದೇ ವಿಷಯ ಅವರ ಕಿವಿಗೆ ಬಿದ್ದರೆ ಅದರ ಹಿನ್ನಲೆ ಮುನ್ನಲೆಗಳನ್ನು ಜಾಲಾಡಿ ಬಿಡುತ್ತಾರೆ.

ಕ್ರಾಂತಿಯೋಗಿ ಬಸವಣ್ಣ ಸಿನಿಮಾ ತೆಗೆಯುವಾಗ ಸಂಗೀತ ನಿರ್ದೇಶಕರಾದ ಎಂ. ರಂಗರಾವ್‌ರವರು, ಪೂಜ್ಯ ಮಾತಾಜಿಯವರ ಸಂಗೀತ ಜ್ಞಾನ ಪ್ರೌಢಿಮೆಯನ್ನು ಕಂಡು ಆಶ್ಚರ್ಯಗೊಂಡರಂತೆ. "ಮುಂದೆ ನೀವು ಮತ್ತೇನಾದರೂ ಸಿನಿಮಾ ತೆಗೆಯುವುದಿದ್ದರೆ ನಿಮಗೆ ಸಂಗೀತ ನಿರ್ದೇಶಕರ ಅವಶ್ಯಕತೆಯೇ ಇಲ್ಲ......" ಎಂದು ಅಭಿಮಾನದಿಂದ ಹೇಳುತ್ತಿದ್ದರಂತೆ. ಸಣ್ಣ ಸಣ್ಣ ವಸ್ತುವಿನಿಂದ, ವಿಷಯಗಳಿಂದ ಹಿಡಿದು ದೊಡ್ಡ ದೊಡ್ಡ ವಿಷಯಗಳವರೆಗೆ, ಅದರಲ್ಲಿನ ಸಂಪೂರ್ಣ ಮಾಹಿತಿಯನ್ನು ತಿಳಿದುಕೊಳ್ಳುವವರೆಗೆ ಪೂಜ್ಯ ಮಾತಾಜಿಯವರಿಗೆ ಸಮಾಧಾನವೇ ಇರದು. ಅವರ ಈ ದೃಷ್ಟಿಕೋನವೇ ಅವರನ್ನು ಇಂದು ಅತ್ಯುತ್ತಮ ಜ್ಞಾನಿಯನ್ನಾಗಿ ಮಾಡಿತು ಎನ್ನಬಹುದು.

ಪೂಜ್ಯ ಮಾತಾಜಿಯವರದು ಅಪೂರ್ವ ವಾಕ್ ಶಕ್ತಿ. ಅವರಲ್ಲಿ ಹೊರ ಹೊಮ್ಮುವ ಅನುಭಾವವನ್ನು ವಿವರಿಸಲಾಗದು. ಆ ವಾಕ್ ಶಕ್ತಿಯಲ್ಲಿ ಬಸವಣ್ಣನವರ ಬಗ್ಗೆ ಅವಿರಳ ಭಕ್ತಿಯಿದೆ. ಆ ಭಕ್ತಿಯಲ್ಲಿ ತೀವ್ರವಾದ ಕಳಕಳಿ ಇದೆ. ಗುರು ಬಸವಣ್ಣನವರ ಏಕಮಾತ್ರ ಪುತ್ರಿಯಾಗಿ ತನ್ನ ತಂದೆಗೆ ಎಳ್ಳಷ್ಟು ಅಪಚಾರವಾದರೂ ಸಹಿಸದ "ಕ್ರೋಧ" ವಿದೆ. ಆ ಕ್ರೋಧವನ್ನು ಅಷ್ಟೇ ವಿವೇಕಯುಕ್ತವಾಗಿ ವ್ಯಕ್ತಪಡಿಸುವ ಜಾಣ್ಮೆ ಇದೆ. ಅವರಲ್ಲಿ ಅಗಾಧವಾದ ಜ್ಞಾನಯುಕ್ತವಾದ ಪ್ರವಚನದ ಸಿರಿ ಅಡಗಿದೆ. ಆ ಜ್ಞಾನವಾದರೂ ಎಂಥಹದು? ಎಲ್ಲ ಜಾತಿಯವರನ್ನು, ಎಲ್ಲ ಧರ್ಮದವರನ್ನು, ಪಂಡಿತರನ್ನು ತಲೆದೂಗಿಸುವಂಥಹದ್ದು. ಅವರ ಜ್ಞಾನ ಕೇವಲ ಜ್ಞಾನವಲ್ಲ. ಅದು ಕ್ರಿಯಾತ್ಮಕ ಜ್ಞಾನ. ಆ ಕ್ರಿಯಾತ್ಮಕ ಜ್ಞಾನದಿಂದಲೇ ಇಂದು ಪೂಜ್ಯ ಮಾತಾಜಿಯವರು ಸೂಜಿಗಲ್ಲಿನಂತೆ ಎಲ್ಲರನ್ನೂ ಆಧ್ಯಾತ್ಮಿಕದತ್ತ ಆಕರ್ಷಿಸುತ್ತಿರುವುದು.

ಇಂಥ ಜ್ಞಾನ ರತ್ನ ಉದಯಿಸಿದ್ದು 13-3-1946 ರಲ್ಲಿ, ಚಿತ್ರದುರ್ಗದ ಸಮೀಪದ ಸಾಸಲ ಹಟ್ಟಿ ಎಂಬ ಗ್ರಾಮದಲ್ಲಿ ಡಾ|| ಎಸ್.ಆರ್. ಬಸಪ್ಪ ಹಾಗೂ ಶ್ರೀಮತಿ ಗಂಗಮ್ಮನವರ ಮಗಳಾಗಿ. ಆಗ ಇಟ್ಟ ಹೆಸರು ರತ್ನ. ಇಂದು ದೇಶಾದ್ಯಂತ "ಜ್ಞಾನ ರತ್ನ"ವಾಗಿ ಪ್ರಕಾಶಿಸುತ್ತಿದೆ, ಎಲ್ಲರ ಜೀವನಕ್ಕೆ ಜ್ಞಾನ ಬೆಳಕನ್ನು ನೀಡುತ್ತಲಿದೆ. ಆಗ ಕನಸು ಕಂಡಿದ್ದು ಎಂ.ಬಿ.ಬಿ.ಎಸ್. ಮಾಡಿ ಡಾಕ್ಟರ್ ಆಗಬೇಕೆಂದು. ಆದರೆ ಕೌಟುಂಬಿಕ ಪರಿಸ್ಥಿತಿಯಿಂದ ಅದು ಬದಲಾಯಿತಾದರೂ ನಂತರವೂ ವೈದ್ಯೆಯಾದರು! ಕೇವಲ ದೇಹಕ್ಕೆ, ಅಂಟಿರುವ ರೋಗಗಳಿಗಲ್ಲ, ಮಾನವನ ಅಂತರಂಗಕ್ಕೆ ಅಂಟಿರುವ ಜಾಡ್ಯಕ್ಕೆ! ಭವರೋಗ ವೈದ್ಯರಾಗಿ ಸಮಾಜಕ್ಕೆ ಅಂಟಿದ ನಾನಾ ರೋಗಗಳನ್ನು ಗುಣಪಡಿಸಲು! ಚಿತ್ರದುರ್ಗದಲ್ಲಿ ಆಕಸ್ಮಿಕವಾಗಿ ಪೂಜ್ಯ ಗುರೂಜಿಯವರ ಪ್ರಭಾವಯುತ ಭಾಷಣ ಕೇಳಿ ತಮ್ಮನ್ನು ಆಧ್ಯಾತ್ಮಿಕಕ್ಕೇ ಮೀಸಲಿಡಲು ಸಂಕಲ್ಪಿಸಿ, ಪೂಜ್ಯ ಗುರೂಜಿಯವರಿಂದ ದೀಕ್ಷೆ ಪಡೆದುದು ಅವರ ಜೀವನದ ಮಹತ್ತರ ತಿರುವು.

ವಚನಗಳ ಮೌಲ್ಯವನ್ನು ಈ ಶತಮಾನದಲ್ಲಿ ಗುರುತಿಸಿದವರು ಕೆಲವರು ಮಾತ್ರ. ವಚನ ಪಿತಾಮಹ ಹಳಕಟ್ಟಿಯವರು, ಪೂಜ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಹಾಗೂ ಪೂಜ್ಯ ಮಾತಾಜಿಯವರು ಮಾತ್ರವೆಂದು ಸ್ಪಷ್ಟವಾಗಿ ಕೈ ತೋರಬಹುದು. ಪೂಜ್ಯ ಹಳಕಟ್ಟಿಯವರು ವಚನಗಳ ಮೌಲ್ಯಗಳನ್ನು ಗುರುತಿಸಿ, ಹರಿದು ಹಂಚಿಹೋದ ವಚನ ಸಾಹಿತ್ಯವನ್ನು ತೀವ್ರವಾದ ಕಳಕಳಿಯಿಂದ ತಮ್ಮ ಜೀವನವನ್ನೇ ಅದನ್ನು ಪೂರ್ಣವಾಗಿ ಸಂಗ್ರಹಿಸುವತ್ತ ಮುಡುಪಿಟ್ಟು, "ವಚನ ಪಿತಾಮಹ"ರಾದರು. ಹೀಗೆ ಸಂಗ್ರಹಿತವಾದ ವಚನಗಳು ಅರ್ಥೈಸುವವರಿಲ್ಲದೆ ಕೇವಲ ಕವಿಗಳಿಗೆ, ಸಾಹಿತಿಗಳಿಗೆ, ಭಾಷಣಕಾರರಿಗೆ ಊಟಕ್ಕೆ ಉಪ್ಪಿನಕಾಯಿ ತರಹ ಉಪಯೋಗಿಸುತ್ತಿದ್ದಂತಹ ಸಮಯದಲ್ಲಿ ಇದರ ಮೌಲ್ಯವನ್ನು ಮತ್ತೆ ಗುರುತಿಸಿದವರು ಪೂಜ್ಯ ಶ್ರೀ ಲಿಂಗಾನಂದ ಸ್ವಾಮೀಜಿಯವರು. ಅವರು ಮಾಡಿದ ಕ್ರಾಂತಿ ಸಮಗ್ರ ಲಿಂಗಾಯತರನ್ನು ಎಚ್ಚರಿಸಿತಲ್ಲದೆ, ಲಿಂಗಾಯತೇತರರನ್ನೂ ಸಹ ಇಷ್ಟಲಿಂಗ ಧಾರಿಯಾಗಲು ಪ್ರೇರೇಪಿಸಿತು. ವಚನಗಳ ಸಾರವನ್ನು ತಾವು ಉಂಡುದಲ್ಲದೆ ಸಮಸ್ತ ಜನತೆಗೆ, 'ಪ್ರವಚನ' ಎಂಬ ವಿಶಿಷ್ಟ ಕಲೆಯನ್ನು ಕರಗತ ಮಾಡಿಕೊಂಡು ವಚನ ಜ್ಞಾನವನ್ನು

ಜನತೆಗೆ ಧಾರೆಯೆರೆದು "ಪ್ರವಚನ ಪಿತಾಮಹ"ರಾದರು. ದೈವೀ ಸಂಕಲ್ಪದಿಂದ ಪೂಜ್ಯರ ಪ್ರವಚನದಿಂದ ಪ್ರಭಾವಿತರಾಗಿ ಆಧ್ಯಾತ್ಮ ಜೀವನಕ್ಕೆ ಬಂದ ಪೂಜ್ಯ ಮಾತಾಜಿಯವರು ಪೂಜ್ಯ ಗುರೂಜಿಯವರ ಹೆಗಲೆಣೆಯಾಗಿ ದುಡಿದು, "ವಚನ ಸಾಹಿತ್ಯವೆಂಬುದು ಕೇವಲ ಸಾಹಿತ್ಯವಲ್ಲ. ಅದು ಅನುಭಾವವನ್ನು ಹೊರ ಸೂಸುವ ದೇವವಾಣಿ. ಅದೊಂದು ಧರ್ಮ ಸಂಹಿತೆ. ಒಂದು ಪರಿಪೂರ್ಣ ಧರ್ಮವೆನಿಸುವ ಎಲ್ಲ ಅರ್ಹತೆಗಳು ಅದರಲ್ಲಿ ತುಂಬಿವೆ. ಇಂದು ವಿಶ್ವದ ಎಲ್ಲ ಜನತೆಗೆ ಎಲ್ಲಕಾಲಕ್ಕೆ ಬೇಕಾದಂತಹ ಅಮೂಲ್ಯ ಸತ್ಯ-ತತ್ವಗಳನ್ನು ಒಳಗೊಂಡಿದೆ. ಇದೊಂದು ಸ್ವತಂತ್ರಧರ್ಮ ಈ ಧರ್ಮವು ಗುರು ಬಸವಣ್ಣನವರಿಂದ ಸಂಸ್ಥಾಪಿಸಲ್ಪಟ್ಟಿದೆ" ಎಂಬುದನ್ನು ಪ್ರಪ್ರಥಮ ಬಾರಿಗೆ ಸಂಶೋಧಿಸಿ ತೋರಿಸಿ ಅದನ್ನು ಮತ್ತೆ ವೈವಿಧ್ಯಮಯವಾಗಿ ಪ್ರಚಾರಕ್ಕೆ ತಂದು ಕೊಟ್ಟಂತಹ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು "ಬಸವ ಧರ್ಮದ ಪುನರುತ್ಥಾನಕರೆನಿಸಿದ್ದಾರೆ."

ಪೂಜ್ಯ ಗುರೂಜಿಯವರು ಪೂಜ್ಯ ಮಾತಾಜಿಯವರ ಪ್ರತಿಭೆಯನ್ನು ಅವರ ಚಿಕ್ಕವಯಸ್ಸಿನಲ್ಲಿಯೇ ಗುರುತಿಸಿದ್ದು ಅವರಲ್ಲಿನ ದೂರ ದೃಷ್ಟಿಯನ್ನು ಪರಿಚಯಿಸುತ್ತದೆ. ರತ್ನದ ಬೆಲೆಯನ್ನು ರತ್ನ ವ್ಯಾಪಾರಿಯೇ ಬಲ್ಲ; ಹಾಗೆಯೇ ಈ ಜ್ಞಾನ ರತ್ನದ (ಪೂಜ್ಯ ಮಾತಾಜಿಯವರ ಮೊದಲ ಹೆಸರು ರತ್ನ) ಬೆಲೆಯನ್ನು ಅನುಪಮ ಜ್ಞಾನಿ ಪೂಜ್ಯ ಗುರೂಜಿಯವರು ಗುರುತಿಸಿ ಅದನ್ನು ಬೆಳಕಿಗೆ ತಂದರು. ಆ ರತ್ನದ ಉಜ್ವಲ ಬೆಳಕು ಜನತೆಯಲ್ಲಿನ ಅಜ್ಞಾನದ ಕತ್ತಲೆಯನ್ನು ಹೊರದೋಡಿಸುವಂತೆ ಮಾಡಿದರು. ಶಿಲ್ಪಿಯು ತಾನು ಕೆತ್ತಿದ ಮೂರ್ತಿಯ ಸೊಬಗನ್ನು ಕಂಡು ತಾನೇ ಅಚ್ಚರಿಪಡುವಂತೆ, ಪೂಜ್ಯ ಮಾತಾಜಿಯವರ ಅಗಾಧ ಜ್ಞಾನ ಕಂಡು ಅವರನ್ನು 'ಮಾತೆ' ಎಂದು ಕರೆದರು. ಗುರು ಪುತ್ರಿಯಾದ ಮಾತಾಜಿಯವರು ಗುರುವಿನ ದೃಷ್ಟಿಯಲ್ಲಿ ಮಾತೆಯಾದರು.

ಪೂಜ್ಯ ಮಾತಾಜಿಯವರ ಆಗಮನವು ಬಸವ ಧರ್ಮಕ್ಕೆ ವಸಂತಕಾಲವೆಂದೇ ತಿಳಿಯಬೇಕು. ಅಸಾಧಾರಣ ಜ್ಞಾನವು ಹಂತ ಹಂತವಾಗಿ ಪೂಜ್ಯ ಗುರೂಜಿಯವರ ನೆರಳಿನಲ್ಲಿಯೇ ಪ್ರಖರಗೊಳ್ಳುತ್ತಾ ಇಡೀ ಸಮಾಜಕ್ಕೆ ಪೂಜ್ಯ ಮಾತಾಜಿಯವರು "ಅನಿವಾರ್ಯ" ಆದರು. ಧರ್ಮದ ಅಳವಡಿಕೆ ಎಂದರೆ ಮೂಗು ಮುಚ್ಚಿ ಕುಳಿತು ತಪಸ್ಸು ಮಾಡುವುದಲ್ಲ ಧರ್ಮ ಭೋದನೆಯಲ್ಲಿ ಕ್ರಿಯಾತ್ಮಕ ಜ್ಞಾನವನ್ನು ಅಳವಡಿಸಿಕೊಂಡು ಇಡೀ ಜೀವನವೇ ತಪಸ್ಸಾಗಬೇಕು ಎಂಬ ಸಾಮಾಜಿಕ-ಧಾರ್ಮಿಕ ಎರಡಕ್ಕೂ ಸಹಾಯವಾಗುವ ಕಟು ಸತ್ಯವನ್ನು ತೋರಿದವರು ಪೂಜ್ಯ ಮಾತಾಜಿಯವರು.

ಪೂಜ್ಯ ಮಾತಾಜಿಯವರದು ಅಸಾಧಾರಣ ವ್ಯಕ್ತಿತ್ವ. ಅವರೊಬ್ಬ 'ಮಾನವ ಕಂಪ್ಯೂಟರ್' ಎಂದೇ ಪೂಜ್ಯ ಗುರೂಜಿಯವರು ಅಭಿಮಾನದಿಂದ ಕರೆಯುತ್ತಿದ್ದರು. ಅವರ ವಿಚಾರ ಶಕ್ತಿ, ಬರಹಶಕ್ತಿ, ಕ್ರಿಯಾಶಕ್ತಿ, ಅನುಪಮ-ಅನುಕರಣೀಯ. ಅವರ ನೆನಪಿನ ಶಕ್ತಿಯಂತೂ ಆಶ್ಚರ್ಯ ತರುವಂಥಹದ್ದು. ಪೂಜ್ಯ ಮಾತಾಜಿಯವರು ಅಂದು 12ನೇ ಶತಮಾನದಲ್ಲಿ ಶರಣರು ಯಾವ ಮನೋಭಾವನೆಗಳನ್ನು, ವಿಚಾರಗಳನ್ನು ಹುದುಗಿಸಿ ವಚನಗಳನ್ನು ಬರೆದರೋ ಆ

ಭಾವನೆ, ವಿಚಾರಗಳನ್ನು ಸಮಗ್ರವಾಗಿ ಹೊರತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ. ಆದ್ದರಿಂದಲೇ ಇಂದು ಬಸವ ಧರ್ಮವನ್ನು ಮತ್ತೆ ಪುನರುತ್ಥಾನಿಸಲು ಸಾಧ್ಯವಾದುದು ಎಂದು ಬೇರೆ ಹೇಳಬೇಕಾಗಿಲ್ಲ. ವಚನಗಳಲ್ಲಿ ಹುದುಗಿದ ವೈಚಾರಿಕತೆ, ಅನುಭವ ಇವುಗಳ ಮರ್ಮ ತಿಳಿಯದ್ದರಿಂದಲೇ ಇದುವರೆಗೂ ಧರ್ಮದ ಕಲ್ಪನೆ, ಧರ್ಮದ ಗುರುಗಳಿಗೆ ಬಾರದೆ ವೈದಿಕ ಧರ್ಮದ ಮೊರೆ ಹೋಗಿದ್ದರೆಂಬುದು ಸ್ಪಷ್ಟ.

ಸಾಮಾನ್ಯವಾಗಿ ಯಾವುದೇ ಇತರೆ ಲೇಖಕರ ಕೃತಿಗಳನ್ನು ತೆಗೆದುಕೊಂಡರೂ ಅವು ಸಹಜವಾಗಿ ಮನಸ್ಸಿಗೆ ರಂಜನೆ ಕೊಡುವಂಥಹವು. ಆದರೆ ಪೂಜ್ಯ ಮಾತಾಜಿಯವರ ಕೃತಿಗಳು ಮನುಷ್ಯನ ಹೃದಯ ಪರಿವರ್ತಿಸುವಂಥಹವು. ವಿಶಾಲ ಹೃದಯಿಯನ್ನಾಗಿ ಮಾಡುವಂತಹವು. ಪೂಜ್ಯರ ಲೇಖನಗಳು ಮನುಷ್ಯನಲ್ಲಿ ವಿಚಾರತೆಯನ್ನು ಬೆಳೆಸುವಂತಹ, ಆತ್ಮ ವಿಕಾಸಕ್ಕೆ, ಜನ್ಮ ಸಾರ್ಥಕತೆಗೆ ಮಾರ್ಗದರ್ಶಿಯಾಗುವಂಥಹವು. ಪೂಜ್ಯ ಮಾತಾಜಿಯವರು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿರುವ ಕಾರ್ಯ ಅಪಾರವಾದುದು. ಅವರ ಸಾಹಿತ್ಯ ಕೃಷಿ ವೈವಿಧ್ಯಮಯ. ಅವರು ಬರೆದ ಕಾದಂಬರಿ-ಹೆಪ್ಪಿಟ್ಟ ಹಾಲು (ರಾಜ್ಯ ಪ್ರಶಸ್ತಿ ಸಿಕ್ಕಿದೆ). ಚರಿತ್ರೆ-ಕೆಳದಿ ಚೆನ್ನಮ್ಮ, ಸಂಶೋಧನೆ-ಕಾಲ ನಿರ್ಣಯ ಇವುಗಳೊಂದಿಗೆ, ಧರ್ಮ ನಿಷ್ಠೆ ಬೆಳಸುವ ಕಲ್ಯಾಣ ಕ್ರಾಂತಿ, ಮನ ಪರಿವರ್ತಿಸುವ - ದೇವರ ಮಕ್ಕಳು, ಸಮಾಜ ತಿದ್ದುವ - ಪತಿತೋದ್ಧಾರಕ, ಆಧ್ಯಾತ್ಮ ಮತ್ತು ಮಹಿಳೆ, ನೊಂದವರ ಜೀವನಕ್ಕೆ ಸ್ಫೂರ್ತಿಕೊಡುವ ಹಾಗೂ ಜಗನ್ಮಾತ ಅಕ್ಕಮಹಾದೇವಿಯ ಜೀವನ ಚರಿತ್ರೆಯನ್ನು ತಿಳಿಸುವ ಅತ್ಯಂತ ಉತ್ಕೃಷ್ಟ ಕೃತಿ - ತರಂಗಿಣಿ, ಐಕ್ಯಮತ್ಯ ಹೇಳುವ ಹಿಂದೂ ಯಾರು?, ಹಾಗೂ ಧರ್ಮಗುರುವಿನ ಬಗ್ಗೆಯಂತೂ ಬರೆದ ಹಲವಾರು (ಪಟ್ಟಿ ಮಾಡುತ್ತ ಹೋದರೆ ಪುಟಗಟ್ಟಲೆಯಾದೀತು) ಪುಸ್ತಕಗಳು (ಸುಮಾರು 85) ಪೂಜ್ಯ ಮಾತಾಜಿಯವರ ವ್ಯಕ್ತಿತ್ವವನ್ನು ವಿಶ್ವಕ್ಕೆ ತೋರಿಕೊಡುವ ಕನ್ನಡಿಗಳಾಗಿವೆ.

ಪೂಜ್ಯ ಮಾತಾಜಿಯವರದು ನೇರ ಮಾತಿನ ಸ್ವಭಾವ. ಮನದಲ್ಲಿ ಏನನ್ನೂ ಇಟ್ಟುಕೊಳ್ಳರು. ಅತಿ ಸೌಮ್ಯ ನುಡಿಯೂ, ಧರ್ಮದ ವಿರುದ್ಧ ನಡೆಯುವವರಿಗೆ ಅಷ್ಟೇ ಗಡಸುತನವೂ, ಭಕ್ತರನ್ನು ಕಂಡಾಗ ಅಭಿಮಾನದ, ಸಾಂತ್ವನದ ನುಡಿಗಳು ಹೀಗೆ ವೈವಿಧ್ಯಮಯ. ಆದರೆ ಚಿತ್ತದಲ್ಲಿ ಈ ನುಡಿಗಳ ಕುರುಹನ್ನು, ಪರಿಣಾಮವನ್ನು ಎಂದೂ ಇಟ್ಟುಕೊಳ್ಳರು. ಹಾಗೆಯೇ ಅವರ ಮನದಲ್ಲಿರುವುದನ್ನು ನೇರವಾಗಿ ಕೃತಿಗಳಿಸುವಲ್ಲಿ ಅತ್ಯಂತ ಸಮರ್ಥರು. ಇದು ಸುಲಭ ಸಾಧ್ಯವಲ್ಲ. ಬಸವಾದಿ ಪ್ರಮಥರು ತಮ್ಮ ವಿಚಾರಸರಣಿಯನ್ನು ವಚನಗಳಲ್ಲಿ ಹುದುಗಿಸುತ್ತಿದ್ದ ರೀತಿಯಲ್ಲೇ ಪೂಜ್ಯ ಮಾತಾಜಿಯವರು ತಮ್ಮ ಹೃದಯದಲ್ಲಿನ ಚಿಂತನೆಯನ್ನು ಯಥಾರ್ಥವಾಗಿ ಕೃತಿಗಿಳಿಸಿರುವುದು ಅಪೂರ್ವವಾದುದು. ಆದ್ದರಿಂದಲೇ ಅವರ ಎಲ್ಲ ಸಾಹಿತ್ಯಗಳು ಇತರರ ಸಾಹಿತ್ಯಕ್ಕಿಂತ ಹೆಚ್ಚು ಅನುಭವಪೂರ್ಣವಾದುದು.

ಪೂಜ್ಯ ಮಾತಾಜಿಯವರ ದರ್ಶನಕ್ಕೆ ಬರುವವರ ಸಂಖ್ಯೆಯಂತೂ ದಿನದಿನಕ್ಕೂ ಹೆಚ್ಚುತ್ತಲೇ ಹೋಗುತ್ತಿದೆ. ಅವರಿಗೆ ಇದು ಒಂದು ರೀತಿಯ ಧರ್ಮ ಸಂಕಟ. ಆದರೆ ಬಂದವರೊಡನೆ ಅವರು ಮಾತನಾಡುವ ರೀತಿ ಆಕರ್ಷಣೀಯ, ಅನುಕರಣೀಯ. ಬರುವ ಪ್ರತಿಯೊಬ್ಬ ವ್ಯಕ್ತಿಯೂ ಎರಡೇ ನಿಮಿಷ ಅವರೊಂದಿಗೆ ಮಾತನಾಡಿದರೂ ಸಂತೃಪ್ತಿ ಭಾವ

ಪಡೆಯುವನು. ಪೂಜ್ಯ ಮಾತಾಜಿಯವರು ಬರುವ ಭಕ್ತರ ಕಷ್ಟಸುಖ ವಿಚಾರಿಸಿ ಅವರಲ್ಲಿ ಆತ್ಮವಿಶ್ವಾಸ ಮೂಡಿಸಿ ಕಳಿಸುವ ವಿಧಾನ ಅಪೂರ್ವವಾದುದು. ಭಕ್ತರು, ಅಭಿಮಾನಿಗಳು ಬರುವುದರ ಜೊತೆಗೆ ಕೌಟುಂಬಿಕ ಕಲಹಗಳಿಂದ ಬೇಸತ್ತ ಎಷ್ಟೋ ಜನ ಹೆಣ್ಣುಮಕ್ಕಳಿಗೆ ಪೂಜ್ಯ ಮಾತಾಜಿಯವರು ಧೈರ್ಯ ಆತ್ಮ ವಿಶ್ವಾಸ ತುಂಬಿ ಸಾಂತ್ವಾನದಿಂದ ಅವರ ಉದ್ವೇಗ ಆತಂಕ ಕಡಿಮೆ ಮಾಡಿ ಅವರ ಜೀವನ ಸುಧಾರಿಸಿದ ಘಟನೆಗಳು ಲೆಕ್ಕವಿಲ್ಲದಷ್ಟು.

ಪೂಜ್ಯ ಮಾತಾಜಿಯವರು ಒಂದು ಕ್ಷಣವೂ ಕಾರ್ಯವಿಲ್ಲದೆ ನಿಲ್ಲುವವರಲ್ಲ. ಮಿತಿಮೀರಿದ ಕೆಲಸಗಳನ್ನು ಹಮ್ಮಿಕೊಂಡು ಅದರಲ್ಲಿ ತಲ್ಲೀನರಾಗಿಬಿಡುವರು. ಹಾಗೆ ವಿಪರೀತ ಕೆಲಸಗಳನ್ನು ಹಮ್ಮಿಕೊಂಡಿರುವುದರಿಂದಲೇ ಇದು ಕೂಡಲ ಸಂಗಮವು ದಿವ್ಯ ಕ್ಷೇತ್ರವಾಗಿ, ಪ್ರವಾಸಿ ತಾಣವಾಗಿ ರೂಪುಗೊಳ್ಳುತ್ತಿದೆ. ಅಲ್ಲಿನ ಶರಣರ ಮಂಟಪಗಳು, ಮೂರ್ತಿಗಳು, ಧ್ಯಾನಮಂಟಪ, ಮಹಾಮನೆ, ವಸತಿ ಗೃಹ, ಪುಸ್ತಕ ಭಂಡಾರ ಮಳಿಗೆ, ಶರಣರ ಭಾವಚಿತ್ರ ಪ್ರದರ್ಶನ ಮಳಿಗೆ... ಇತ್ಯಾದಿಗಳನ್ನು ನೋಡಿದಾಗ ಅದು ಕೇವಲ 4-5 ವರ್ಷಗಳಿಂದೀಚೆ ಆದುದೆಂಬುದನ್ನು ಯಾರೂ ನಂಬರು. ಇದು ಪೂಜ್ಯ ಮಾತಾಜಿಯವರ ಕ್ರಿಯಾಶಕ್ತಿಯನ್ನು ತೋರಿಸುವುದು. ಬೆಳಗಿನಿಂದಲೂ ಕಟ್ಟಡಗಳ ನಿರ್ಮಾಣದ ಬಗ್ಗೆ, ನಿರ್ಮಿಸುತ್ತಿರುವ ಶರಣರ ಮೂರ್ತಿಗಳ ಬಗ್ಗೆ, ಪುಸ್ತಕಗಳ ಪ್ರಿಂಟಿಂಗ್‌ನ ಬಗ್ಗೆ, ನಡುವೆ ಬಂದು ಹೋಗುವ ನೂರಾರು ಜನರ ಕಷ್ಟಸುಖ, -ಸಾಂತ್ವಾನ ಇತ್ಯಾದಿಗಳ ಬಗ್ಗೆ, ಅವರ ಊಟ ವಸತಿಗಳ ಬಗ್ಗೆ, ಸಾಧಕರ ಬಗ್ಗೆ, ಕರ್ನಾಟಕ ಹಾಗೂ ಇನ್ನಿತರ ರಾಜ್ಯಗಳಲ್ಲಿ ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ರಾ.ಬ.ದಳ ಗಳ ಬಗ್ಗೆ, ಬೇರೆ ಊರುಗಳಿಗೆ ಪ್ರಚಾರ - ಪ್ರವಚನ ಕಾರ್ಯಕ್ಕೆ ಕಳಿಸಲಾಗಿರುವ ಶಿಷ್ಯರ ಬಗ್ಗೆ..... ಹೀಗೆ ನಾನಾ ತರಹ ವಿಷಯಗಳು ತಲೆ ತುಂಬಿದ್ದರೂ ಅವರ ಲೇಖನಿ ಓಡುತ್ತಿರುತ್ತದೆ. ಪುಟ ಗಟ್ಟಲೆ ಅನುಭಾವ ಸಾಹಿತ್ಯ ಹೊರಹೊಮ್ಮುತ್ತಿರುತ್ತದೆ. ಹೀಗೆ ಎಷ್ಟೇ ಒತ್ತಡದಲ್ಲಿದ್ದರೂ ಅವರು ಗ್ರಂಥಗಳನ್ನು ಚಿತ್ತ ಸಮತೆಯಿಂದ ಬರೆಯಬಲ್ಲರೆಂಬುದು ಎಲ್ಲರೂ ಹುಬ್ಬೇರಿಸುವಂಥ ವಿಚಾರ. ಇದು ಅವರ ಏಕಾಗ್ರತೆಗೆ ಸ್ಥಿತಿಪ್ರಜ್ಞತ್ವಕ್ಕೆ ಒಂದು ಉದಾಹರಣೆಯಷ್ಟೆ. ಅವರದು ಅನುಭವ ಸಾಹಿತ್ಯ, ಅನುಭಾವ ಸಾಹಿತ್ಯ ವಿಶ್ವದ ಜನತೆಗೆ ಸತ್ಯದ ಮಾರ್ಗ ತೋರುವ ಸಾಹಿತ್ಯ, ಸ್ವಾಮಿ ವಿವೇಕಾನಂದರ ಸ್ಥಿತಿಪ್ರಜ್ಞೆ-ಏಕಾಗ್ರತೆಗಳ ಬಗ್ಗೆ ಕೇಳಿದ್ದೇವೆ. ಆದರೆ ಕೆಲಸಗಳ ಒತ್ತಡದಲ್ಲಿಯೂ, ಆ ಕೆಲಸಗಳಿಗೆ ಚ್ಯುತಿಬಾರದಂತೆ ಮಾಡುತ್ತಲೇ, ಸ್ಥಿತ ಪ್ರಜ್ಞೆ ಕಳೆದು ಕೊಳ್ಳದೇ ಸಾಹಿತ್ಯ ರಚನೆಯನ್ನು ಮಾಡುವ ಕಾರ್ಯದಲ್ಲಿ ಪೂಜ್ಯ ಮಾತಾಜಿಯವರು ಅಗ್ರಗಣ್ಯರು. ಗುರು ಬಸವಣ್ಣನವರ ವಚನದಂತೆ

ಮಾಡುವಂತಿರಬೇಕು, ಮಾಡದಂತಿರಬೇಕು
ಮಾಡುವ ಮಾಟದಲ್ಲಿ ತಾನಿಲ್ಲದಿರಬೇಕು.

ಹಾಗೂ ಅಕ್ಕ ಹೇಳುವಂತೆ

ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ ?
ಶಮೆ, ದಮೆ, ಶಾಂತಿ, ಸೈರಣೆಯಿರಲು ಸಮಾಧಿಯ ಹಂಗೇಕಯ್ಯ ?

ಎಂಬಂತೆ, ಪೂಜ್ಯ ಮಾತಾಜಿಯವರು ಸಮಾಜದ ನಡುವೆ ಇದ್ದು, ಸಮಾಜಕ್ಕಾಗಿ ಕಳಕಳಿಯಿಂದ ದುಡಿದು, ಅಂತರಂಗದಲ್ಲಿ ಅದಕ್ಕಂಟದಂತೆ ಆಧ್ಯಾತ್ಮಿಕ ಮಂತ್ರ ಪುರುಷರಾಗಿದ್ದಾರೆಂಬುದರಲ್ಲಿ ಸಂಶಯವಿಲ್ಲ. ಅವರ ಜ್ಞಾನಯುತ ಭಕ್ತಿ, ಕ್ರಿಯಾತ್ಮಕ ಜ್ಞಾನ, ಇವುಗಳೇ ಅವರಿಗೆ ಯೋಗ ಸಾಧನವಾಗಿವೆ ಎಂಬುದು ನಿಸ್ಸಂಶಯ.

ನಾನು ಪೂಜ್ಯ ಮಾತಾಜಿಯವರನ್ನು ಕಂಡುದು 1987 ರಲ್ಲಿ. ಗುರುಗಳ ಬಗ್ಗೆಯಾಗಲೀ, ಆಧ್ಯಾತ್ಮಿಕದ ಬಗ್ಗೆಯಾಗಲೀ ನನ್ನಲ್ಲಿ ಗೌರವ ಭಾವನೆಗಳಿರಲಿಲ್ಲ. ಆದರೆ ಕಲ್ಯಾಣ ಕಿರಣದ ಒಂದು ವಿಚಾರಯುಕ್ತ ಲೇಖನ ನನ್ನನ್ನು ಆಧ್ಯಾತ್ಮಿಕದ ಕಡೆಗೆ ಸೆಳೆಯಿತು. ಏಕದೇವೋಪಾಸನೆ ಬಗ್ಗೆ ಪೂಜ್ಯ ಮಾತಾಜಿಯವರು ಬರೆದ ಲೇಖನ ಅದಾಗಿತ್ತು. ಆನಂತರ ತೀವ್ರವಾದ ಆಸಕ್ತಿಯಿಂದ ದೀಕ್ಷೆ ಪಡೆಯಲು ಬೆಂಗಳೂರಿಗೆ ಧಾವಿಸಿದೆ. ಪೂಜ್ಯ ಮಾತಾಜಿಯವರು ಅಂದು ಸಂಜೆ ಬೇರೆ ಊರಿಗೆ ಹೊರಟಿದ್ದರು. ನಾನು ದೀಕ್ಷೆಗಾಗಿ ಬಂದೆನೆಂದು ತಿಳಿಸಿದಾಗ, ಅವರು ನನಗೋಸ್ಕರ (ಆಗ ಇನ್ನೂ ಸರಿಯಾಗಿ ಪರಿಚಯ ಸಹ ಆಗಿರಲಿಲ್ಲ) ತಮ್ಮ ಪ್ರವಾಸವನ್ನೇ ಮುಂದಕ್ಕೆ (ಮಾರನೇ ದಿನಕ್ಕೆ) ಹಾಕಿದರು. ಅದು ನನಗೆ ಬಹಳ ಆಶ್ಚರ್ಯವೆನಿಸಿತು. ಅವರು ಬೆಳಿಗ್ಗೆ ನೀವು ಬೇಗನೇ ದೀಕ್ಷೆಗೆ ರೆಡಿಯಾಗಿ ಬನ್ನಿರಿ ಎಂದು ಹೇಳಿದರು. ನನ್ನ ಮನಸ್ಸಿನಲ್ಲಿ ಅನೇಕ ತರಹದ ಆಧ್ಯಾತ್ಮಿಕ ಸಂದೇಹ, ಪ್ರಶ್ನೆಗಳು ಮೇಲಿಂದ ಮೇಲೆ ಮೂಡುತ್ತಿದ್ದು ಅದನ್ನು ಕೇಳಿ ಪರಿಹರಿಸಿಕೊಳ್ಳಬೇಕೆಂದು ನಿರ್ಧರಿಸಿದ್ದೆ ಮಾರನೇ ದಿನ ಪೂಜ್ಯ ಮಾತಾಜಿಯವರು, ತಾವು ಪೂಜೆ ಮಾಡಿಕೊಂಡು, ಪೂಜೆ ಮಾಡುವ ವಿಧಾನ ಕಲಿಸಿ ದೀಕ್ಷೆ ನೀಡಿದರು. ಅಂದು ಏನೋ ಸಂತೃಪ್ತಿ ಸಿಕ್ಕಂತಾಯಿತ್ತು. ಆದರೆ ಅನೇಕ ಸಂದೇಹಗಳನ್ನು ಕೇಳಿ ಪರಿಹರಿಸಿಕೊಳ್ಳೋಣವೆಂದರೆ ಏಕೋ ಒಂದು ಮಾತೂ ಹೊರಬರವು. ದೀಕ್ಷೆ ಪಡೆದು ಬಸವ ಮಂಟಪದಿಂದ ಹೊರಟೆ. ಅಂದು ಸಂಜೆ ಮತ್ತೆ ಮತ್ತೆ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕಾಗಿತ್ತು ಎಂದು ಎನಿಸುತ್ತಿತ್ತು. ಆಗ ಇದ್ದಕ್ಕಿದ್ದಂತೆ ನಾನು ಕೇಳಬೇಕೆಂದು ಕೊಂಡಿದ್ದ ಪ್ರಶ್ನೆಗಳಿಗೆ ತನ್ನಿಂದ ತಾನೇ ಉತ್ತರಗಳು ಮನದಲ್ಲಿ ಮೂಡತೊಡಗಿದವು. ನನಗೇ ಆಶ್ಚರ್ಯವಾಗಿತ್ತು. ಇಷ್ಟು ದಿನಗಳು ನನ್ನನ್ನು ಕಾಡಿದ ಈ ಆಧ್ಯಾತ್ಮಿಕ ಸಮಸ್ಯೆಗಳು ಎಷ್ಟು ಸುಲಭವಾಗಿ ಉತ್ತರಗಳು ಸಿಗುತ್ತಿವೆಯಲ್ಲಾ ಎಂದು. ಅಂದು ಮೇಲಿಂದ ಮೇಲೆ ಪ್ರಶ್ನೆ ಹಾಕಿಕೊಂಡರೂ ಉತ್ತರಗಳೂ ತಾವಾಗಿ ಹೊಳೆಯುತ್ತಿದ್ದವು. ಆ ಉತ್ತರಗಳು ಇಂದಿಗೂ ಸರಿಯಾಗೇ ಇರುವುದು ಒಂದು ವಿಶೇಷ.

ಆ ಘಟನೆಯಿಂದ ನನ್ನ ಆಧ್ಯಾತ್ಮಿಕತೆ ಇನ್ನಷ್ಟು ತೀವ್ರವಾಗಿ ಸಾಗಿತೆನ್ನಬಹುದು. ಇದನ್ನು ನೋಡಿದಾಗ ಪೂಜ್ಯ ಮಾತಾಜಿಯವರ ಬಗ್ಗೆ ಬಹಳ ಗೌರವ ಉಂಟಾಯಿತಲ್ಲದೆ ಅವರು ಸಾಮಾನ್ಯರಲ್ಲ ಎಂಬ ಭಾವನೆ ಗಟ್ಟಿಗೊಂಡಿತು. ಇದು ಅವರಲ್ಲಿನ ದಿವ್ಯತೆಗೆ, ದಿವ್ಯಶಕ್ತಿಗೆ ಒಂದು ಜ್ವಲಂತ ಉದಾಹರಣೆ.

ಪೂಜ್ಯ ಮಾತಾಜಿಯವರು ಹುಟ್ಟು ಹೋರಾಟಗಾರರು. ಯಾವ ಪುರುಷನಲ್ಲಿಯೂ ಇಂಥಹ ದಿಟ್ಟತನ ಸಾಧ್ಯವಿಲ್ಲವೆನಿಸುವುದು. ವೀರಶರಣೆ ಅಕ್ಕನಾಗಮ್ಮ, ಕೆಳದಿ ಚೆನ್ನಮ್ಮನ

ತದ್ರೂಪೇ ಮಾತಾಜಿಯವರು ಎಂದರೆ ತಪ್ಪಾಗಲಾರದು. ಅವರು ತಾವು ಹಮ್ಮಿಕೊಂಡ ಕಾರ್ಯದಲ್ಲಿ ಎಂದಿಗೂ ಇಟ್ಟ ಹೆಜ್ಜೆಯನ್ನು ಹಿಂದೆ ಸರಿಸಿಲ್ಲ. ಮಹಾಚೈತ್ರದ ವಿರುದ್ಧ ಅವರು ಆ ಪುಸ್ತಕವನ್ನು ಪಠ್ಯಕ್ರಮದಿಂದ ತೆಗೆಯುವವರೆಗೂ ಮಾಡಿದ ಹೋರಾಟ ಒಂದು ನಿದರ್ಶನವಷ್ಟೆ. ಒಂದು ಹಂತದಲ್ಲಿ ಸರ್ಕಾರ ರಾ.ಬ.ದಳದ ಒತ್ತಡಕ್ಕೆ ಮಣಿಯದು ಎಂಬ ಭಾವನೆ ಎಲ್ಲರಲ್ಲೂ ಮೂಡಿತ್ತು. ಆದರೆ ಮಾತಾಜಿಯವರು ಎಂಥ ಸಂದರ್ಭದಲ್ಲೂ ಹೋರಾಟ ಹಿಂತೆಗೆಯದಂತೆ ಅದನ್ನು ರದ್ದು ಮಾಡುವವರೆಗೂ ಛಲ ತೊಡುವಂತೆ ಪ್ರೇರಣೆ ನೀಡಿದರು. ಧರ್ಮ ಗುರುವಿನ ವಿರುದ್ಧ ಕೀಳು ಮನೋಭಾವ ಚಿತ್ರಿಸುವ "ಆ ಪುಸ್ತಕ ರದ್ದಾಗದಿದ್ದರೆ ನಾನು ಬದುಕಿ ಏನು ಪ್ರಯೋಜನ"? ಎಂಬ ಮಾತು ಅವರಲ್ಲಿ ಆಗಾಗ್ಗೆ ಬರುತ್ತಿತ್ತು. ಪೂಜ್ಯ ಮಾತಾಜಿಯವರ ಹೋರಾಟಕ್ಕೆ ಸರ್ಕಾರ ಮಣಿಯಲೇ ಬೇಕಾಗಿಬಂತು. ಮಹಾ ಚೈತ್ರ ರದ್ದಾಯಿತು. ಇದರ ಜೊತೆಗೇ ಪೂಜ್ಯ ಮಾತಾಜಿಯವರ ಹೋರಾಟ ಕೆಲವು ಸಂಘ ಸಂಸ್ಥೆಗಳಿಂದ ಹಿಡಿದು ಮೇಲ್ನೋಟಕ್ಕೆ ಬಸವಣ್ಣನವರ ಹೆಸರು ಹೇಳಿಕೊಳ್ಳುತ್ತ ಒಳಗೊಳಗೇ ದ್ರೋಹ ಬಗೆಯುವ ಮಠಾಧೀಶರ ವಿರುದ್ಧ ಲೇಖನಿ ಸಮರವೂ ಒಂದೇ ಸಮನೆ ಮುಂದುವರಿದಿತ್ತು. ಇದರಿಂದ ಜನತೆಗೆ ಪೂಜ್ಯ ಮಾತಾಜಿಯವರ ವ್ಯಕ್ತಿತ್ವ ಇನ್ನಷ್ಟು ವೃದ್ಧಿಯಾಯಿತೆಂಬುದನ್ನು ಮತ್ತೆ ಬೇರೆ ಹೇಳಬೇಕಾಗಿಲ್ಲ.

ಪೂಜ್ಯ ಮಾತಾಜಿಯವರ ಧರ್ಮದ ಮೇಲಿನ ಕಳಕಳಿಯು ಉತ್ಕಟವಾಗಿದ್ದು ಈ ಧರ್ಮ ಇನ್ನು ನಶಿಸದಂತೆ ಹಾಗೂ ಹಂತ ಹಂತವಾಗಿ ಸುಸಂಘಟಿತವಾಗುವಂತೆ ಅನೇಕ ರೀತಿಯ ಯೋಜನೆಗಳನ್ನು ಅವರು ರೂಪಿಸಿದ್ದು ಅವು ಕಾರ್ಯಗತವಾಗುತ್ತಿದೆ. ಲಿಂಗಾಯುತ ಧರ್ಮಕ್ಕೆ ಅವರು ಕೊಟ್ಟ ಅಮೂಲ್ಯ ಕಾಣಿಕೆ "ಪ್ರಾರ್ಥನೆ". ಪ್ರಾರ್ಥನೆ ಮೂಲಕ ವೈಯಕ್ತಿಕ ಹಾಗೂ ಸಂಘಟನಾತ್ಮಕ ಉದ್ಧಾರಕ್ಕೆ ಒತ್ತುಕೊಟ್ಟರು. ಅವರ ಹೃನ್ಮಂದಿರದಲ್ಲಿ ಮೂಡಿ ಬಂದು ಈಗ ದಕ್ಷಿಣ ಭಾರತದಾದ್ಯಂತ ಬೆಳೆಯುತ್ತಿರುವ ರಾಷ್ಟ್ರೀಯ ಬಸವ ದಳ ಅತ್ಯುತ್ತಮ ಧಾರ್ಮಿಕ ಸಂಘಟನೆ. ಇದಲ್ಲದೆ ಲಿಂಗಾಯತ ಧರ್ಮ ಮಹಾಸಭಾ, ಬಸವ ಧರ್ಮ ಸಮ್ಮೇಳನಗಳು, ಗಣ ಮೇಳ, ಶರಣರ ಜಯಂತ್ಯೋತ್ಸವಗಳು, ಸಂಜೆ ಪ್ರಾರ್ಥನೆಯ ನೆನಹು ಎಲ್ಲಕ್ಕೂ ಮಿಗಿಲಾಗಿ ಶರಣ ಮೇಳ- ಎಲ್ಲವೂ ಪೂಜ್ಯ ಮಾತಾಜಿಯವರ ಕೊಡುಗೆ. ಈಗ ಬಸವ ಭಕ್ತರು ಪೂಜ್ಯ ಮಾತಾಜಿವರಿಂದ ನಿರೀಕ್ಷಿಸುತ್ತಿರುವುದು ಧರ್ಮಗ್ರಂಥವನ್ನು. ಬಹುಶಃ ಧರ್ಮ ಗ್ರಂಥವು ಹೊಸ ಕ್ರಾಂತಿಯನ್ನೇ ಮಾಡಿ ಜನರನ್ನು ಎಚ್ಚರಿಸುವುದರಲ್ಲಿ ಸಂಶಯವಿಲ್ಲ.

ದಿನಾಂಕ 13-1-1996 ರಂದು ಬಸವ ಧರ್ಮದ ಪರಮೋಚ್ಚ ಪೀಠಕ್ಕೆ (ಅವರ ಜ್ಞಾನ ಶಕ್ತಿಯದ್ಯೋತಕ) ಅತ್ಯಂತ ಮೆರುಗು ನೀಡುವಂಥ ಪೂಜ್ಯ ಮಾತಾಜಿಯವರು ಆರೋಹಣ ಮಾಡುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯ. ಈ ಸಂದರ್ಭದಲ್ಲಿ ಅವರಿಗೆ ವಿಶ್ವ ಗುರು ಬಸವಣ್ಣನವರು ಹೆಚ್ಚಿನ ಆರೋಗ್ಯ ಆಯುಷ್ಯವನ್ನು ನೀಡಲಿ ಎಂದು ಪ್ರಾರ್ಥಿಸುವೆ.

— ವಿಜಯಾನಂದ

ಬಸವ ಮಂಟಪ, ಬೆಂಗಳೂರು

ರಾಷ್ಟ್ರೀಯ ಬಸವ ದಳಗಳವರಿಂದ

ಗುರು ವಂದನ ಮತ್ತು ಪಥ ಸಂಚಲನ

ಬಸವ ಕ್ರಾಂತಿ ದಿನದಂದು ದಿನಾಂಕ 14-1-1996 ಬೆಳಿಗ್ಗೆ ಧ್ವಜವಂದನ ಮತ್ತು ಪಥ ಸಂಚಲನ ಕಾರ್ಯಕ್ರಮವಿರುತ್ತದೆ. ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಧ್ವಜಾರೋಹಣ ನಂತರ ಬಸವ ಜ್ಯೋತಿಯ ಉದ್ದೀಪನವನ್ನು ಮಾಡಲಿದ್ದಾರೆ. ಬಸವ ಜ್ಯೋತಿ ದರ್ಶನದ ನಂತರ ಗುರುವಂದನ ಕಾರ್ಯಕ್ರಮವಿರುತ್ತದೆ. ಇದು ಶಿಸ್ತು ಮತ್ತು ಸಂಘಟನೆಗಳನ್ನು ಪ್ರದರ್ಶಿಸುವ ಮಹತ್ವದ ಸ್ಫೂರ್ತಿದಾಯಕ ಕಾರ್ಯಕ್ರಮ. ಆದ್ದರಿಂದ ಎಲ್ಲಾ ರಾಷ್ಟ್ರೀಯ ಬಸವ ದಳಗಳವರು ಸಾಲಾಗಿ ಬಿಳಿವಸ್ತ್ರವನ್ನುಟ್ಟು ಮೇಲೆ ಕಾವಿಯ ಸ್ಕಾರ್ಫನ್ನು ಹೊದ್ದು ಈ ಗುರುವಂದನ ಮತ್ತು ಪಥಸಂಚಲನದಲ್ಲಿ ಭಾಗವಹಿಸಬೇಕು. ಪ್ರತಿ ರಾಷ್ಟ್ರೀಯ ಬಸವ ದಳದವರು ತಮ್ಮ ತಮ್ಮ ರಾಷ್ಟ್ರೀಯ ಬಸವ ದಳಗಳ ಬ್ಯಾನರ್ ಸಿದ್ಧಪಡಿಸಿಕೊಂಡು ಬರಬೇಕು ಇದನ್ನು ಸರಿಯಾಗಿ ಕಾಯ್ದಿಟ್ಟುಕೊಂಡು ಬೇರೆ ಕಾರ್ಯಕ್ರಮಗಳಲ್ಲಿಯೂ ಉಪಯೋಗಿಸ-ಬಹುದು. ಬ್ಯಾನರಿನಲ್ಲಿ ಬರೆಸಬೇಕಾದ ವಿಷಯ ವಿವರ, ಹೀಗಿದೆ.



॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

ರಾಷ್ಟ್ರೀಯ ಬಸವ ದಳ,

ಶಿವಮೊಗ್ಗ.

ಶರಣ ಮೇಳಕ್ಕೆ ಜಯವಾಗಲಿ



ಒಳ್ಳೆಯ ಕಲಾವಿದರು ಇದ್ದರೆ ಬಸವಣ್ಣನವರ ಭಾವಚಿತ್ರ ಒಂದು ಬದಿಗೆ. ಬಸವೇಶ್ವರ ಐಕ್ಯಮಂಟಪ ಇನ್ನೊಂದು ಬದಿಗೆ ಬರೆಸಬಹುದು. ಅಂಥ ಒಳ್ಳೆಯ ಕಲಾವಿದರು ಸಿಕ್ಕದೆ ಇದ್ದರೆ ಕೇವಲ ಅಕ್ಷರಗಳನ್ನು ಬಟ್ಟೆಯ ಬ್ಯಾನರಿನಲ್ಲಿ ಬರೆಸಿದರೂ ಸಾಕು.

ಪಥ ಸಂಚಲನದಲ್ಲಿ ಭಾಗವಹಿಸುವ ರಾಷ್ಟ್ರೀಯ ಬಸವ ದಳಗಳವರು ದಿನಾಂಕ 12 ಮತ್ತು 13 ರಂದು ನಮ್ಮ ಬಳಿ ಹೆಸರನ್ನು ಬರೆಸಿ ವಿವರಗಳನ್ನು ಪಡೆದುಕೊಳ್ಳಬೇಕು. ಯಾವುದೇ ಸಂಕೋಚವಿಲ್ಲದೆ ದೊಡ್ಡವರು–ಸಣ್ಣವರು ಎಲ್ಲರೂ ಸಹೋದರ ಭಾವನೆಯಿಂದ ಗುರುವಂದನ ಮತ್ತು ಪಥಸಂಚಲನದಲ್ಲಿ ಭಾಗವಹಿಸಬೇಕೆಂದು ಕೋರುವೆವು.

ಸ್ವಯಂ ಸೇವಕರ ಸೇವೆ

ಧರ್ಮಗುರುವಿನ ಸೇವೆಯನ್ನು ತನು–ಮನ–ಧನಗಳಿಂದ ಮಾಡಬೇಕಾದುದು ಅತ್ಯಂತ ಅಗತ್ಯ. ಆದ್ದರಿಂದ ತನು ದಾಸೋಹ ಮಾಡಲು ರಾಷ್ಟ್ರೀಯ ಬಸವ ದಳಗಳವರು ಹೆಚ್ಚು ಹೆಚ್ಚು ಸ್ವಯಂಸೇವಕರನ್ನು ಕಳಿಸುವುದು ಅಗತ್ಯವಿದೆ. ಈಗಾಗಲೇ ಶರಣ ಮೇಳದ ಅಚ್ಚುಕಟ್ಟು ಒಳ್ಳೆಯ ಹೆಸರು ಪಡೆಯಲು ನಿಸ್ವಾರ್ಥಿಗಳಾದ ತನು ದಾಸೋಹಿಗಳ 'ಕಾಯಸೇವೆ'ಯೇ ಕಾರಣ. ಆದ್ದರಿಂದ ಹೆಚ್ಚು ಹೆಚ್ಚು ಕಾರ್ಯಕರ್ತರನ್ನು ಕಳಿಸಲು ರಾಷ್ಟ್ರೀಯ ಬಸವ ದಳ–ದವರು ಸಿದ್ಧತೆ ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ಬಸವಕುಮಾರ್ ಪಾಟೀಲ

ಡಿ. ಎಸ್. ವಿಜಯಕುಮಾರ್

ಕಲ್ಯಾಣ ಕಿರಣ KRNB 312/BGW 92 ಡಿಸೆಂಬರ್ 1995



ಬಸವ ಧರ್ಮದ ದ್ವಿತೀಯ ಮಹಾ ಜಗದ್ಗುರುಗಳಾದ
ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರು